ರಂಜನೆ ಬೋಧನೆ ಪ್ರಚೋದನೆ
ಲಂಕೇಶ್
ನವೆಂಬರ್ 4, 2009 ರೂ. 12/-

PDO
ಬಿಜೆಪಿಗಳಿಂದ
ಬಿಜೆಪಿಗಳಿಗಾಗಿ



ಲವ್ ಜಿಹಾದ್ ಸನ್ನಿ

ಬಲಿಯಾದವಳು 'ನಕ್ಸಲ್'

ಖಾಕಿ ಚೆಡ್ಡಿ-ಪ್ಯಾಂಟ್ ಕಳಚಿದ ಕಿಲ್ಲರ್


ಸರಣಿ ಹಂತಕನ ಲವ್ ಜಿಹಾದ್

ಇಸ್ಕಾನ್ ಅಕ್ಕಿಕಳ್ಳರು



ಬಿಟಿ ಬದನೆ – ನಾಟಿ ವೇದನೆ!

ಬಿಟಿ ಬದನೆಯಿಂದ ಆಗುವ ಪರಿಣಾಮಗಳನ್ನು ತಡೆಗಟ್ಟಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೆಯೇ ಸರ್ಕಾರ ನಮ್ಮ ತಟ್ಟೆಯಲ್ಲಿ ಬದನೆ ಬಜ್ಜಿ ಬಡಿಸುತ್ತಿದೆ. ಏನನ್ನು ತಿನ್ನಬೇಕು ಏನನ್ನು ತಿನ್ನಬಾರದೆಂಬುದು ಸಹ ಈ ದೇಶದ ಜನರ ಹಕ್ಕು. ಆದರೆ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಸರ್ಕಾರ ರೈತಾಪಿಯ ಮತ್ತು ಜನತೆಯ ಬದುಕನ್ನೇ ಮಾರಾಟ ಮಾಡುತ್ತಿದೆ. ಹೀಗಾಗಿ ರಾಜತಾಂತ್ರಿಕ ಕಾರಣಕ್ಕಾಗಿ ಅಲ್ಲ, ಬಾಳಿ ಬದುಕುವ ಹಕ್ಕಿಗಾಗಿಯೇ ಸರ್ಕಾರದ ಈ ದಲ್ಲಾಳಿ ನೀತಿಯನ್ನು ಸಾರಾಸಗಟಾಗಿ ವಿರೋಧಿಸಬೇಕಿದೆ.



ಕಳೆದ ಅಕ್ಟೋಬರ್ 14ರಂದು ಭಾರತ ಸರ್ಕಾರದ ಜೆನಿಟಿಕ್ ಇಂಜಿನಿರಿಂಗ್ ಅಪ್ರೂವಲ್ ಕಮಿಟಿಯು (Genetic Engineering Approval Committee- GECA) ಭಾರತದಲ್ಲಿ ಬಿಟಿ ಬದನೆಯನ್ನು ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲು ತನ್ನ ತಾಂತ್ರಿಕ ಒಪ್ಪಿಗೆ ನೀಡಿದೆ. ಇನ್ನು ಪರಿಸರ ಇಲಾಖೆ ಅದಕ್ಕೆ ತನ್ನ ಸಮ್ಮತಿ ಮುದ್ರೆ ಒತ್ತಿದ ಕೂಡಲೇ ಭಾರತದಲ್ಲಿ ಬಿಟಿ ಬದನೆಯ ಬೆಳೆ ಎಲ್ಲೆಡೆ ಪ್ರಾರಂಭವಾಗಲಿದೆ. ಆದರೆ ಪರಿಸರವಾದಿಗಳು ಮತ್ತು ಹಲವಾರು ರೈತ ಸಂಘಟನೆಗಳು ಈ ಬಿಟಿ ಕೃಷಿಯ ವಿರುದ್ಧ ತೀವ್ರವಾದ ಹೋರಾಟವನ್ನೇ ನಡೆಸುತ್ತಿವೆ. ಬಿಟಿ ಬದನೆಗೆ ಅವಕಾಶ ಕೊಟ್ಟರೆ ನಾಟಿ ತಳಿಗಳು ಮಾತ್ರವಲ್ಲ ನಾಟಿ (ದೇಸಿ) ಬದುಕೇ ನಾಶವಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿವೆ. ಆದರೆ ಬಿಟಿ ಬದನೆಯ ಸಂಪೂರ್ಣ ಹಕ್ಕುಸ್ವಾಮ್ಯ ಹೊಂದಿರುವ ಮಹಾರಾಷ್ಟ್ರದ ಮಹಿಕೋ (ಮಹಾರಾಷ್ಟ್ರ ಹೈಬ್ರೀಡ್ ಸೀಡ್ಸ್ ಕಂಪನಿ-ಮಹಿಕೊ) ಎಂಬ ಬೀಜ ಕಂಪನಿ ಮತ್ತು ಅದಕ್ಕೆ ಈ ಬಿಟಿ ತಂತ್ರಜ್ಞಾನ ಪೂರೈಸಿದ ಅಮೆರಿಕದ ದೈತ್ಯ ಕೃಷಿ ಕಂಪನಿಯಾದ ಮಾನ್ಸಾಂಟೋಗಳು ಮಾತ್ರ ಬಿಟಿ ಬದನೆಯಿಂದ ಏನೇನೂ ತೊಂದರೆ ಇಲ್ಲವೆಂದು ಪ್ರಚಾರ ಮಾಡುತ್ತಾ ಸರ್ಕಾರದ ಮೇಲೆ ಒತ್ತಡ ಹಾಕುತ್ತಲೇ ಬಂದಿದ್ದವು.. ಕರ್ನಾಟಕದ ಧಾರವಾಡ ಕೃಷಿ ವಿಶ್ವವಿದ್ಯಾಲಯ ಬಿಟಿ ಬದನೆಯ ಕ್ಷೇತ್ರಾಧ್ಯಯನಕ್ಕೆ ತನ್ನ ನೆಲವನ್ನು ಕೊಟ್ಟಿತ್ತು ಮತ್ತು ಮಹಿಕೋ ಬೀಜ ಕಂಪನಿ ಈ ಪ್ರಚಾರಕ್ಕೆ ಹಿಮ್ಮೇಳ ನೀಡಿತ್ತು. ಕೊನೆಗೂ ಸರ್ಕಾರದ ಕಿವಿಗೆ ತಟ್ಟಿದ್ದು ಮೊನ್ಸಂಟೋ-ಮಹಿಕೋಗಳ ಅಬ್ಬರದ ಪ್ರಚಾರಗಳೇ ವಿನಃ ರೈತಾಪಿಯ ಆರ್ತಧ್ವನಿಗಳಲ್ಲ!




ಸರ್ಕಾರ ಕೇವಲ ಬಹುರಾಷ್ಟ್ರೀಯ ಕಂಪನಿಗಳ ಒಕ್ಕಲಾಗುತ್ತಿರುವುದು ಇದೇ ಮೊದಲೇನಲ್ಲವಾದರೂ ಬಿಟಿ ಕೃಷಿಯಿಂದ ಆಗಬಹುದಾದ ದುರಂತದ ಪ್ರಮಾಣವನ್ನು ನೆನಸಿಕೊಂಡರೆ ಸರ್ಕಾರದ ದ್ರೋಹದ ಪ್ರಮಾಣ ಹಿಮಾಲಯಕ್ಕಿಂತಲೂ ದೊಡ್ಡದೆಂಬುದು ಅರ್ಥವಾಗುತ್ತದೆ. ಭಾರತವು ಹಸಿರುಕ್ರಾಂತಿಯೆಂಬ ರೈತಾಪಿಯ ಉಸಿರನ್ನೇ ನಿಧಾನವಾಗಿ ಕಿತ್ತುಕೊಂಡ ಕೃಷಿಯನ್ನು ಅನುಸರಿಸಲು ಪ್ರಾರಂಭಿಸಿದ ಮೇಲೆ ರೈತ ಬೆಳೆದ ಬೆಳೆಗೆ ಈವರೆಗೆ ಕಂಡು ಕೇಳರಿಯದ ರೋಗಗಳು, ಕ್ರಿಮಿ-ಕೀಟಗಳು ಬಾಧಿಸಲಾರಂಭಿಸಿದವು. ಹೈಬ್ರೀಡ್ ಬೀಜವನ್ನು ಕೊಟ್ಟು ರೈತಾಪಿಯನ್ನು ಹಸಿರು ಕ್ರಾಂತಿಗೆ ದೂಡಿದ ಮಾನ್ಸೊಂಟೊ, ಸಿಬಾ-ಗೈಗಿ, ಎಲಿ-ಲಿಲ್ಲಿ ಫೋರ್ಡ್‌ನಂಥ ಕಂಪನಿಗಳೆ ಆಗ ಕ್ರಿಮಿನಾಶಕಗಳನ್ನು ಮಾರಿದವು. ಹಸಿರು ಕ್ರಾಂತಿಯಿಂದುಂಟಾದ ಪರಿಸರ ಅಸಮತೋಲನದಿಂದಾಗಿ ಈವರೆಗೆ ದೇಸೀ ಕೃಷಿಯಲ್ಲಿ ಸಹಜವಾಗೇ ಇದ್ದ ಕ್ರಿಮಿ ಮತ್ತು ಕೀಟನಾಶಕ ವ್ಯವಸ್ಥೆಗಳು ನಾಶವಾಗಿದ್ದರಿಂದ ರೈತ ಅನಿವಾರ್ಯವಾಗಿ ದುಬಾರಿ ಬೆಲೆ ತೆತ್ತು ತನ್ನ ಕೃಷಿ ಪದ್ಧತಿಯನ್ನು ನಾಶ ಮಾಡಿದ ಕಂಪನಿಗಳಿಂದಲೇ ಕ್ರಿಮಿ ಮತ್ತು ಕೀಟನಾಶಕಗಳನ್ನು ಕೊಳ್ಳುವಂತಾಯಿತು. ಹೀಗೆ ಹೆಚ್ಚಿನ ಬೆಳೆ ಬರುತ್ತದೆಂಬ ಆಸೆಗೆ ರೈತ ಹೈಬ್ರೀಡ್ ಕೃಷಿಗೆ ತನ್ನ ಇದ್ದಬದ್ದ ಉಳಿತಾಯವನ್ನೆಲ್ಲಾ ಸುರಿಯುತ್ತಲೇ ಹೋದ. ಹೀಗಾಗಿಯೇ ಕಳೆದ ಮೂರೂವರೆ ದಶಕಗಳಲ್ಲಿ ಉತ್ಪಾದನೆ ಹೆಚ್ಚಾಗುತ್ತಿದ್ದರೂ ರೈತ ಮಾತ್ರ ಬರ್ಬಾದಾಗುತ್ತಲೇ ಹೋಗುತ್ತಿದ್ದಾನೆ.

ಆದರೆ ಕಳೆದ ಒಂದು ದಶಕದದಿಂದ ಹಸಿರು ಕ್ರಾಂತಿಯ ಕೃಷಿ ವ್ಯವಸ್ಥೆಯು ಅಧಿಕ ಬೆಳೆಯನ್ನೂ ನೀಡುತ್ತಿಲ್ಲ ಮತ್ತು ಈ ಕಂಪನಿಗಳು ನೀಡುತ್ತಿದ್ದ ಕ್ರಿಮಿ ಮತ್ತು ಕೀಟನಾಶಕಗಳನ್ನು ಯಾವ ಪ್ರಮಾಣದಲ್ಲಿ ಗದ್ದೆಗೆ ಸುರಿದರೂ ಬೆಳೆಗೆ ಹತ್ತಿದ ರೋಗ ಮಾತ್ರ ಗುಣವಾಗುತ್ತಿಲ್ಲ. ಹೀಗಾಗಿ ಜಗತ್ತಿನೆಲ್ಲೆಡೆ ರೈತಾಪಿ ತನ್ನ ಹಳೆಯ ಕೃಷಿ ಪದ್ಧತಿಯೆಡೆಗೆ ಮರಳುವುದು ಸೂಕ್ತ ಎಂಬುದನ್ನು ಅನುಭವದಿಂದ ಕಲಿಯುತ್ತಿದ್ದಂತೆ ಜಗತ್ತಿನ ಕೃಷಿ ಬಹುರಾಷ್ಟ್ರೀಯ ಕಂಪನಿಗಳು ರೈತಾಪಿಯನ್ನು ತಮ್ಮ ತೆಕ್ಕೆಯಲ್ಲೇ ಹಿಡಿದಿರಿಸಿಕೊಳ್ಳಲು ಮತ್ತೊಂದು ಮಾಯಾ ಬಲೂನನ್ನು ತೇಲಿಬಿಟ್ಟವು. ಅದೇ ಈ ಜೆನಿಟಿಕಲಿ ಇಂಜನಿಯರ್ಡ್ ಬೀಜಗಳು. ಇದನ್ನು ಎರಡನೇ ಹಸಿರುಕ್ರಾಂತಿಯೆಂದೂ ಬಹುರಾಷ್ಟ್ರೀಯ ಕಂಪನಿಗಳು, ಭಾರತದಂಥ ಸರ್ಕಾರಗಳು ಮತ್ತು ಡಾ. ಎಂ.ಎಸ್. ಸ್ವಾಮಿನಾಥನ್‌ರಂಥ ಪ್ಯಾರಾಸೈಟಿಕ್ ಕೃಷಿ ವಿಜ್ಞಾನಿಗಳು ಹಾಡಿಹೊಗಳುತ್ತಿದ್ದಾರೆ.

ಈ ತಂತ್ರಜ್ಞಾನದಲ್ಲಿ ಒಂದು ತಳಿಯ ವಂಶವಾಹಿ ಕಣಗಳಿಗೆ (ಜೀನ್‌ಗಳಿಗೆ) ಮತ್ತೊಂದು ಜೀವದ ವಂಶವಾಹಿಯನ್ನು ಕಸಿ ಮಾಡುತ್ತಾರೆ. ಆದ್ದರಿಂದಲೇ ಇದಕ್ಕೆ ಜೆನಿಟಿಕಲಿ ಇಂಜನಿಯರ್ಡ್ ಎಂಬ ಹೆಸರೂ ಬಂದಿದೆ. ಈ ಕಂಪನಿಗಳ ಪ್ರಕಾರ ಒಂದು ತಳಿಯ ವಂಶವಾಹಿಯ ಗುಣಗಳಿಗೆ ಮತ್ತೊಂದು ಜೀನಿನ ರೋಗ ನಿರೋಧಕ ಅಥವಾ ಅಧಿಕ ಬೆಳೆಯ ಗುಣಾಂಶಗಳನ್ನು ಕಸಿ ಮಾಡಿದರೆ ಅಧಿಕ ಬೆಳೆಯೂ ಸಿಗುವುದಲ್ಲದೆ ತನ್ನಂತೆ ತಾನೆ ಅದು ಕ್ರಿಮಿ ಮತ್ತು ಕೀಟ ನಿರೋಧಕ ಗುಣಗಳನ್ನೂ ಹೊಂದುತ್ತದೆ. ಉದಾಹರಣೆಗೆ ಬದನೆ ಜೀವವಾಹಿಗೆ Bacillus thuringiensis (Bt) ಎಂಬ ಮಣ್ಣಿನಲ್ಲಿರುವ ಬ್ಯಾಕ್ಟೀರಿಯಾವನ್ನು ಕಸಿ ಮಾಡಲಾಗುತ್ತದೆ. ಇದರಿಂದಾಗಿ ಆ ಬದನೆಗೆ ಬಿಟಿ ಬದನೆಯೆಂದು ಕರೆಯಲಾಗುತ್ತದೆ. ಈ ಬ್ಯಾಕ್ಟೀರಿಯಾ ಬದನೆಯ ವಂಶವಾಹಿಯಲ್ಲೇ ಇರುವ ಕಾರಣದಿಂದ ಬಿಟಿ ಬದನೆ ಬೆಳೆದ ಹೊಲಗಳಿಗೆ ಕ್ರಿಮಿ ನಾಶಕಗಳ ಅಗತ್ಯ ಬೀಳುವುದಿಲ್ಲ, ಆದ್ದರಿಂದ ಈ ಕಂಪನಿಗಳ ಪ್ರಕಾರ ಬಿಟಿ ಬದನೆಯನ್ನು ಬೆಳೆಯುವುದರಿಂದಲೇ ಭಾರತ ಸರ್ಕಾರಕ್ಕೆ 2000 ಕೋಟಿ ರೂ. ಲಾಭವಾಗುತ್ತದೆ ಮತ್ತು ಬೆಳೆಯ ಪ್ರಮಾಣ ಅಧಿಕವಾಗುವುದರಿಂದ ಮತ್ತು ಕ್ರಿಮಿನಾಶಕಗಳ ಮೇಲಿನ ಖರ್ಚು ಕಡಿಮೆಯಾಗುವುದರಿಂದ ಪ್ರತಿ ರೈತನಿಗೆ ಪ್ರತಿ ಎಕರೆಗೆ ಏನಿಲ್ಲವೆಂದರೂ 16-20,000ರೂ ಲಾಭವಾಗುತ್ತದೆ ಎಂದು ಬೊಗಳೆ ಬಿಡುತ್ತಿದ್ದಾರೆ.

ಈ ಕಂಪನಿಗಳ ವಾದದ ಪ್ರಕಾರವೇ ಹೋದರೆ ಬಿಟಿ ಬದನೆ ಬೆಳೆದವರೆಲ್ಲಾ ಇನ್ನು ಕೆಲವೇ ವರ್ಷಗಳಲ್ಲಿ ಶ್ರೀಮಂತರಾಗಿಬಿಡಬೇಕು! ಕೆಲವು ವರ್ಷಗಳ ಹಿಂದೆ





2002ರಲ್ಲಿ ದೇಶದಲ್ಲಿ ಬಿಟಿ ಹತ್ತಿಯನ್ನು ಪರಿಚಯಿಸಿದಾಗಲೂ ದೇಶದ ಹತ್ತಿ ಬೆಳೆಗಾರರು ಇನ್ನು ಮುಂದೆ ಸುಖದ ಸುಪ್ಪತಿಗೆಯ ಮೇಲೆ ಮಲಗುತ್ತಾರೆ ಎಂದು ಪ್ರಚಾರ ಮಾಡಲಾಗಿತ್ತು. ಆದರೆ 2002-2008ರ ಅವಧಿಯಲ್ಲಿ ಮಹಾರಾಷ್ಟ್ರದ ವಿದರ್ಭದಲ್ಲಿ ಬಿಟಿ ಹತ್ತಿಯನ್ನು ಬೆಳೆಯುತ್ತಿದ್ದ 20,000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ! ಏಕೆಂದರೆ ಬಿಟಿ ಹತ್ತಿಯಿಂದ ಕ್ರಿಮಿಗಳ ಕಾಟವೂ ತಪ್ಪಲಿಲ್ಲ, ಬೆಳೆಯೂ ಹೆಚ್ಚಲಿಲ್ಲ, ಬಿಟಿ ಹತ್ತಿ ಬೀಜದ ಬೆಲೆಯೂ ಕಮ್ಮಿಯಾಗಲಿಲ್ಲ! ಅದೇ ರೀತಿ ದೂರದ ಜಾರ್ಜಿಯಾದಲ್ಲೂ ಬಿಟಿ ಆಲೂಗಡ್ಡೆ ಬೆಳೆಯಲ್ಲಿ ಕಂಪನಿಗಳು ಘೋಷಿಸಿಕೊಂಡಿದ್ದಕ್ಕಿಂತ ಅರ್ಧಕ್ಕಿಂತ ಕಡಿಮೆ ಇಳುವರಿಯಷ್ಟೇ ಬಂದಿದೆ.

ಇದೇ ವಾಸ್ತವ. ಕೇವಲ ಲಾಭದ ದೃಷ್ಟಿಯಿಂದ ಜಗತ್ತಿನ ಕೃಷಿ ವಾತಾವರಣವನ್ನೇ ಕಲುಷಿತಗೊಳಿಸಿದ ಕೃಷಿ ಕಂಪನಿಗಳೇ ಈಗ ಮತ್ತೊಂದು ಸುಂದರ ಜೇಡರ ಬಲೆಯನ್ನು ನೇಯುತ್ತಾ ರೈತಾಪಿಯನ್ನು ಬಲಿಮಾಡಲು ಹೊರಟಿವೆ. ವಾಸ್ತವವಾಗಿ ಈ ಜೆನಿಟಿಕಲಿ ಇಂಜನಿಯರ್ಡ್ ತಂತ್ರಜ್ಞಾನದಲ್ಲಿ ಒಂದು ಬಗೆಯ ಸಸ್ಯಗಳ ಜೀವವಾಹಿಗೆ ಮತ್ತೊಂದು ತಳಿಯ ಜೀವವಾಹಿಯನ್ನು ಅಥವಾ ಸಸ್ಯಗಳ ಜೀವವಾಹಿಗೆ ಪ್ರಾಣಿಗಳ ಜೀವವಾಹಿಯನ್ನು ಕಸಿ ಮಾಡಲಾಗುತ್ತದಾದ್ದರಿಂದ ಸುತ್ತಮುತ್ತಲಿನ ಜೀವ ಸಂಕುಲದ ಮೇಲೆ ಮತ್ತು ಪರಿಸರದ ಸಮತೋಲನದ ಮೇಲೆ ತೀವ್ರತರವಾದ ದುಷ್ಪರಿಣಾಮಗಳಾಗುತ್ತವೆಂದು ಹೇಳಲಾಗುತ್ತದೆ. ಆದರೆ ಜಗತ್ತಿನ ಯಾವುದೇ ಸರ್ಕಾರ ಈವರೆಗೆ ಇದರಿಂದ ಜೀವ ಪರಿಸರದ ಮೇಲೆ ...ಆಗಬಹುದಾದ ಅನಾಹುತಗಳೇನೆಂಬುದನ್ನೇ ಇನ್ನೂ ಸರಿಯಾಗಿ ಅಧ್ಯಯನ ಮಾಡಿಲ್ಲ, ಅದನ್ನು ಜಾರಿಗೆ ತರುವ ಮುನ್ನ ಯಾವ ರೀತಿಯ ಬಯೋ ಸೇಫ್ಟಿ

▸▸▸15

ನೋ ಕಾಮೆಂಟ್ಸ್

"ನಾನು ಕಾರ್ಪೋರೇಟ್ ಉದ್ಯಮಪತಿಗಳ ಸಂಬಳದ ವಿಷಯವನ್ನು ಚರ್ಚೆಗೆ ತಂದಿರುವ ಮೂಲಕ ಅವರಿಗೆ ಸಹಾಯವನ್ನೇ ಮಾಡುತ್ತಿದ್ದೇನೆ."

- ಸಲ್ಮಾನ್ ಖುರ್ಷಿದ್

"ದೇಶದ ಅತ್ಯಂತ ಬಡವರ್ಗದ ಜನ ತಮ್ಮ ಸಹಾಯಕ್ಕೆ ಮಾವೋವಾದಿಗಳನ್ನು ನಿರೀಕ್ಷಿಸುತ್ತಾರೆಯೇ ವಿನಃ ಪ್ರಭುತ್ವವನ್ನಲ್ಲ ಎಂದ ಮೇಲೆ ಮಾವೋವಾದಿಗಳು ಪ್ರಭುತ್ವಕ್ಕಿಂತ ಹೆಚ್ಚು ಪ್ರಜಾಪ್ರಭುತ್ವವಾದಿಗಳು ಎಂದಾಗಲಿಲ್ಲವೇ?"


- ಉಮರ್ ಖಲೀದ್, ತೆಹೆಲ್ಕಾ ಪತ್ರಿಕೆಯ ಓದುಗ

"ಗಾಂಧೀವಾದಿ ಹೋರಾಟಗಳನ್ನೇ ನಡೆಸುತ್ತಿದ್ದ ಛತ್ತೀಸ್‌ಘಡ್‌ನ ಆದಿವಾಸಿಗಳನ್ನು ಪ್ರಭುತ್ವವೇ ತನ್ನ ಕ್ರೂರ ದಮನದ ಮೂಲಕ ನಕ್ಸಲರ ಕಡೆಗೆ ದೂಡಿದೆ."

- ಅಜಿತ್ ಸಾಹಿ, ತೆಹೆಲ್ಕಾ ಪತ್ರಿಕೆಯ ಲೇಖನದಲ್ಲಿ

"ಹೇಗಿದ್ದರೂ ಶಿಶುಗಳು ಓಟು ಹಾಕುವುದಿಲ್ಲವಾದ್ದರಿಂದ ರಾಜಕಾರಣಿಗಳು ಶಿಶುಪೋಷಣೆಯ ವಿಷಯದಲ್ಲಿ ತಲೆಯನ್ನೇ ಕೆಡಿಸಿಕೊಳ್ಳುವುದಿಲ್ಲ."

-ಅಭಯ್ ಭಾಂಗ್, ಸಾಮಾಜಿಕ ಕಾರ್ಯಕರ್ತ



ನಂಬಿದ್ರೆನಂಬಿ ಬಿಟ್ರೆಬಿಡಿ

"ಸೂರಿಲ್ಲದವರಿಗೆ ನೆರಳು ನೀಡುವುದಕ್ಕೆ, ಸರ್ಕಾರದೊಂದಿಗೆ ಕೈಜೋಡಿಸಲು ಕಾರ್ಪೋರೇಟ್ ಉದ್ಯಮಪತಿಗಳಿಗೆ ಪ್ರವಾಹ ಸೃಷ್ಟಿಸಿರುವ ಈ ಬಿಕ್ಕಟ್ಟು ಒಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿದೆ. ನಾವುಗಳು 60,000 ಮನೆಗಳನ್ನು ನಿರ್ಮಿಸಿಕೊಡಲಿದ್ದೇವೆ."

- ರಾಜೀವ್ ಚಂದ್ರಶೇಖರ್

"ಧೋನಿಯ ಈ ಅತ್ಯದ್ಭುತ ಜನಪ್ರಿಯತೆಗೆ ಕಾರಣ ಆತ ಹಳ್ಳಿಗಾಡಿನಿಂದ ಬಂದವನಲ್ಲ, ಬದಲಿಗೆ ಆತನ ಇಂಗ್ಲಿಷ್ ಹೈ-ಫೈ ಆಗದೆ ಸರಳವಾಗಿದೆ ಎಂಬುದೇ ಆತನ ಜನಪ್ರಿಯತೆಗೆ ಕಾರಣ."

- ಮುಕುಲ್ ಕೇಸವನ್, ಇತಿಹಾಸ ತಜ್ಞ



"ಗೋವಾದಲ್ಲಿ ಆದ ಬಾಂಬ್‌ಬ್ಲಾಸ್ಟ್‌ನಲ್ಲಿ ಸತ್ತ ಮಾಲ್ಗೊಂಡ ಪಾಟೀಲ್ ಸನಾತನ ಸಂಸ್ಥೆಯ ಸಾಧಕನೆನ್ನುವುದು ನಿಜ. ಆದರೆ ಅವರ ಸ್ಕೂಟರಿನಲ್ಲಿ ಬೇರೇ ಯಾರೋ ಬಾಂಬಿಟ್ಟಿರುವ ಸಾಧ್ಯತೆಯ ಬಗ್ಗೆ ಪೊಲೀಸರು ಯಾಕೆ ತನಿಖೆ ನಡೆಸುತ್ತಿಲ್ಲ?"

- ಅಭಯ್ ವರ್ತಕ್, ಸನಾತನ ಸಂಸ್ಥೆಯ ಮುಖ್ಯಸ್ಥ

"ನೆರೆ ಪರಿಹಾರದಲ್ಲಿ ಯಾವುದೇ ತಾರತಮ್ಯ ನಡೆದಿಲ್ಲ, ನಾವು ಎಲ್ಲವನ್ನೂ ಸರಿಯಾಗಿ ಸರಿಯಾದ ವೇಳೆಯಲ್ಲಿ ಮಾಡಿಮುಗಿಸಿದ್ದೇವೆ."

- ಯಡಿಯೂರಪ್ಪ

ಬ್ಯಾಗಿನಲ್ಲಿದ್ದದ್ದು ಬಾಂಬ್ ಅಲ್ಲ, ಅನುಮಾನ!

"ಜಮ್ಮು-ಕಾಶ್ಮೀರ ಕ್ರಿಕೆಟ್ ಟೀಮಿನ ಆಟಗಾರನಾದ ನನ್ನ ಮಗನ ಬ್ಯಾಗಿನಲ್ಲಿ ಕುರಾನ್ ಇತ್ತು. ಬೆಂಗಳೂರು ಪೊಲೀಸರ ನಾಯಿಗಳು ಅದನ್ನು ಮೂಸುವುದನ್ನು ವಿರೋಧಿಸಿದ್ದರಿಂದ ನನ್ನ ಮಗನ ಬ್ಯಾಗಿನಲ್ಲಿ ಬಾಂಬಿತ್ತೆಂದು ಪುಕಾರು ಹಬ್ಬಿಸಿ ಉದ್ದೇಶಪೂರ್ವಕವಾಗಿ ತೊಂದರೆ ಕೊಡಲಾಗಿದೆ."

- ಪರ್ವೇಜ್ ರಸೂಲ್ ಅವರ ತಾಯಿ

ಬಾಂಬೆಯಲ್ಲಿ ಇದ್ದದ್ದೇ ಮುಂಬೈನಲ್ಲೂ ಇರುವುದು..



"ರಾಜ್ ಠಾಕ್ರೆಯ ಗೊಡ್ಡು ಬೆದರಿಕೆಗೆ ಹೆದರಿ 'ಬಾಂಬೆ ವೆಲ್ವೆಟ್' ಚಿತ್ರದ ಹೆಸರನ್ನು 'ಮುಂಬೈ ವೆಲ್ವೆಟ್' ಎಂದು ಬದಲಾಯಿಸುವುದಿಲ್ಲ, ರಾಜ್‌ಠಾಕ್ರೆ ಜನಿಸಿರದ ಕಾಲಘಟ್ಟದ ಕಥಾವಸ್ತುವನ್ನು ಚಿತ್ರ ಹೊಂದಿದೆ."

- ಅನುರಾಗ್ ಕಶ್ಯಪ್



ಬಿಜೆಪಿ ಬಿಟ್ಟ ಮೇಲೆ ಆದ ಜ್ಞಾನೋದಯವೇ?

"ರಾಮರಾಜ್ಯಕ್ಕಿಂತ ಅಶೋಕ ಸಾಮ್ರಾಜ್ಯವೇ ಶ್ರೇಷ್ಠ."

- ಸುಭಾಷ್ ಭರಣಿ

ಲೂಟಿ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರೇನು ಪ್ರಯೋಜನ?



"ಬಿಟಿ ಬದನೆಯಿಂದ ಯಾವುದೇ ತೊಂದರೆ ಇಲ್ಲ. ಒಂದು ವೇಳೆ ಹಾಗೆ ತೊಂದರೆ ಸಂಭವಿಸಿದರೆ ಜೀನ್ ಬ್ಯಾಂಕಿನಿಂದ ನಮ್ಮ ಹಳೆ ಜೀನ್‌ಗಳನ್ನು ಪಡೆದು ರೈತರಿಗೆ ನೀಡಬಹುದು."

- ಡಾ. ಜಿ. ಪರಮೇಶ್ವರ್

...ಪ್ರಧಾನಿಗೊಂದು ಮನವಿ



ಕಂಡಹಾಗೆ


■ ಗೌರಿ ಲಂಕೇಶ್

...ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ...ಗುತ್ತಿರುವ ಭಾರತ ಕುರಿತ ಹಲವು ಅಂಕಿ ...ಅಂಶಗಳು ಹೀಗಿದೆ: ಭಾರತದ ಶೇ. 77 ...ಜನಸಂಖ್ಯೆಯ ದೈನಿಕ ಆದಾಯ ಕೇವಲ ಇಪ್ಪತ್ತು ...ರೂಪಾಯಿಗಳು; ಶೇ. 42 ಮನೆಗಳಿಗೆ ವಿದ್ಯುತ್ ...ಸಂಪರ್ಕ ಇಲ್ಲ; ಶೇ. 80 ಜನಸಂಖ್ಯೆಗೆ (ಅಂದರೆ ... ಕೋಟಿ ಜನ) ಕುಡಿಯುವ ನೀರಿನ ...ಸವಲತ್ತುಗಳಿಲ್ಲ; ಶೇ. 93 ಜನ ಅಸಂಘಟಿತ ...ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಇದು ಯಾರಲ್ಲಾದರೂ ಆಘಾತವನ್ನು ...ಉಂಟುಮಾಡಿಸಬೇಕು. ಆದರೆ ಈ ದಾರುಣ ಚಿತ್ರ ...ಅಲ್ಲಿಗೇ ನಿಲ್ಲುವುದಿಲ್ಲ. 1990 ರ ದಶಕದಲ್ಲಿ ...ಪ್ರಾರಂಭವಾದ ಉದಾರೀಕರಣ ...ನೀತಿಯಿಂದಾಗಿ 2007 ರ ...ಹೊತ್ತಿಗೆ ಭಾರತದ ...ಬಿಲಿಯನೇರ್‌ಗಳ ಸಂಖ್ಯೆ ಶೇ. ...6 ಹೆಚ್ಚಾಯಿತು ನಿಜ. ...ಆದರೆ ಅದೇ ಸಂದರ್ಭದಲ್ಲಿ ...ಇನ್ನೊಂದು ರೀತಿಯ ...ಬೆಳವಣಿಗೆ'ವಿಕೆಯೂ ನಡೆಯಿತು. ...ಅಸಂಘಟಿತ ಕ್ಷೇತ್ರಗಳನ್ನು ...ಕುರಿತು ಅಧ್ಯಯನ ಮಾಡಿದ ...ರಾಷ್ಟ್ರೀಯ ಕಮಿಷನ್ ...(ನೆನಪಿರಲಿ, ಇದು ಯಾವುದೇ ...ಖಾಸಗಿ ಸಂಸ್ಥೆಯಲ್ಲ, ಬದಲಾಗಿ ಕೇಂದ್ರ ಸರ್ಕಾರ ...ರಚಿಸಿದ್ದ ಸಮಿತಿ) ಪ್ರಕಾರ 1999-2000 ರಲ್ಲಿ ...ಭಾರತದಲ್ಲಿ 811 ಮಿಲಿಯನ್ ಬಡವರಿದ್ದರೆ ...2004-05 ರಲ್ಲಿ ಅವರ ಸಂಖ್ಯೆ 836 ...ಮಿಲಿಯನ್‌ಗೆ ಏರಿತ್ತು. ಹಾಗೆಯೇ ಇನ್ನೊಂದು ...ಸಮೀಕ್ಷೆಯ ಪ್ರಕಾರ 1997-2007 ರನಡುವಿನ ...ಹತ್ತು ವರ್ಷಗಳಲ್ಲಿ ದೇಶದಾದ್ಯಂತ 1,82,936 ...ರೈತರು ಆತ್ಮಹತ್ಯೆಗೆ ಶರಣಾಗಿದ್ದರು.



ಇಲ್ಲಿ ನೀಡಿರುವ ಬಡವರ ಸ್ಥಿತಿಗತಿಗಿಂತಲೂ ...ಅರಣ್ಯಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಪರಿಸ್ಥಿತಿ ...ಇನ್ನೂ ದಾರುಣವಾಗಿದೆ. ಈಗ ...ಆದಿವಾಸಿಗಳ ಅರಣ್ಯಗಳ ...ಮೇಲೆಯೇ ಭಾರತ ಸರ್ಕಾರ ...ಆಪರೇಷನ್ ಗ್ರೀನ್‌ಹಂಟ್ ...ಎಂಬ ದೊಡ್ಡ ಸೇನಾ ...ಕಾರ್ಯಾಚರಣೆಯನ್ನು ...ನಡೆಸಲು ಹೊರಟಿದೆ. ಈ ...ಸೇನಾ ಕಾರ್ಯಾಚರಣೆಯ ...ಉದ್ದೇಶ ಗೃಹ ಸಚಿವ ...ಚಿದಂಬರಂ ಪ್ರಕಾರ "ದೇಶಕ್ಕೆ ...ಅತಿದೊಡ್ಡ ಆಂತರಿಕ ...ಸಮಸ್ಯೆಯಾಗಿರುವ ಮಾವೋವಾದಿಗಳನ್ನು ದಮನ ...ಮಾಡುವುದೇ ಆಗಿದೆ." ಆದರೆ ಈ ...ಕಾರ್ಯಾಚರಣೆಯಿಂದಾಗಿ ಲಕ್ಷಾಂತರ ಬಡ ...ಆದಿವಾಸಿಗಳು ನಿರಾಶ್ರಿತರಾಗುತ್ತಾರೆ, ಸಾವಿರಾರು ...ಅಮಾಯಕರು ಬಲಿಯಾಗುತ್ತಾರೆ.



ಇಂತಹ ಒಂದು ಆತಂಕ ನಾಡಿನ ಮತ್ತು ಬೇರೆ ...ದೇಶಗಳಲ್ಲಿರುವ ಪ್ರಜ್ಞಾವಂತರನ್ನೆಲ್ಲ ಕಾಡುತ್ತಿದೆ. ...ಹಾಗಾಗಿಂದ ಇತ್ತೀಚೆಗೆ ಅವರೆಲ್ಲ ಪ್ರಧಾನಿ ...ಮನಮೋಹನ್ ಸಿಂಗ್ ಅವರಿಗೆ ಒಂದು ...ಪತ್ರವನ್ನು ಬರೆದು ಈ ಕಾರ್ಯಾಚರಣೆಯನ್ನು ಕೈಬಿಡಬೇಕು ಎಂದು ಕೋರಿದ್ದಾರೆ. ಈ ಪತ್ರಕ್ಕೆ ನೋಮ್ ಚಾಮ್‌ಸ್ಕಿನಂತಹ ಬುದ್ಧಿಜೀವಿಗಳು, ಅರುಂಧತಿ ರಾಯ್ ತರಹದ ಖ್ಯಾತ ಬರಹಗಾರರು ಸೇರಿದಂತೆ ಈಗಾಗಲೇ ನೂರಾರು ಜನ ಸಹಿ ಹಾಕಿದ್ದಾರೆ. ಅವರಲ್ಲಿ ನಾನೂ ಒಬ್ಬಳು.

ನಮ್ಮೆಲ್ಲರ ಕಾಳಜಿ ನಕ್ಸಲರನ್ನು ಬೆಂಬಲಿಸಬೇಕು, ಅವರನ್ನು ರಕ್ಷಿಸಬೇಕು ಎಂಬುದರಲ್ಲ. ಬದಲಾಗಿ ನಕ್ಸಲರ ದಮನದ ಹೆಸರಲ್ಲಿ ಸರ್ಕಾರ ಅಮಾಯಕರನ್ನು ಕೊಲ್ಲಬಾರದು, ಅವರ ಭೂಮಿಯನ್ನು ಖದೀಮ ಕಾರ್ಪೊರೇಟ್ ಕಂಪನಿಗಳಿಗೆ ನೀಡಬಾರದೆಂಬುದು ಅಷ್ಟೇ.

ಆ ಪತ್ರ ಪ್ರಜ್ಞಾವಂತರ ಕಾಳಜಿಯನ್ನು ಬಿಂಬಿಸುವುದರಿಂದ ಅದನ್ನು ಇಲ್ಲಿ ಅನುವಾದಿಸಿ ನೀಡುತ್ತಿದ್ದೇನೆ....

ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರಿಗೆ,

ಭಾರತ ಸರ್ಕಾರವು ಸದ್ಯದಲ್ಲೇ ಸೇನೆ ಮತ್ತು ಅರೆಸೇನೆ ಪಡೆಗಳನ್ನು ನಿಯೋಜಿಸಿ ಆದಿವಾಸಿಗಳು ವಾಸಿಸುತ್ತಿರುವ ಆಂಧ್ರಪ್ರದೇಶ, ಛತ್ತೀಸಗಡ, ಜಾರ್ಖಂಡ್, ಮಹಾರಾಷ್ಟ್ರ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳದ ಪ್ರದೇಶಗಳ ಮೇಲೆ ಹಿಂದೆಂದೂ ಕಂಡಿಲ್ಲದಂತಹ ಕಾರ್ಯಾಚರಣೆಯನ್ನು ನಡೆಸಲಿದೆ ಎಂದು ಕೇಳಿ ನಾವು ಚಿಂತಾಕ್ರಾಂತರಾಗಿದ್ದೇವೆ. ಈ ದಾಳಿಯ ಪ್ರಕಟಿತ ಉದ್ದೇಶ ಮಾವೋವಾದಿ ಬಂಡಾಯಗಾರರ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶವನ್ನು "ವಿಮೋಚನೆ"ಗೊಳಿಸುವುದಾಗಿದೆ. ಈ ಸೇನಾ ಕಾರ್ಯಾಚರಣೆ ಆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಕಡುಬಡವರ ಜೀವಕ್ಕೆ ಮತ್ತು ಜೀವನೋಪಾಯಕ್ಕೆ ವಿಪತ್ತು ತರುತ್ತದಲ್ಲದೆ, ಅಪಾರ ಪ್ರಮಾಣದಲ್ಲಿ ಸಾಮಾನ್ಯ ಪ್ರಜೆಗಳ ಒಕ್ಕಲೆಬ್ಬಿಸುವಿಕೆ, ನಿರ್ಗತಿಕರಣ ಮತ್ತು ಮಾನವಹಕ್ಕುಗಳ ಉಲ್ಲಂಘನೆಯೂ ನಡೆಯಲಿದೆ. ಒಂದು ಬಂಡಾಯದ ನೆರಳನ್ನು ದಮನಿಸುವ ಹೆಸರಲ್ಲಿ ಭಾರತದ ಅತಿ ಬಡ ಪ್ರಜೆಗಳನ್ನು ಬೇಟೆ ಆಡುವುದು ಅಡ್ಡಪರಿಣಾಮದ ಕ್ರಮ ಮಾತ್ರವಲ್ಲ ಅದು ದುರಾಚಾರವೂ ಆಗಿರುತ್ತದೆ. ಈಗಾಗಲೇ ಸರ್ಕಾರಿ ಅಂಗಗಳಿಂದ ರೂಪಿತವಾಗಿ, ಹಣಕಾಸಿನ ನೆರವಿನೊಂದಿಗೆ ಅರೆ ಸೇನಾಪಡೆಗಳು ನಡೆಸುತ್ತಿರುವ ಕಾರ್ಯಾಚರಣೆಗಳು, ಅವುಗಳಿಗೆ ಬೆಂಬಲ ನೀಡುತ್ತಿರುವ ಬಂಡುಕೋರ ವಿರೋಧಿ ಮಿಲಿಷಿಯಾಗಳು ಛತ್ತೀಸಗಢ ಮತ್ತು ಪಶ್ಚಿಮ ಬಂಗಾಲದ ಕೆಲ ಭಾಗಗಳಲ್ಲಿ ಆಂತರಿಕ ಯುದ್ಧದ ಸ್ಥಿತಿಯನ್ನು ನಿರ್ಮಿಸಿವೆ. ಅವುಗಳಿಂದಾಗಿ ಈಗಾಗಲೇ ನೂರಾರು ಜನ ಕೊಲ್ಲಲ್ಪಟ್ಟಿದ್ದಾರೆ ಮತ್ತು ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ. ಸರ್ಕಾರ ಯೋಜಿಸಿರುವ ಸಶಸ್ತ್ರ ದಾಳಿಯು ಅಲ್ಲಿನ ಆದಿವಾಸಿಗಳ ಬಡತನ, ಹಸಿವು, ಅವಮಾನ ಮತ್ತು ಅಭದ್ರತೆಗಳನ್ನು ಉಲ್ಬಣಿಸುತ್ತದಲ್ಲದೆ ಅವುಗಳನ್ನು ಇನ್ನಷ್ಟು ಪ್ರದೇಶಗಳಿಗೆ ವಿಸ್ತರಿಸುತ್ತವೆ.

ಭಾರತದ ಆದಿವಾಸಿ ಸಮುದಾಯದ ಪಾಲಿಗೆ ದಕ್ಕಿದ್ದ ಕಿತ್ತು ತಿನ್ನುವ ಬಡತನ ಮತ್ತು ಅಗಾಧವಾದ ನಿರ್ಗತಿಕ ಸ್ಥಿತಿಗಳನ್ನು ಇನ್ನಷ್ಟು ಉಲ್ಬಣಗೊಳ್ಳುವಂತೆ 90ರ ದಶಕದಿಂದ ಭಾರತದ ಪ್ರಭುತ್ವವು ಅನುಸರಿಸಿದ ನವ ಉದಾರೀಕರಣ ನೀತಿಯು ಅವರ ಮೇಲಿನ ಸರ್ಕಾರಿ ಪ್ರಾಯೋಜಿತ ಹಿಂಸೆಗೆ ಪೂರಕವಾಗಿ ಕೆಲಸ ಮಾಡಿದೆ. ಕಾಡು, ಭೂಮಿ, ನದಿ, ಗೋಮಾಳ, ಕೆರೆ ಮತ್ತು ಇನ್ನಿತರೆ ಸಾಮುದಾಯಿಕ ಅವಶ್ಯಕ ಸಾಧನೆಗಳ ಮೇಲೆ ಬಡ ಆದಿವಾಸಿಗಳಿಗೆ ಉಳಿದಿದ್ದ ಚೂರುಪಾರು ಮಾರ್ಗಗಳ ಮೇಲೂ ಭಾರತದ ಪ್ರಭುತ್ವ ವಿಶೇಷ ಆರ್ಥಿಕ ವಲಯ, ಗಣಿಗಾರಿಕೆ, ಕೈಗಾರಿಕೀಕರಣ, ಮಾಹಿತಿ ತಂತ್ರಜ್ಞಾನದ ಪಾರ್ಕ್ ಇತ್ಯಾದಿ 'ಅಭಿವೃದ್ಧಿ' ಯೋಜನೆಗಳ ರೂಪದಲ್ಲಿ ದಾಳಿಗಳನ್ನು ನಡೆಸುತ್ತಿದೆ. ಸರ್ಕಾರ ಸೈನಿಕ ಕಾರ್ಯಾಚರಣೆ ನಡೆಸಲು ಉದ್ದೇಶಿಸಿರುವ ಭೌಗೋಳಿಕ ಪ್ರದೇಶದಲ್ಲಿ ಖನಿಜ ಮತ್ತು ಅರಣ್ಯ ಸಂಪತ್ತು ಹೇರಳವಾಗಿದ್ದು ಆ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಗುರಿ ಹಲವಾರು ಕಾರ್ಪೊರೇಟ್ ಕಂಪನಿಗಳದ್ದಾಗಿದೆ. ಆದರೆ ತಮ್ಮ ಎತ್ತಂಗಡಿ ಮತ್ತು ಉಚ್ಚಾಟನೆ ವಿರುದ್ಧ ಸ್ಥಳೀಯ ಆದಿವಾಸಿಗಳು ತೀವ್ರತರವಾದ ತಡೆಯೊಡ್ಡಿರುವುದರಿಂದ ಸರ್ಕಾರಿ ಬೆಂಬಲ ಪಡೆದ ಕಾರ್ಪೊರೇಟ್ ಕಂಪನಿಗಳಿಗೆ ಆ ಪ್ರದೇಶಗಳನ್ನು ಪ್ರವೇಶಿಸಲು ಸಾಧ್ಯವಾಗಿಲ್ಲ. ನಮ್ಮ ಆತಂಕ ಯಾವುದೆಂದರೆ ಸರ್ಕಾರದ ಈ ಕಾರ್ಯಾಚರಣೆಯ ಮತ್ತೊಂದು ಗುರಿ ಜನರ ವಿರೋಧವನ್ನು ದಮನ ಮಾಡಿ ಇದೇ ಕಾರ್ಪೊರೇಟ್‌ಗಳಿಗೆ ಲಂಗುಲಗಾಮಿಲ್ಲದೆ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಅನುವು ಮಾಡಿಕೊಡುವುದಾಗಿದೆ ಎಂಬುದು. ವೇಗವಾಗಿ ಹೆಚ್ಚುತ್ತಿರುವ ಸಾಮಾಜಿಕ ಅಸಮಾನತೆ, ಮುನ್ನಡೆಯುತ್ತಿರುವ ಸಾಮಾಜಿಕ ಸ್ವಾತಂತ್ರ್ಯಹರಣ, ಪ್ರಭುತ್ವದ ಹಿಂಸೆ, ತಮ್ಮ ಒಕ್ಕಲೆಬ್ಬಿಸುವಿಕೆಯ ವಿರುದ್ಧ ಬಡವರು ಮತ್ತು ಸಮಾಜದ ಅಂಚಿಗೆ ದೂಡಲ್ಪಟ್ಟಿರುವವರು ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟಗಳನ್ನು ಸರ್ಕಾರ ದಮನಿಸುತ್ತಿರುವುದರಿಂದಲೇ ಇವತ್ತು ಇಷ್ಟೊಂದು ಸಾಮಾಜಿಕ ಆಕ್ರೋಶ ಮತ್ತು ಅಸಮಾಧಾನಕ್ಕೆ ಕಾರಣವಾಗಿರುವುದರಿಂದ ಇವತ್ತು ರಾಜಕೀಯ ಹಿಂಸೆಯ ಮಾರ್ಗವನ್ನು ಅನುಸರಿಸುವಂತೆ ಮಾಡಿದೆ. ಈ ಸಮಸ್ಯೆಯ ಬೇರುಗಳನ್ನು ನಿವಾರಿಸುವ ಬದಲಾಗಿ ಭಾರತದ ಪ್ರಭುತ್ವದ ಈ ಸಮಸ್ಯೆಯನ್ನು ನಿವಾರಿಸಲು ಸೇನಾ ಕಾರ್ಯಾಚರಣೆಯನ್ನು ನಡೆಸಲು ನಿರ್ಧರಿಸಿದೆ. ಭಾರತ ಸರ್ಕಾರದ ಘೋಷವಾಕ್ಯ ಬಡತನ ನಿರ್ಮೂಲನೆಯಲ್ಲ, ಬದಲಾಗಿ ಬಡವರ ನಿರ್ಮೂಲನೆ ಎಂಬಂತೆ ಕಾಣಿಸುತ್ತಿದೆ.



ತನ್ನದೇ ಜನರ ಸಮಸ್ಯೆಗಳನ್ನು ಬಗೆಹರಿಸದೆ, ಅವರ ವಿರುದ್ಧ ಸೇನಾ ಕಾರ್ಯಾಚರಣೆಯನ್ನು ಭಾರತ ಸರ್ಕಾರ ನಡೆಸುವುದು ನಮ್ಮ ಪ್ರಕಾರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ದೊಡ್ಡ ಪೆಟ್ಟು ನೀಡಿದಂತೆ. ಇಂತಹ ಸೇನಾ ಕಾರ್ಯಾಚರಣೆಯನ್ನು ಸದ್ಯದ ಯಶಸ್ಸು ಅನಿಶ್ಚಿತವಾಗಿದ್ದರೂ, ಸಾಮಾನ್ಯ ಪ್ರಜೆಗಳ ಮೇಲೆ ಇದು ಅಪಾರ ಪ್ರಮಾಣದ ದುಃಸ್ಥಿತಿ ತರುವುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ ಎಂಬುದಕ್ಕೆ ಜಗತ್ತಿನಾದ್ಯಂತ ನಡೆದಿರುವ ಹಲವಾರು ಬಂಡುಕೋರರೊಂದಿಗಿನ ಸಂಘರ್ಷಗಳೇ ಸಾಕ್ಷಿ.


ಭಾರತ ಸರ್ಕಾರವು ಕೂಡಲೇ ತನ್ನ ಸೇನೆಯನ್ನು ವಾಪಸ್ ಕರೆದು ಇಂತಹ ಒಂದು ಸೇನಾ ಕಾರ್ಯಾಚರಣೆಯ ಯೋಜನೆಯನ್ನೇ ಕೈಬಿಡಬೇಕೆಂದು ನಾವು ಕೋರುತ್ತೇವೆ. ಯಾಕೆಂದರೆ ಈ ಕಾರ್ಯಾಚರಣೆಯಿಂದಾಗಿ ಆಂತರಿಕ ಯುದ್ಧದ ಸ್ಥಿತಿ ನಿರ್ಮಾಣವಾಗಿ ಆ ದೇಶದ ಪ್ರಜೆಗಳಾದ ಕಡುಬಡವರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಿ ಕಾರ್ಪೊರೇಟ್ ಕಂಪನಿಗಳ ಲೂಟಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ನಮ್ಮ ಈ ಮನವಿಯೊಂದಿಗೆ ಎಲ್ಲಾ ಪ್ರಜಾಪ್ರಭುತ್ವವಾದಿಗಳು ದನಿಗೂಡಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಇತಿ

(ಸಹಿ ಮಾಡಿರುವವರ ಹೆಸರುಗಳು)

ಡೆಡ್‌ಲೈನ್ ಒತ್ತಡದಲ್ಲಿ ಈ ಪತ್ರವನ್ನು ಆತುರಾತುರವಾಗಿ ಅನುವಾದಿಸಿದ್ದೇನೆ. ಸದ್ಯದಲ್ಲೇ ಇದನ್ನು ಪರಿಷ್ಕರಿಸಿ ಜಗತ್ತಿನ ಮತ್ತು ದೇಶದ ವಿವಿಧ ಕಡೆಗಳಿಂದ ಜನರ ಬೆಂಬಲವನ್ನು ಈ ಪತ್ರಕ್ಕೆ ಪಡೆಯುತ್ತಿರುವ sanhati ಎಂಬ ಸಂಘಟನೆಗೆ ಕಳುಹಿಸುತ್ತಿದ್ದೇನೆ.

ನಮ್ಮ ಓದುಗರೂ www. sanhati.com ವೆಬ್‌ತಾಣಕ್ಕೆ ಹೋಗಿ ಈ ಪತ್ರಕ್ಕೆ ಸಹಿ ಮಾಡಬಹುದು. ●



ಆ ನಾಯಿಗೂ ಮತ್ತು ಈ ಪತ್ರಕರ್ತನಿಗೂ ಏನು ವ್ಯತ್ಯಾಸ?

ಅಕ್ಟೋಬರ್ 21, 2009ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ನಾಲ್ಕು ಸರಣಿ ಫೋಟೋಗಳನ್ನು ಪ್ರಕಟಿಸಲಾಗಿದೆ. ಬೆಂಗಳೂರಿನ ಫುಟ್‌ಪಾತ್‌ನಲ್ಲಿ ಅಮಾಯಕ ಕುಟುಂಬವೊಂದು ಗಾಢವಾಗಿ ನಿದ್ರಿಸುತ್ತಿರುವುದು ಹಾಗೂ ಅವರು ಕಷ್ಟಪಟ್ಟು ಸಂಪಾದಿಸಿಕೊಂಡಿದ್ದ ಆಹಾರವನ್ನು ನಾಯಿಯೊಂದು ಅವರಿಗೆ ಅರಿವಾಗದಂತೆ ಕದ್ದು ಒಯ್ಯುತ್ತಿರುವ ಸನ್ನಿವೇಶವನ್ನು ಈ ನಾಲ್ಕು ಫೋಟೋಗಳು ಹಿಡಿದಿಟ್ಟಿವೆ.

ಆ ಪತ್ರಕರ್ತ ಫೋಟೋ ಕ್ಲಿಕ್ಕಿಸಿಕೊಳ್ಳುವುದಕ್ಕಾಗಿ ನಾಯಿ ಅವರ ಊಟ ಎತ್ತಿಕೊಂಡು ಹೋಗಲಿ ಎಂಬ ಆಶಯದಿಂದ ಹತ್ತಾರು ನಿಮಿಷ ಕಾಯುತ್ತಾ ಕುಳಿತ್ತಿದ್ದನೇ ಹೊರತು ನಾಯಿಯನ್ನು ಓಡಿಸಲಿಲ್ಲ. ಆತ ಒಂದೇ ಬಾರಿ 'ಹಚಾ...' ಎಂದಿದ್ದರೂ ಆ ನಾಯಿ ಓಡಿಹೋಗುತ್ತಿತ್ತು. ಆ ಅಮಾಯಕರಿಗೆ ಒಂದು ಹೊತ್ತಿನ ಊಟವಾದರೂ ಸಿಗುತ್ತಿತ್ತು. ಆ ಅಮಾಯಕ ಜನರು ದೇಶದ ಯಾವ ಹಳ್ಳಿಯಿಂದ ಬಡತನ, ದಾರಿದ್ರ್ಯ



ಹಸಿವು ತಾಳಲಾರದೇ ಬೆಂಗಳೂರಿಗೆ ಬಂದಿದ್ದರೋ ಏನೋ? ಗಗನಚುಂಬಿ ಕಟ್ಟಡಗಳಿರುವ ಬೆಂಗಳೂರಿನಲ್ಲಿ ಅವರಿಗೆ ಕನಿಷ್ಠ ತಲೆ ಮೇಲೊಂದು ಸೂರು ಕೂಡ ಸಿಗದೇ ರಸ್ತೆಯ ಬದಿಯಲ್ಲೆ ಪುಟ್ಟ ಮಗುವಿನೊಂದಿಗೆ ಮಲಗಿರುವುದು ಈ ಫೋಟೋಗಳಿಂದಲೇ ಗೊತ್ತಾಗುತ್ತದೆ. ನಾಯಿ ಎತ್ತಿಕೊಂಡು ಹೋಗಿದ್ದ ಅವರ ಊಟವನ್ನು ಸಂಪಾದಿಸಿಕೊಳ್ಳುವುದಕ್ಕೆ ಅವರೆಷ್ಟು ಕಷ್ಟಪಟ್ಟಿದ್ದರೋ? ಆದರೆ ಇದ್ಯಾವುದನ್ನೂ ಫೋಟೋ ಕ್ಲಿಕ್ಕಿಸಿಕೊಳ್ಳುವ ತವಕದಲ್ಲಿದ್ದ ಪತ್ರಕರ್ತ ಯೋಚಿಸಲಿಲ್ಲ.



ಕೆವಿನ್ ಕಾರ್ಟರ್....


ಈ ಫೋಟೋ ನೋಡಿದ ತಕ್ಷಣ ಕೆವಿನ್ ಕಾರ್ಟರ್ ಎಂಬ ದಕ್ಷಿಣ ಆಫ್ರಿಕದ ಫೋಟೋ-ಪತ್ರಕರ್ತ ನೆನಪಿಗೆ ಬರುತ್ತಾನೆ. 1993ರಲ್ಲಿ ಸೂಡಾನ್ ಭೀಕರ ಬರಗಾಲಕ್ಕೆ ತುತ್ತಾಗಿದ್ದರಿಂದ ದಿನನಿತ್ಯ ಜನ ಹಸಿವಿನಿಂದ ಸಾಯುವುದು ಮಾಮೂಲಿಯಾಗಿತ್ತು. ಜನರ ದೇಹಗಳಲ್ಲಿ ರಕ್ತ-ಮಾಂಸಗಳಿಲ್ಲದೇ ಕೇವಲ ಅಸ್ಥಿಪಂಜರಕ್ಕೆ ಚರ್ಮದ ಹೊದಿಕೆ ಹೊದಿಸಿದಂತೆ ಬಡಕಲಾಗಿ ಕಾಣುತ್ತಿದ್ದವು. ಇದೇ ಸಮಯದಲ್ಲಿ ಕೆವಿನ್ ಕಾರ್ಟರ್ ತನ್ನ ಕ್ಯಾಮೆರಾದೊಂದಿಗೆ 1993ರ ಮಾರ್ಚ್‌ನಲ್ಲಿ ಸೂಡಾನ್‌ಗೆ ಹೋದ. ಸೂಡಾನ್‌ನ ಹಳ್ಳಿಯೊಂದರ ಹೊರವಲಯದಲ್ಲಿ ಅತ್ಯಂತ ಬಡಕಲಾಗಿರುವ, ಆಹಾರ ನೀರಿಲ್ಲದೇ ಬಳಲಿ ನಿಸ್ತೇಜವಾಗಿ ನಡೆಯುವುದಕ್ಕೂ ಸಾಧ್ಯವಾಗದೇ ನೆಲಕ್ಕುರುಳಿದ್ದ ಪುಟ್ಟ ಹೆಣ್ಣು ಮಗುವೊಂದನ್ನು ಆತ ನೋಡಿದ. ಅದೇ ಸಮಯದಲ್ಲಿ ಆ ಮಗುವಿನಿಂದ ಅನತಿ ದೂರದಲ್ಲಿ ದೊಡ್ಡದಾದ ಹಸಿದ ರಣಹದ್ದೊಂದು ಇನ್ನೇನು ಈ ಮಗುವನ್ನು ಕುಕ್ಕಿ ತಿಂದೇಬಿಡುತ್ತದೆನೋ ಎಂಬಂತೆ ಕಾದು ಕುಳಿತಿತ್ತು. ಫೋಟೋ ಪತ್ರಿಕೋದ್ಯಮದಲ್ಲಿ ಹೆಸರು, ಕೀರ್ತಿ ಮಾಡಬೇಕೆಂದು ಪ್ರಯತ್ನಿಸುತ್ತಿದ್ದ ಕೆವಿನ್ ಕಾರ್ಟರ್ ಕೂಡ ಪ್ರಾಯಶಃ ಅಂಥ ಒಂದು 'ಅತ್ಯದ್ಭುತ' ಕ್ಷಣಕ್ಕಾಗಿ ಕಾಯುತ್ತಾ ಕುಳಿತಿದ್ದನೋ ಏನೋ? ಬರೋಬ್ಬರಿ 20 ನಿಮಿಷಗಳ ಕಾಲ ಕಾದರೂ ರಣಹದ್ದು ಬಂದು ಮಗುವನ್ನು ಕುಕ್ಕಿ ತಿನ್ನಲಿಲ್ಲ. ಕೆವಿನ್ ಕಾರ್ಟರ್ ಅಲ್ಲಿ ತನ್ನ ಕ್ಯಾಮೆರಾದೊಂದಿಗೆ ಸುಳಿದಾಡುತ್ತಿದ್ದುದೂ ಅದಕ್ಕೆ ಕಾರಣವಿರಬಹುದು. ತೀರಾ ನಿಸ್ತೇಜವಾಗಿ ಸಾವು-ಬದುಕುಗಳ ಮಧ್ಯೆ ಹೋರಾಟ ನಡೆಸುತ್ತಿದ್ದ ಆ ಹೆಣ್ಣು ಮಗು ಅಲ್ಲಿಂದ ಎದ್ದುಹೋಗುವ ಸಾಧ್ಯತೆಯಂತೂ ಇರಲೇ ಇಲ್ಲ. ಕೊನೆಗೆ, ಆತ ಮಗುಚಿ ಬಿದ್ದಿರುವ ಆ ಪುಟ್ಟ ಜೀವಂತ ಮಗು ಹಾಗೂ ಅನತಿ ದೂರದಲ್ಲಿ ಅದನ್ನು ಕುಕ್ಕಿ ತಿನ್ನುವುದಕ್ಕಾಗಿ ಕಾಯುತ್ತಾ ಕುಳಿತಿದ್ದ ರಣಹದ್ದು ಕಾಣಿಸುವ ಫೋಟೋವೊಂದನ್ನು ಕ್ಲಿಕ್ಕಿಸಿಕೊಂಡು ಅಲ್ಲಿಂದ ಹೊರಟುಹೋದ. ಆಮೇಲೆ ಏನಾಯಿತು? ಮಗುವನ್ನು ಹದ್ದು ತಿಂದು ಹಾಕಿತಾ? ಮಗು ಹದ್ದಿನೊಂದಿಗೆ ಹೋರಾಡಿ ತನ್ನ ಜೀವ ಉಳಿಸಿಕೊಂಡಿತಾ? ಈ ಯಾವ ಪ್ರಶ್ನೆಗಳಿಗೂ ಇಲ್ಲಿಯ ತನಕ ಉತ್ತರ ಸಿಕ್ಕಿಲ್ಲ.

ಕೆವಿನ್ ಕಾರ್ಟರ್ ತನ್ನ ಈ 'ಅದ್ಭುತ ಫೋಟೋ'ವನ್ನು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಕಳುಹಿಸಿದ. ಮಾರ್ಚ್ 26, 1993ರ ಸಂಚಿಕೆಯಲ್ಲಿ ಅದು ಪ್ರಕಟವಾಯಿತು. ಮನ ಕಲಕುವಂತಿದ್ದ ಈ ದಾರುಣ ಫೋಟೋವನ್ನು ನೋಡಿ ವಿಶ್ವದಾದ್ಯಂತ ಸಂವೇದನಾಶೀಲ ಮನಸ್ಸುಗಳು ಕಕ್ಕಾಬಿಕ್ಕಿಯಾದವು. ಅದನ್ನು ಪ್ರಕಟಿಸಿದ್ದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಫೋನ್ ಮಾಡಿ 'ಆ ಮಗು ಬದುಕುಳಿಯಿತಾ?', 'ರಣಹದ್ದು ಅದನ್ನು ಕುಕ್ಕಿ ತಿಂದಿತಾ?' ಎಂದೆಲ್ಲಾ ಪ್ರಶ್ನಿಸಿದರು. ಆದರೆ, ಕೆವಿನ್ ಕಾರ್ಟರ್ ಬಳಿಯಾಗಲೀ, ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಬಳಿಯಾಗಲೀ ಈ ಪ್ರಶ್ನೆಗಳಿಗೆ ಉತ್ತರವಿರಲಿಲ್ಲ. ಈ ಫೋಟೋಕ್ಕಾಗಿ ಕೆವಿನ್ ಕಾರ್ಟರ್‌ಗೆ 1994ರ ಮೇ 23ರಂದು ವಿಶ್ವವಿಖ್ಯಾತ ಪುಲಿಟ್ಜರ್ ಪ್ರಶಸ್ತಿ ಸಿಕ್ಕಿತು. ಅಪಾರ ದುಡ್ಡೂ ಸಿಕ್ಕಿತು. ಹೀಗೆ ಕೇವಲ ದಕ್ಷಿಣ ಆಫ್ರಿಕದಲ್ಲೂ ದೊಡ್ಡ ಹೆಸರು ಮಾಡಿರದ ಆತ ಈ ಒಂದೇ ಒಂದು ಫೋಟೋದ ಮೂಲಕ ವಿಶ್ವವಿಖ್ಯಾತ ಫೋಟೋ ಜರ್ನಲಿಸ್ಟ್ ಆದ.

ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಈ ಫೋಟೋ ಪ್ರಕಟವಾದ ದಿನದಿಂದಲೇ ಕೆವಿನ್ ಕಾರ್ಟರ್ ಮೇಲೆ ದೊಡ್ಡ ಪ್ರಮಾಣದ ವಿಮರ್ಶೆಗಳು ಬರಲಾರಂಭಿಸಿದವು. ರಣಹದ್ದನ್ನು ಓಡಿಸಿ ಮಗುವನ್ನು ಎತ್ತಿಕೊಂಡು ಒಂದು ಮಗುವಿನ ಜೀವ ಉಳಿಸುವ ಬದಲಿಗೆ 'ಅತ್ಯದ್ಭುತ' ಫೋಟೋಕ್ಕಾಗಿ ಕಾಯುತ್ತಾ ಕುಳಿತಿದ್ದ ಆತನ ಹೃದಯಹೀನತೆಯನ್ನು ಸಂವೇದನಾಶೀಲ ಸೂಕ್ಷ್ಮ ಮನಸ್ಸುಗಳು ಬಹಳಷ್ಟು ನೋವಿನಿಂದ ಖಂಡಿಸಿದವು.

ಒಳಗೊಳಗೇ ಏನೋ ಒಂದು ರೀತಿಯ ಅಪರಾಧಿ ಪ್ರಜ್ಞೆ ಕೆವಿನ್ ಕಾರ್ಟರ್‌ನನ್ನೂ ಬಲವಾಗಿ ಕಾಡುತ್ತಿತ್ತು. ನಿಸ್ಸಹಾಯಕ ಮಗುವನ್ನು ತಾನೇ ಕೈಯಾರೆ ಕೊಂದಷ್ಟು ಆತ ನೊಂದುಕೊಂಡಿದ್ದ. ಅಂತಿಮವಾಗಿ, ಜುಲೈ 27, 1994ರಂದು, ಅಂದರೆ ಆತನಿಗೆ ವಿಶ್ವವಿಖ್ಯಾತ ಪ್ರಶಸ್ತಿ ಬಂದ ಎರಡು ತಿಂಗಳು ತುಂಬುವುದರೊಳಗಾಗಿ ತಾನು ಬಾಲ್ಯದಲ್ಲಿ ಆಟವಾಡುತ್ತಿದ್ದ ಜಾಗಕ್ಕೆ ಹೋಗಿ ಒಂದು ಮರಣಪತ್ರವನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ!

"ಮಗುವನ್ನು ಕುಕ್ಕಿ ತಿನ್ನಲು ಕಾಯುತ್ತಾ ಕುಳಿತಿದ್ದ ರಣಹದ್ದಿಗೂ, ಅಂಥ 'ಅತ್ಯದ್ಭುತ' ಕ್ಷಣವನ್ನು ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿಯುವುದಕ್ಕಾಗಿ ಹೊಂಚು ಹಾಕಿ ಕುಳಿತಿದ್ದ ಕೆವಿನ್ ಕಾರ್ಟರ್‌ಗೂ ಏನು ವ್ಯತ್ಯಾಸ?" ಎಂದು ಕೆಲವರು ಕೇಳಿದ್ದರು. ಈಗ ಬೆಂಗಳೂರಿನ ಬೀದಿಯಲ್ಲಿ ಮಲಗಿರುವ ಅಮಾಯಕರ ಅನ್ನ ಎತ್ತಿಕೊಂಡು ಹೋದ ನಾಯಿಗೂ, ಅಂಥ 'ಅತ್ಯದ್ಭುತ' ಕ್ಷಣವನ್ನು ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿದ ವಿಜಯ ಕರ್ನಾಟಕದ ಪತ್ರಕರ್ತನಿಗೂ ಏನು ವ್ಯತ್ಯಾಸ?



ಭಾರತ ಮುಂದುವರಿದ ದೇಶಗಳ ತಿಪ್ಪೆಗುಂಡಿಯೆ?

ಅತ್ಯಂತ ಮುಂದುವರಿದ ವಿಶ್ವದ ಅನೇಕ ದೇಶಗಳಿಗೆ ಭಾರತ ತಿಪ್ಪೆಗುಂಡಿಯಾಗುತ್ತಿದೆಯೆ? ಇಂತಹದ್ದೊಂದು ಪ್ರಶ್ನೆ ಈಗ ದೇಶದ ಪರಿಸರವಾದಿಗಳನ್ನು ಕಾಡಲಾರಂಭಿಸಿದೆ. ಕಳೆದ ತಿಂಗಳು ತಮಿಳುನಾಡಿನ ಟ್ಯೂಟಿಕೋರಿನ್ ಬಂದರಿಗೆ ಬಂದ ಬೃಹತ್ ಹಡಗೊಂದನ್ನು ಬಂದರು ಅಧಿಕಾರಿಗಳು ಪರಿಶೀಲಿಸಿದಾಗ ಅದರಲ್ಲಿ 195 ಮೆಟ್ರಿಕ್ ಟನ್‌ಗಳಷ್ಟು ತೂಕದ ಅಪಾಯಕಾರಿ ಕಸ ಇರುವುದು ಬೆಳಕಿಗೆ ಬಂತು. ಇದರಲ್ಲಿ ಉಪಯೋಗಿಸಿ ಬಿಸಾಡಿದ ಕಾಂಡೋಮ್‌ನಿಂದ ಹಿಡಿದು ಪರಿಸರಕ್ಕೆ, ಮಾನವ ಆರೋಗ್ಯಕ್ಕೆ ಹಾನಿ ಮಾಡಬಲ್ಲ ರಾಸಾಯನಿಕ ತ್ಯಾಜ್ಯಗಳು ಹಾಗೂ ಮುನಿಸಿಪಾಲಿಟಿಯವರು ನಗರವಾಸಿಗಳಿಂದ ಸಂಗ್ರಹಿಸಿದ ತ್ಯಾಜ್ಯಗಳ ತನಕ ಎಲ್ಲಾ ರೀತಿಯ ಕಸ ಇತ್ತು. ಅಧಿಕಾರಿಗಳು ಹಡಗಿನ ಸಿಬ್ಬಂದಿಯನ್ನು ವಿಚಾರಣೆಗೊಳಪಡಿಸಿದಾಗ ಆ ಹಡಗು ಎಕ್ಸೆಲ್ ಟ್ರೇಡಿಂಗ್ ಕಾರ್ಪೊರೇಶನ್ ಎಂಬ ಕಂಪೆನಿಗೆ ಸೇರಿದ್ದೆಂದೂ, ಅದರಲ್ಲಿದ್ದ ಕಸವನ್ನು ಮಲೇಶಿಯ, ಸ್ಪೇನ್ ಮತ್ತು ಸೌದಿ ಅರೇಬಿಯಗಳಿಂದ ತುಂಬಿಕೊಂಡು ಬಂದಿರುವುದಾಗಿ ಅವರು ಒಪ್ಪಿಕೊಂಡಿದ್ದಾರೆ.

ಜಗತ್ತಿನ ಅನೇಕ ಮುಂದುವರಿದ ದೇಶಗಳು ತ್ಯಾಜ್ಯವನ್ನು ಪುನರ್‌ಬಳಕೆಗೆ ಅನುಕೂಲವಾಗುವಂತೆ ಸಂಸ್ಕರಿಸುವ ಗೋಜಿಗೆ ಹೋಗುವುದಿಲ್ಲ. ಏಕೆಂದರೆ ಅದು ತುಸು ದುಬಾರಿ ಕೆಲಸ. ಮಾತ್ರವಲ್ಲ ಅದರಿಂದ ಕಂಪೆನಿಗೆ ಏನೂ ಲಾಭವಿಲ್ಲ. ಹಾಗಾಗಿ, ಲಾಭವನ್ನೇ ಪ್ರಮುಖ ಗುರಿಯನ್ನಾಗಿಟ್ಟುಕೊಂಡಿರುವ ಖಾಸಗಿ ಕಂಪೆನಿಗಳು ತಮ್ಮಲ್ಲಿ ಸೃಷ್ಟಿಯಾಗುವ ತ್ಯಾಜ್ಯವನ್ನು ದುಬಾರಿ ದುಡ್ಡು ಖರ್ಚು ಮಾಡಿ ಶುದ್ಧೀಕರಿಸುವ ತಾಪತ್ರಯ ತೆಗೆದುಕೊಳ್ಳುವುದಿಲ್ಲ. ಅಂದಮಾತ್ರಕ್ಕೆ ತ್ಯಾಜ್ಯವನ್ನು ಎಲ್ಲೆಂದರಲ್ಲಿ ದೇಶದೊಳಗೆ ಬಿಸಾಡುವಂತೆಯೂ ಇಲ್ಲ. ಆ ದೇಶಗಳಲ್ಲಿ ಪರಿಸರ ರಕ್ಷಣೆಗಾಗಿನ ಚಳವಳಿ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿರುವುದರಿಂದ ಪರಿಸರ ರಕ್ಷಣೆಗಾಗಿ ಸರ್ಕಾರಗಳು ಅನೇಕ ಕಾನೂನುಗಳನ್ನು ಜಾರಿಗೆ ತಂದಿವೆ. ಅಷ್ಟೇ ಅಲ್ಲ, ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತವೆ. ಹೀಗಾಗಿ, ತ್ಯಾಜ್ಯವನ್ನು ದೇಶದೊಳಗೆ ಸಂಸ್ಕರಿಸದೇ ಬಿಸಾಡಿದರೆ ತಪ್ಪಿತಸ್ಥ ಕಂಪೆನಿಗಳು ಭಾರಿ ದಂಡ ತೆರಬೇಕಾಗುತ್ತದೆ. ಹೀಗೆ ತ್ಯಾಜ್ಯವನ್ನು ಸಂಸ್ಕರಿಸುವುದಕ್ಕೂ ಮನಸ್ಸಿಲ್ಲ, ದೇಶದೊಳಗೆ ಬಿಸಾಡುವುದಕ್ಕೂ ಅವಕಾಶವಿಲ್ಲ, ಅಂಥ ಸಂದರ್ಭದಲ್ಲಿ ಅವು ಕಂಡುಕೊಂಡಿರುವ ದಾರಿ ಎಂದರೆ ಎಲ್ಲಾ ತ್ಯಾಜ್ಯವನ್ನು ದೊಡ್ಡ ದೊಡ್ಡ ಹಡಗುಗಳಲ್ಲಿ ತುಂಬಿ ಭಾರತದಂತಹ ತೃತೀಯ ಜಗತ್ತಿನ ಹಿಂದುಳಿದ ದೇಶಗಳಿಗೆ ಕಳಿಸಿಬಿಡುವುದು! ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಸುಮ್ಮನೇ ಕಳಿಸಿಬಿಡುವುದಲ್ಲ, ಮಾರಾಟ ಮಾಡುವುದು!

ನಮ್ಮ ಸರ್ಕಾರಗಳೇನು ಕತ್ತೆ ಕಾಯುತ್ತಿರುತ್ತವೆಯೆ ಅಥವಾ ಕಸವನ್ನು ಕೊಂಡುಕೊಳ್ಳುವುದಕ್ಕೆ ನಮ್ಮ ಜನರಿಗೆ ಹುಚ್ಚು ನಾಯಿ ಕಡಿದಿದೆಯೆ ಎಂಬ ಪ್ರಶ್ನೆಗಳೇಳಬಹುದು. ಅದರ ರಾಜಕೀಯ ಇರೋದೇ ಅಲ್ಲಿ. ಮೊದಲನೆಯದಾಗಿ



ಪಾಶ್ಚಾತ್ಯ ದೇಶಗಳಷ್ಟು ಪ್ರಬಲವಾಗಿ ನಮ್ಮ ದೇಶದಲ್ಲಿ ಪರಿಸರ ಚಳವಳಿ ಇಲ್ಲ. ಪರಿಸರ ರಕ್ಷಣೆಗೆ ಅತ್ಯವಶ್ಯವಿರುವ ಕಾಯ್ದೆ ಕಾನೂನುಗಳು ರೂಪುಗೊಂಡಿಲ್ಲ. ಒಂದೋ ಎರಡೋ ಇದ್ದರೂ ಅವುಗಳಿಂದ ಏನೂ ಪ್ರಯೋಜನವಾಗಿಲ್ಲ. ತ್ಯಾಜ್ಯವನ್ನು ಸಂಸ್ಕರಿಸಿ ಪುನರ್ಬಳಕೆ ಮಾಡುವ ಉದ್ದೇಶದಿಂದ ವಿದೇಶಗಳಿಂದ ತ್ಯಾಜ್ಯಗಳನ್ನು ಆಮದು ಮಾಡಿಸಿಕೊಳ್ಳುವುದಕ್ಕೆ ಖಾಸಗಿ ಕಂಪೆನಿಗಳಿಗೆ ಸರ್ಕಾರ ಅನುಮತಿ ನೀಡುತ್ತದೆ. ಆದರೆ ಪರಿಸರಕ್ಕೆ ಅಪಾಯಕಾರಿಯಾಗಿರುವ ವಸ್ತುಗಳನ್ನು ಆಮದು ಮಾಡಿಕೊಳ್ಳಬಾರದು ಎಂಬ ಶರತ್ತನ್ನೂ ನಾಮಕಾವಾಸ್ತೆಗೆ ಎಂಬಂತೆ ಸೇರಿಸಲಾಗಿದೆ. ಆ ದೇಶಗಳಿಂದ ಕಳಿಸುವ ತ್ಯಾಜ್ಯದಲ್ಲಿ ಅಂಥ ಅಪಾಯಕಾರಿ ವಸ್ತುಗಳೇನಾದರೂ ಇವೆಯೇ ಎಂದು ತಪಾಸಣೆ ಮಾಡುವುದು ತೀರಾ ವಿರಳ. ಅಲ್ಲಿನ ಕಂಪೆನಿಗಳು, ಮುನಿಸಿಪಾಲಿಟಿಗಳು ಇದೇ ನೆಪದಲ್ಲಿ ಎಲ್ಲಾ ರೀತಿಯ ತ್ಯಾಜ್ಯಗಳನ್ನೂ ಸೇರಿಸಿ ದೊಡ್ಡ ದೊಡ್ಡ ಹಡಗುಗಳಲ್ಲಿ ತುಂಬಿಸಿ ಭಾರತಕ್ಕೆ ನಿರಂತರವಾಗಿ ಕಳಿಸುತ್ತಲೇ ಇವೆ. ಭಾರತದಲ್ಲಿ ಹಲವಾರು ಕಂಪನಿಗಳು 'ಕಸ ಆಮದು' ದಂಧೆಯಲ್ಲಿ ತೊಡಗಿವೆ. ಅವು ತಮಗೆ ಬೇಕಾದದ್ದನ್ನು ತೆಗೆದುಕೊಂಡು ಉಳಿದದ್ದನ್ನು ಬಿಸಾಡಿಬಿಡುತ್ತವೆ.

ಮೊನ್ನೆ ತಮಿಳುನಾಡಿನ ಟ್ಯೂಟಿಕೋರಿನ್‌ನಲ್ಲಿ ಸಿಕ್ಕಿರುವುದು ಅಂಥ ಒಂದು ಹಡಗಷ್ಟೆ. ಸರ್ಕಾರದ, ಅಧಿಕಾರಿಗಳ ಗಮನಕ್ಕೆ ಬಾರದಂತೆ ವಿದೇಶದ ತ್ಯಾಜ್ಯ ದೇಶದೊಳಕ್ಕೆ ನಿರಂತರವಾಗಿ ನುಸುಳುತ್ತಲೇ ಇದೆ. 2005-06ರಲ್ಲಿ ಸರ್ಕಾರದ ದಾಖಲೆಗಳ ಪ್ರಕಾರವೇ 16.8 ಲಕ್ಷ ಮೆಟ್ರಿಕ್ ಟನ್ ತ್ಯಾಜ್ಯ ಕಾಗದವನ್ನು ಆಮದು ಮಾಡಿಕೊಳ್ಳಲಾಗಿತ್ತು. ಕಳೆದ ವರ್ಷ ಐಟಿಸಿ ಎಂಬ ಕಂಪೆನಿ ಇಂಗ್ಲೆಂಡ್‌ನಿಂದ ದೊಡ್ಡ ಪ್ರಮಾಣದಲ್ಲಿ ಮುನಿಸಿಪಾಲಿಟಿ ತ್ಯಾಜ್ಯವನ್ನು ಆಮದು ಮಾಡಿಕೊಂಡು ಖಾಲಿ ಸರ್ಕಾರಿ ಜಾಗದಲ್ಲಿ ಬಿಸಾಡಿತ್ತು. ಇದೇ ಕಂಪೆನಿಯೊಂದೇ ಕೋಲ್ಕತ್ತಾದಲ್ಲಿರುವ ತನ್ನ ಬಂದರಿನ ಮೂಲಕ 2007-09ರ ಅವಧಿಯಲ್ಲಿ ಒಂದು ಲಕ್ಷ ಮೆಟ್ರಿಕ್ ಟನ್ ತ್ಯಾಜ್ಯ ಕಾಗದವನ್ನು ಆಮದು ಮಾಡಿಕೊಂಡಿತ್ತು!

ಈ ಹಿಂದೆ 1992-93ರ ಆಸುಪಾಸಿನಲ್ಲಿ ಕೇಂದ್ರ ಸರ್ಕಾರ 'ಸಾವಯವ ಕೃಷಿ'ಯ ಬಗ್ಗೆ ಭಾರಿ ಪ್ರಚಾರ ಮಾಡುತ್ತಿತ್ತು. ಯಾಕೆ ಇದ್ದಕ್ಕಿದ್ದಂತೆ ಸರ್ಕಾರಕ್ಕೆ ಕೃಷಿಯ ಮೇಲೆ, ಕೃಷಿಕರ ಮೇಲೆ, ಪರಿಸರದ ಮೇಲೆ ಇಷ್ಟೊಂದು ಕಾಳಜಿ ಬಂದಿದೆ ಎಂದು ಕೆದಕುತ್ತಾ ಹೋದರೆ ಅಸಲೀ ವಿಚಾರ ಬೆಳಕಿಗೆ ಬಂತು. ಆ ಸಮಯದಲ್ಲಿ ಸರ್ಕಾರವೇ ಖುದ್ದಾಗಿ ನೆದರ್‌ಲ್ಯಾಂಡ್ಸ್‌ನಿಂದ ಅಲ್ಲಿ ಬೇಡವಾದ ಸಗಣಿಯನ್ನು ದುಡ್ಡು ಕೊಟ್ಟು ಕೊಂಡುಕೊಂಡು ಬಂದಿತ್ತು. ನಂತರ ಅದನ್ನು ರೈತರ ಹೊಲಗಳಿಗೆ ಸಾಗಿಸಿ ಕೈತೊಳೆದುಕೊಳ್ಳುವುದಕ್ಕಾಗಿ ಸಾವಯವ ಕೃಷಿಯ ಭಜನೆ ಪ್ರಾರಂಭಿಸಿತ್ತು. ಹೀಗೆ, ವಿದೇಶಗಳ, ಅದರಲ್ಲೂ ವಿಶೇಷವಾಗಿ ಮುಂದುವರಿದ ಶ್ರೀಮಂತ ದೇಶಗಳಿಂದ ತ್ಯಾಜ್ಯ ಆಮದು ಮಾಡಿಕೊಳ್ಳುವ ಸಂಸ್ಕೃತಿಗೆ ಸರ್ಕಾರವೇ ಮುನ್ನುಡಿ ಬರೆದಿತ್ತು. ಈಗ ಅದು ಎಲ್ಲಿಗೆ ಬಂದು ನಿಂತಿದೆಯೆಂದರೆ 'ಭಾರತ ವಿಶ್ವದ ತಿಪ್ಪೆಗುಂಡಿ'ಯಾಗಿ ಪ್ರಸಿದ್ಧಿ ಪಡೆಯುವ ದಾರಿಯಲ್ಲಿ ಹೊರಟಿದೆ.



ರೆಡ್ಡಿಯನ್ನು ಸುತ್ತುವರಿದಿರುವ ವೈರಿಗಳು

ಹೊರನಡೆದ ವಕೀಲ, ತಿರುಗಿ ಬಿದ್ದ ಕೋನಂಕಿ, ಸೆಡ್ಡು ಹೊಡೆದ ಲಾಡ್, ಎಲ್ಲಾ ಅಕ್ರಮಗಳ ಮಾಹಿತಿ ಪಡೆದಿರುವ ದೇವೇಗೌಡ.. ಹೀಗೆ ನಾಲ್ಕು ದಿಕ್ಕುಗಳಿಂದಲೂ ವೈರಿಗಳನ್ನು ಎದುರಿಸುತ್ತಿರುವ ಜನಾರ್ದನ ರೆಡ್ಡಿಯ ಪಾಪದ ಕೊಡ ತುಂಬಿ ತುಳುಕುತ್ತಿದೆ.

ಬಳ್ಳಾರಿಯ ಗಣಿ ಕಳ್ಳ, ರಾಜ್ಯ ಭಾರತೀಯ ಜನತಾ ಪಕ್ಷದ ತಿಜೋರಿ ಮತ್ತು ದೇವೇಗೌಡರ ಜನ್ಮ ಶತ್ರುವಾದ ಜನಾರ್ದನ ರೆಡ್ಡಿಯ ಅದೆಷ್ಟು ಪಾಪಗಳ ಫಲವೋ, ಆತನ ಕೋಪಕ್ಕೆ ಗುರಿಯಾಗಿ ನಲುಗಿದ್ದ ಅದೆಷ್ಟು ಜನರ ಪ್ರಾರ್ಥನೆಯ ಪ್ರತಿಫಲವೋ ಇವತ್ತು ರೆಡ್ಡಿಯ ಹಡಗಿನಲ್ಲೇ ಒಂದು ದೊಡ್ಡ ಬಿರುಕು ಮೂಡಿದೆ. ಅದೆಷ್ಟು ದೊಡ್ಡ ಬಿರುಕೆಂದರೆ, ರೆಡ್ಡಿಯ ಎಲ್ಲಾ ಅವ್ಯವಹಾರಗಳ ಗುಟ್ಟು ಗೊತ್ತಿರುವ ವ್ಯಕ್ತಿಯೊಬ್ಬರು ಆತನ ಎಲ್ಲಾ ಡೀಲ್‌ಗಳ ದಾಖಲೆಗಳನ್ನು ತಂದು ದೇವೇಗೌಡರ ಪಾದಗಳಿಗೆ ಅರ್ಪಿಸಿದ್ದಾರೆ.

ಆತ ಬೇರೆ ಯಾರೂ ಅಲ್ಲ, ಮೊನ್ನೆ ಮೊನ್ನೆಯ ತನಕ ಬಳ್ಳಾರಿಯ ರೆಡ್ಡಿ ಸಹೋದರರ ನಾನಾ ಕಂಪನಿಗಳ ಕಾನೂನಿನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದ ಹೆಸರಾಂತ ವಕೀಲ ರಾಘವಾಚಾರಿ!


ಜನಾರ್ದನ ರೆಡ್ಡಿಯ ವೈಯಕ್ತಿಕ ಕಂಪನಿಯಾಗಿರುವ ಅಥವಾ ಆತ ವ್ಯವಸ್ಥಾಪಕ ನಿರ್ದೇಶಕನಾಗಿರುವ ಕಂಪನಿಗಳು ಒಂದೆರಡಲ್ಲ. ಒಎಂಸಿ, ಏಎಂಸಿ, ಅಂತರಗಂಗ ಮೈನ್ಸ್ ಹೀಗೇ ನಾನಾ ಕಂಪನಿಗಳ ಪ್ರತ್ಯಕ್ಷ ಅಥವಾ ಪರೋಕ್ಷ ಒಡೆಯ ರೆಡ್ಡಿ. ಆ ಎಲ್ಲ ಕಂಪನಿಗಳ ಕಾನೂನಿನ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದವರು ಹೆಸರಾಂತ ವಕೀಲ ರಾಘವಾಚಾರಿ. ಈಗ ಅದೇ ರಾಘವಾಚಾರಿಯು ರೆಡ್ಡಿ ಗ್ರೂಪ್ ಅನ್ನು ಇಡಿಯಾಗಿ ತ್ಯಜಿಸಿರುವುದೇ ಮುಂದೆ ನಡೆಯಲಿರುವ ರಾಜಕೀಯ ಗುದ್ದಾಟಗಳಿಗೆ ಮುನ್ನಾದಿಯಾಗಲಿದೆ ಎಂಬುದು ಕೆಲವರ ಲೆಕ್ಕಾಚಾರ.

ರಾಘವಾಚಾರಿ ಅವರು 20 ವರ್ಷಗಳಿಂದ ಎನ್‌ಎಂಡಿಸಿಯ ದೋಣಿಮಲೈ ಘಟಕದ ಕಾನೂನು ಸಲಹೆಗಾರರಾಗಿದ್ದರು. ಆಗ ಬರಿಗೈದಾಸನಾಗಿದ್ದ ಇದೇ ರೆಡ್ಡಿ ಅದೆಂತಹದ್ದೋ ಚೀಟಿ, ಫಂಡು ಅಂತೆಲ್ಲ ತಿರುಗಾಡುತ್ತಿದ್ದನೇ ಹೊರತು ನೆಟ್ಟಗೆ ಒಂದು ಸಾವಿರ ರೂಪಾಯಿಯ ಮುಖವನ್ನೂ ಕಂಡಿರಲಿಲ್ಲ.

ಅದೆಲ್ಲ ಬದಿಗಿರಲಿ, ಇದೇ ಎನ್‌ಎಂಡಿಸಿ ಕಂಪನಿಯ ಗಣಿ ಪ್ರದೇಶದಲ್ಲಿ ರೆಡ್ಡಿ ಗ್ಯಾಂಗು ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿತ್ತು. ಇದನ್ನು ದಾಖಲೆಗಳ ಸಮೇತ ಪತ್ತೆ ಹಚ್ಚಿದ ಎನ್‌ಎಂಡಿಸಿಯ ಅಧಿಕಾರಿಗಳು ರೆಡ್ಡಿ ಮತ್ತಾತನ ಚೇಲಾಗಳಿಗೆ ಅತಿಕ್ರಮ ಪ್ರವೇಶ ಮತ್ತು ಅಕ್ರಮ ಗಣಿಗಾರಿಕೆ ಕುರಿತು ನೋಟೀಸ್ ಜಾರಿ ಮಾಡಲು ರಾಘವಾಚಾರಿ ಅವರಿಗೆ ಆದೇಶ ನೀಡಿಯೇಬಿಟ್ಟರು.

ರಾಘವಾಚಾರಿ ಅವರು ಕೂಡಲೇ ರೆಡ್ಡಿ ಹಾಗೂ ಆತನ ಚೇಲಾಗಳಿಗೆ ನೋಟೀಸ್ ಜಾರಿ ಮಾಡಿಯೇ ಬಿಟ್ಟರು. ಇದರಿಂದ ಭೂಮಿ-ಆಕಾಶ ಒಂದಾದಂತೆ ಕೋಪೋದ್ರಿಕ್ತನಾದ ರೆಡ್ಡಿ ಕೂಡಲೇ ರಾಘವಾಚಾರಿ ಅವರನ್ನು ತನ್ನಲ್ಲಿಗೆ ಕರೆಯಿಸಿ "ಮಾ ಇಂಟ ಡಬ್ಬು ತಿನ್ನಿ ಮಾಕೇ ನೋಟೀಸ್ ಇಚ್ಚೇಂತಾ ಪೆದ್ದ ಮನಿಸಿ ಆಯಿನಾವಾ?" (ನಮ್ಮ ಮನೆ ದುಡ್ಡು ತಿಂದು ನನಗೇ ನೋಟೀಸ್ ಕೊಡುವಷ್ಟು ದೊಡ್ಡ ಮನುಷ್ಯ ಆಗ್ಬಿಟ್ಟೆಯಾ?) ಎಂದೆಲ್ಲ ರಾಘವಾಚಾರಿ ಅವರಿಗೆ ಧಮಕಿ ಹಾಕಿದ್ದಾನೆ.

ರೆಡ್ಡಿಯ ಈ ವರ್ತನೆಯಿಂದ ದಂಗಾದ ರಾಘವಾಚಾರಿಗೂ ಕೋಪ ಬಂದಿದೆ. ಅವರೂ ಏಕಾಏಕಿ ಮಾತಿನ ಚಕಮಕಿಗೆ ಇಳಿದು "ಚೂಡು, ನೀವು ಈರೋಜು ಮೈನಿಂಗ್‌ಕಿ ವಚ್ಚಿ ಅನ್ಯಾಯಂ ಚೇಸ್ತು ಉನ್ನಾವು. ದಾನಿಕಿ ನಾ ನಾಲೆಡ್ಜ್‌ನಿ ವಾಡುಕೊನ್ನಿ ನಾಕೇ ಮೋಸಂ ಚೇಸ್ತುನ್ನಾವು. ಎನ್‌ಎಂಡಿಸಿ ವಾಳ್ಳು 20 ಸಂವತ್ಸರಾಲು ನುಂಚಿ ನಾಕು ಕ್ಲೈಂಟ್ಸ್, ವಾಳ್ಳು ನೀಲಾಗ ಅನ್ಯಾಯಂ ಚೇಸಲೇದು" (ನೋಡು, ಈ ದಿನ ಮೈನಿಂಗ್‌ಗೆ ಬಂದು ಅನ್ಯಾಯ ಮಾಡ್ತಾ ಇದ್ದೀಯ. ನನ್ನ ಜ್ಞಾನವನ್ನೇ ಉಪಯೋಗಿಸಿಕೊಂಡು ನನಗೇ ಅನ್ಯಾಯ ಮಾಡ್ತಿದ್ದಿಯಾ. ಎನ್‌ಎಂಡಿಸಿ 20 ವರ್ಷಗಳಿಂದ ನನ್ನ ಕ್ಲೈಂಟ್ಸ್ ಆಗಿದ್ದಾರೆ. ಅವರು ನಿನ್ನ ತರಹ ನನಗೆ ಅನ್ಯಾಯ ಮಾಡಿಲ್ಲ) ಎಂದೆಲ್ಲಾ ಏರಿದ ದನಿಯಲ್ಲೇ ರೆಡ್ಡಿಗೆ ಮಾತಿನ ತಿರುಗೇಟು ನೀಡಿದ್ದಾರೆ.


ಜನಾರ್ದನ ರೆಡ್ಡಿ

ಆಮೇಲೆ ಅದೇನೇನು ನಡೆಯಿತೋ, ಅಲ್ಲಿಂದ ಹೊರಬಂದ ರಾಘವಾಚಾರಿ ಅವರು ಇನ್ನು ಮುಂದೆ ರೆಡ್ಡಿಯೂ ಬೇಡ, ರೆಡ್ಡಿಯ ಸಹವಾಸವೂ ಬೇಡ, ರೆಡ್ಡಿಯ ದಂಧೆಗಳ ವಕಾಲತ್ತೂ ಬೇಡ, ಆತನ ಅನ್ಯಾಯದ ಹಣವೂ ಬೇಡ ಎಂದು ಆತನ ಕಂಪನಿಗಳ ಲೀಗಲ್ ಅಡ್ವೈಸರ್ ಹುದ್ದೆಗೆ ರಾಜೀನಾಮೆ ನೀಡಬೇಕೆಂದು ನಿರ್ಧರಿಸಿದ್ದಾರೆ. ಆದರೂ ಕೊನೆಗೊಂದು ಪ್ರಯತ್ನ ಎಂಬಂತೆ ರೆಡ್ಡಿಗೆ ಫೋನ್ ಮಾಡಿ "ನೇನು ಇಂಕ ಮೀತೋ ಉಂಡನು" (ನಾನು ನಿಮ್ಮ ಜೊತೆ ಇನ್ನೂ ಇದ್ದೀನಿ) ಎಂದರಂತೆ.


ದೇವೇಗೌಡ

ರೆಡ್ಡಿಗೆ ತಾಳ್ಮೆ ಎಂಬುದಿದ್ದಿದ್ದರೆ 'ಆಗಿದ್ದು ಆಯಿತು, ಇಬ್ಬರೂ ಎಲ್ಲವನ್ನು ಮರೆತುಬಿಡೋಣ'' ಎಂದು ಸುಮ್ಮನಾಗಬಹುದಿತ್ತು. ಆದರೆ ರೆಡ್ಡಿಗೂ ತಾಳ್ಮೆಗೂ ಎತ್ತಿಂದೆತ್ತಣ ಸಂಬಂಧ?! ಮೊನ್ನಿನವರೆಗೂ 'ನಮ್ಮ ಪಾಲಿಗೆ ನೀವೇ ದೇವರು' ಎಂದು ಯಾವ ರಾಘವಾಚಾರಿಯ ಕಾಲುಮುಟ್ಟ ನಮಸ್ಕರಿಸುತ್ತಿದ್ದನೋ ಅದೇ ರಾಘವಾಚಾರಿ ಫೋನ್ ಮಾಡಿದ್ದಾಗ ಅವರ ವಿರುದ್ಧ ಏಕವಚನವನ್ನು ಪ್ರಯೋಗಿಸಿ ಬಾಯಿಗೆ ಬಂದದ್ದನ್ನೆಲ್ಲ ಉಗುಳಿದ್ದಾನೆ. ಅಷ್ಟು ಸಾಲದೆಂಬಂತೆ ರಾಘವಾಚಾರಿಗೆ ಸವಾಲುಗಳನ್ನೂ ಎಸೆದಿದ್ದಾನೆ ಎಂದು ರೆಡ್ಡಿ ಆಪ್ತರು ಮಾತನಾಡಿಕೊಳ್ಳುತ್ತಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳಿಂದ ಬೇಸತ್ತ ರಾಘವಾಚಾರಿ ತಮ್ಮ ನಿವಾಸವನ್ನು ಬೆಂಗಳೂರಿಗೆ ಶಿಫ್ಟ್ ಮಾಡಿದರು. ಹೀಗೆ ಕೆಲ ದಿನಗಳನ್ನು ಕಳೆದ ನಂತರ ಅವರು ನೇರವಾಗಿ ಸಂಪರ್ಕಿಸಿದ್ದು ತಮ್ಮ ಹೊಸ ಶತ್ರುವಿನ ಹಳೇ ಶತ್ರು ಎಚ್.ಡಿ. ದೇವೇಗೌಡರನ್ನು.

ದೇವೇಗೌಡರ ಪುತ್ರ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯ ವಿರುದ್ಧ ರೆಡ್ಡಿ ಮಾಡಿದ್ದ 150 ಕೋಟಿ ರೂಪಾಯಿಯ ಗಣಿಕಪ್ಪ ಲಂಚ ಹಗರಣದ ಎಲ್ಲಾ ಮಾಹಿತಿಗಳನ್ನು ದಾಖಲೆ ಸಮೇತವಾಗಿ ದೊಡ್ಡ ಗೌಡರ ಕೈಗಿಟ್ಟಿದ್ದಾರೆ ರಾಘವಾಚಾರಿ.

ಜೊತೆಗೆ, ರೆಡ್ಡಿಯ ಮೈನಿಂಗ್ ಕಂಪನಿಗಳು ನಡೆಸುತ್ತಿರುವ ದಂಧೆಗಳು, ಅಕ್ರಮ ಗಳಿಕೆ, ಸಹೋದರರ ನಡುವಿನ ಕೋಲ್ಡ್‌ವಾರ್, ಕೌಟುಂಬಿಕ ಕಲಹದಂತಹ ಎಲ್ಲಾ ಮಾಹಿತಿಗಳನ್ನೂ ಗೌಡರಿಗೆ ವಿವರಿಸಿದ್ದಾರೆ. ಬಲ್ಲವರ ಪ್ರಕಾರ ಬಳ್ಳಾರಿ ಜಿಲ್ಲೆಯ ಇಂಚಿಂಚಿನಲ್ಲಿ ರೆಡ್ಡಿಗಳು ನಡೆಸುತ್ತಿರುವ ಅಕ್ರಮ ಗಣಿಗಾರಿಕೆಯನ್ನು ಕುರಿತ ಸಮಗ್ರ ಮಾಹಿತಿಯನ್ನೂ ನೀಡಿದ್ದಾರಂತೆ.

ರಾಘವಾಚಾರಿ ನೀಡಿರುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಅಧ್ಯಯನ ಮಾಡುತ್ತಿರುವ ಗೌಡರ ತಮ್ಮ ಲೀಗಲ್ ಅಡ್ವೈಸರ್ಸ್‌ಗಳನ್ನು ಕೇಳಿ ಬರುವ ದಿನಗಳಲ್ಲಿ ರೆಡ್ಡಿ ಗ್ಯಾಂಗ್‌ಅನ್ನು ಅಟ್ಯಾಕ್ ಮಾಡಲು ಕಾರ್ಯತಂತ್ರ ರೂಪಿಸುತ್ತಿದ್ದಾರೆ ಎಂದು ಈಗ ಅಂದಾಜಿಸಲಾಗುತ್ತಿದೆ.

ಕೋನಂಕಿ ಜೊತೆ ರೆಡ್ಡಿ 'ಕೋಲ್ಡ್‌ವಾರ್'

ವಿವಾದಿತ ಪ್ರದೇಶದಲ್ಲಿ ಗಣಿ ಉದ್ಯಮವನ್ನು ಯಶಸ್ವಿಯಾಗಿ ನಡೆಸಲಿಕ್ಕಾಗಿಯೇ ಒಲ್ಲದ ಮನಸ್ಸಿನಿಂದ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ ಬೆಸ್ಟ್ ಸ್ಕೂಲ್ ಕೋನಂಕಿ ರಾಮಪ್ಪ ಮತ್ತು ಜಿ. ಜನಾರ್ದನ ರೆಡ್ಡಿ ಮಧ್ಯೆ ಈಗ ಕೋಲ್ಡ್‌ವಾರ್ ಡಿಕ್ಲೇರ್ ಆಗಿದೆ.

ಈ ಮಧ್ಯೆ ವಿವಾದಿತ ವಿ. ನಾಗ್ ಮೈನ್ಸ್ ಪ್ರದೇಶದಿಂದ 2.50 ಲಕ್ಷ ಟನ್ ಕಬ್ಬಿಣದ ಅದಿರನ್ನು ಅಕ್ರಮವಾಗಿ ರವಾನೆ ಮಾಡಿರುವ ರೆಡ್ಡಿ, ಆ ಮೈನ್ಸ್‌ನ ಮಾಲೀಕರಾಗಿದ್ದ ದಿವಂಗತ ವಿ. ಜಯರಾಂ ಅವರ ಮಗನನ್ನು ಕರೆದು ಆತನಿಗೆ ಕೋಟ್ಯಾಂತರ ರೂಪಾಯಿಯ ಆಮಿಷವನ್ನೂ ತೋರಿಸಿದ್ದಾನೆ.


ಅನಿಲ್ ಲಾಡ್

"ಕಮ್ಮಾ ಕೋನಂಕಿ ಮೀಕಂತಾ ಮೋಸಂ ಚೇಸ್ತುನ್ನಾಡು, ಮೇಮು-ಮೀರು ಚೇರ್ಕೊನ್ನಿ ಮೈನಿಂಗ್ ಚೇಸ್ತಾಮ್. ಕೋಟ್ಲು ಕೊದ್ದಿಗ ಡಬ್ಬು ಮೀಕಿ ಚೇರ್ತಾವಿ'' (ಕಮ್ಮಾ ಕೋನಂಕಿ ನಿಮಗೆಲ್ಲ ಮೋಸ ಮಾಡ್ತಿದ್ದಾನೆ. ನಾವು ನೀವು ಸೇರಿಕೊಂಡು ಮೈನಿಂಗ್ ಮಾಡೋಣ. ಕೋಟಿ ಕೋಟಿ ದುಡ್ಡು ನಿಮಗೆ ಸೇರುತ್ತೆ) ಎಂದೆಲ್ಲಾ ಹೇಳಿದ್ದಾನೆ ರೆಡ್ಡಿ. ಆ ಮೂಲಕ ತನ್ನ ಪಕ್ಷದಲ್ಲೇ ಇರುವ ಕೋನಂಕಿ ವಿರುದ್ಧ ಜಯರಾಂ ಅವರ ಮಗನನ್ನು ಎತ್ತಿಕಟ್ಟಿ ದುಡ್ಡಿನ ಜಿಹಾದ್ ಕೂಗಿದ್ದಾನೆ.

ಈ ಬೆಳವಣಿಗೆಯಿಂದ ವಿಚಲಿತನಾದ ವಿ. ಜಯರಾಂ ಮಗ ತನ್ನ ತಾಯಿಬಳಿ ರೆಡ್ಡಿ ಹೇಳಿದ್ದನ್ನೆಲ್ಲ ಹೇಳಿದ್ದಾನೆ. ಆಗ ಆಕೆ ಎಚ್ಚೆತ್ತುಕೊಂಡರಲ್ಲದೆ, ರೆಡ್ಡಿ ತೋರಿದ್ದ ದುಡ್ಡಿಗೆ ಆಸೆ ಬೀಳದೇ ಕೋನಂಕಿ ರಾಮಪ್ಪ ತಮ್ಮ ಸಂಸಾರಕ್ಕೆ ನೀಡಿದ್ದ ನೆರವಿಗೆ ಕೃತಜ್ಞತೆಯ ಬೆಲೆ ಕೊಟ್ಟಿದ್ದಾರೆ. ಅವರು ಕೂಡಲೇ ಕೋನಂಕಿ ಅವರನ್ನು ಭೇಟಿಯಾಗಿ "ಚೂಡನ್ನಾ, ಮೇಮು ಕಷ್ಟಂಲೋ ಉನ್ನಪ್ಪುಡು ಮೀರು ಮಾಕಿ ಡಬ್ಬಿಚ್ಚಿ ಸಹಾಯಂ ಚೇಶಾರು. ಮೀ ಹೆಲ್ಪ್‌ನುಂಚೇ ಮನಂ ಕೊಂಚಂ ಡಬ್ಬು ಚೂಸ್ಯಾಂ'' (ನೋಡಣ್ಣ, ನಾವು ಕಷ್ಟದಲ್ಲಿದ್ದಾಗ ನೀವು ನಮಗೆ ದುಡ್ಡು ಕೊಟ್ಟು ಸಹಾಯ ಮಾಡಿದ್ದೀರಾ. ನಿಮ್ಮ ನೆರವಿನಿಂದಲೇ ನಾವು ಸ್ವಲ್ಪ ಹಣ ಗಳಿಸಿದ್ದೇವೆ) ಎಂದು ಹೇಳಿ ಎಲ್ಲಾ ವಿಚಾರಗಳನ್ನು ಕೋನಂಕಿ ರಾಮಪ್ಪನ ಗಮನಕ್ಕೆ ತಂದು ಗಳಗಳನೇ ಅತ್ತಿದ್ದಾರೆ.

ಈ ವಿಚಾರ ರೆಡ್ಡಿಗೆ ಗೊತ್ತಾದ ಕೂಡಲೇ ವಿವಾದಿತ ವಿ. ನಾಗ್ ಮೈನಿಂಗ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಯಬಾರದೆಂದು ಮೈನ್ಸ್ ಅಂಡ್ ಜ್ಯುಯಾಲಜಿ ಹಾಗೂ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಂದ ಆದೇಶವನ್ನು ಜಾರಿ ಮಾಡಿಸಿದ್ದಾನೆ. ಪರಿಣಾಮವಾಗುವ ವಿ. ನಾಗ್ ಮೈನ್ಸ್‌ನಲ್ಲಿ ಈಗ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ.

ಜನಾರ್ದನ ರೆಡ್ಡಿ ಮತ್ತು ಕೋನಂಕಿ ರಾಮಪ್ಪ ಮಧ್ಯದ ಈ ಕೋಲ್ಡ್‌ವಾರ್ ವಿಷಯಗಳೂ ಈಗ ದೇವೇಗೌಡರ ಪಡಸಾಲೆಯನ್ನು ಸೇರಿದೆ. ಅಷ್ಟೇ ಅಲ್ಲ, ಬಲ್ಲವರ ಪ್ರಕಾರ ಕೋನಂಕಿ ರಾಮಪ್ಪ ಅವರು ವಕೀಲ ರಾಘವಾಚಾರಿ ಅವರ ನೆರವು ಪಡೆದು ಒಂದೆರಡು ಬಾರಿ ದೇವೇಗೌಡರನ್ನು ಗುಟ್ಟಾಗಿ ಭೇಟಿ ಆಗಿದ್ದಾರಂತೆ.

ಲಾಡ್‌ನಿಂದಲೂ ತಿರುಗೇಟು

ಕೂಡ್ಲಿಗಿ ವಿಧಾನಸಭಾದಿಂದ ಬಿಜೆಪಿ ಶಾಸಕನಾಗಿದ್ದುಕೊಂಡೇ ಜೆಡಿಎಸ್‌ನ ಕುಮಾರಸ್ವಾಮಿಯೊಂದಿಗೆ ಸ್ನೇಹ ಗಳಿಸಿದ್ದ ಗಣಿ ಉದ್ಯಮಿ ಸಂಡೂರಿನ ಮರಾಠಾ ಅನಿಲ್ ಎಚ್. ಲಾಡ್ ಕಾಂಗ್ರೆಸ್‌ನಿಂದ ಬಳ್ಳಾರಿ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತು, ಈಗ ರಾಜ್ಯಸಭಾ ಸದಸ್ಯನಾಗಿದ್ದರೂ ಬಳ್ಳಾರಿ ರೆಡ್ಡಿಗಳ ಜೀವಬೆದರಿಕೆಗೆ ಭಯಬಿದ್ದಿದ್ದ.

ಬಳ್ಳಾರಿಗೆ ಕದ್ದುಮುಚ್ಚಿ ಬಂದು ಹೋಗುತ್ತಿದ್ದ ಅನಿಲ್, ತನ್ನ ಗಣಿ ಉದ್ಯಮವನ್ನು ಮುನ್ನಡಸಲೆಂದೇ 80 ಕೋಟಿ ರೂಪಾಯಿಗಳ ಕಪ್ಪವನ್ನು ರೆಡ್ಡಿ ಗ್ಯಾಂಗಿಗೆ ನೀಡಿ ಅದರೊಂದಿಗೆ ಪ್ರತಿ ಟನ್‌ಗೆ ಇಂತಿಷ್ಟು ಹಫ್ತಾ ಕೂಡ ನೀಡಲು ಒಪ್ಪಿಕೊಳ್ಳುವ ಮೂಲಕ ರೆಡ್ಡಿ ಗ್ಯಾಂಗಿಗೆ ಶರಣಾಗಿದ್ದರು.

ಆದರೆ ಈ ವಿಷಯ ಅದು ಹೇಗೋ ಕಾಂಗ್ರೆಸ್ ನಾಯಕರಿಗೆ ತಿಳಿದು, ಅದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಅವರ ಪುತ್ರ ರಾಹುಲ್ ಕಿವಿ ತಲುಪಿದೆ. ಸಹಜವಾಗಿಯೇ ಕಾಂಗ್ರೆಸ್ ನಾಯಕರು ಅನಿಲ್ ಲಾಡ್‌ನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇದರಿಂದ ನಲುಗಿದ ಅನಿಲ್ ಲಾಡ್ ಕೂಡಲೇ ರೆಡ್ಡಿಗೆ ಫೋನ್ ಮಾಡಿ "ನಾನಿನ್ನು ನಿಮ್ಗೆ ಯಾವುದೇ ಮಾಮೂಲು ಕೊಡೋದಿಲ್ಲ. ಬೇಕಾದ್ರೆ ಮೈನ್ಸ್ ಮುಚ್ಚಬಿಡ್ತೇನೆ'' ಎಂದು ತಿರುಗೇಟು ನೀಡಿದ್ದಾರೆ.

ಹೀಗೆ ಒಂದೆಡೆ ವಕೀಲ ರಾಘವಾಚಾರಿಯ ಶತ್ರುತ್ವ, ಇನ್ನೊಂದೆಡೆ ತನ್ನ ಬಿಜೆಪಿ ಪಕ್ಷದವರೇ ಆದ ಕೋನಂಕಿ ರಾಮಪ್ಪ, ಮತ್ತೊಂದೆಡೆ ಕಾಂಗ್ರೆಸ್ ನಾಯಕರಿಗೆ ಹತ್ತಿರವಾಗಿರುವ ಸಂಸದ ಅನಿಲ್ ಲಾಡ್ ---ಮೂರು ದಿಕ್ಕಿನಿಂದಲೂ ರೆಡ್ಡಿ ತನ್ನ ಪ್ರಭಾವಿ ವೈರಿಗಳನ್ನು ಈಗ ಎದುರಿಸುತ್ತಿದ್ದಾನೆ. ಆತನ ದುರಾದೃಷ್ಟಕ್ಕೆ ನಾಲ್ಕನೆ ದಿಕ್ಕಿನಲ್ಲಿ ಸಾಕ್ಷಾತ್ ದೇವೇಗೌಡರೇ ನಿಂತಿದ್ದಾರೆ.

ಆಂಧ್ರದ ಮಾಜಿ ಮುಖ್ಯಮಂತ್ರಿ ವೈ.ಎಸ್.ಆರ್‌ನ ನಿಧನದ ನಂತರ ರಾಜಕೀಯವಾಗಿ ಅಧೋಗತಿಗೆ ಇಳಿಯುತ್ತಿರುವ ಜನಾರ್ದನ ರೆಡ್ಡಿ ಈ ಹೊಸ ಬೆಳವಣಿಗೆಯಿಂದ ಸಹಜವಾಗಿಯೇ ವಿಚಲಿತನಾಗಿದ್ದಾನೆ. ಇಷ್ಟೆಲ್ಲದರ ನಡುವೆಯೇ ರೆಡ್ಡಿ ತನ್ನೊಂದಿಗೆ ಅದ್ದೂರಿ ಮದುವೆ ಕುಖ್ಯಾತಿಯ ಶಾಸಕ ಸುರೇಶ್‌ಬಾಬುವನ್ನು ಕರೆದುಕೊಂಡು ಮುಂಬೈಗೆ ಹಾರಿ ಹೋಗಿರುವುದು ನಾನಾ ಶಂಕೆಗಳಿಗೆ ಕಾರಣವಾಗಿದೆ.

ಜನಾರ್ದನ ರೆಡ್ಡಿಯ ಪಾಪದ ಕೊಡ ತುಂಬಿತುಳುಕುತ್ತಿದೆ...

ಬಿಸಿಯೂಟದ ಹೆಸರಲ್ಲಿ ರೋಲ್‌ಕಾಲ್, ಸ್ಮಗ್ಲಿಂಗ್

ಇಸ್ಕಾನ್ ಅಕ್ಕಿಕಳ್ಳರು





ಶ್ರೀಕೃಷ್ಣ ಪರಮಾತ್ಮನನ್ನೇ ಫುಟ್‌ಪಾತಿಗೆ ತಂದು ಮಾರಾಟಕ್ಕಿಟ್ಟ ಇಸ್ಕಾನ್ ಖದೀಮರಿಗೆ ಮಕ್ಕಳ ಬಿಸಿಯೂಟದ ಅಕ್ಕಿ ಯಾವ ಲೆಕ್ಕ?

ಅಕ್ಷರ ದಾಸೋಹ ಎಂಬ ಸರ್ಕಾರಿ ಕಾರ್ಯಕ್ರಮವನ್ನೇ ಹೈಜಾಕ್ ಮಾಡಿ ಅದಕ್ಕೆ 'ಅಕ್ಷಯ ಪಾತ್ರೆ' ಎಂಬ ಹೆಸರಿಟ್ಟು ಬೇಕಾಬಿಟ್ಟಿ ಫಾರಿನ್ ಫಂಡು ದೋಚುವ ಇಸ್ಕಾನ್‌ನ ಹುಟ್ಟುಬುದ್ಧಿ ಅಂತಿಮವಾಗಿ ಮಕ್ಕಳ ಅನ್ನಕ್ಕೇ ಕನ್ನ ಹಾಕುವ ಮಟ್ಟಕ್ಕೆ ಬಂದು ನಿಂತಿದೆ. ಇದೇ ಅಕ್ಟೋಬರ್ 16 ರಂದು ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯ ಕನ್ಯಾಕುಮಾರಿ ಕಲ್ಯಾಣ ಮಂಟಪದಲ್ಲಿ ಸಿಕ್ಕಿಬಿದ್ದ ನಾಲ್ಕು ಸಾವಿರ ಕ್ವಿಂಟಾಲ್ ಅಕ್ಕಿಮೂಟೆಗಳೆಲ್ಲವೂ ಇಸ್ಕಾನ್‌ನದ್ದೇ ಎಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಅದು ಅಕ್ಷರ ದಾಸೋಹಕ್ಕೆಂದು ಸರ್ಕಾರ ಬಿಡುಗಡೆ ಮಾಡಿದ್ದೆಂದು ಸ್ವತಃ ಇಸ್ಕಾನ್ ಅಧ್ಯಕ್ಷ ಮಧು ಪಂಡಿತದಾಸನೇ ಒಪ್ಪಿಕೊಂಡಿದ್ದಾನೆ.

ಮಕ್ಕಳ ಬಿಸಿಯೂಟದ ಇಂಥಾ ಅಕ್ಕಿ ಮೂಟೆಗಳನ್ನೇ ಇಸ್ಕಾನ್ ಧೂರ್ತರು ಕೇಜಿಗೆ ಹದಿನೈದು ರೂಪಾಯಿಯಂತೆ ಮಾರಿಕೊಳ್ಳಲು ಹೊರಟಿದ್ದರು. ಅದೂ ಪ್ರವಾಹಪೀಡಿತರ ಅನ್ನದಾಸೋಹಿಗಳಿಗೆ!

ನೆರೆ ಹಾವಳಿಯಿಂದ ಬೀದಿಗೆ ಬಿದ್ದ ಉತ್ತರ ಕರ್ನಾಟಕದ ಜನಕ್ಕೆ ಅಕ್ಕಿ ಕಳಿಸಲೆಂದು ಯಾರೋ ಧರ್ಮಾತ್ಮರು ಅಕ್ಕಿ ಖರೀದಿಸ ಬಯಸಿದರೆ, ಅಂಥವರಿಗೆ ಇಸ್ಕಾನ್ ಅಕ್ಷರ ದಾಸೋಹದ ಅಕ್ಕಿಯನ್ನೇ ಕದ್ದು ಮಾರಲು ಹೊರಟಿತ್ತು!

ಅದೂ ಕೇಜಿಗೆ ಹದಿನೈದು ರೂಪಾಯಿಯಂತೆ!

ಸರ್ಕಾರದ ಅಕ್ಕಿಯನ್ನು, ಅದೂ ಶಾಲಾಮಕ್ಕಳ ಅನ್ನವನ್ನು ಕದ್ದು ನೆರೆಪೀಡಿತರಿಗೆ ಮಾರಿಕೊಳ್ಳುವ ಇಸ್ಕಾನ್ ಎಂಬ ಇಂಟರ್‌ನ್ಯಾಷನಲ್ ಖದೀಮರಿಗೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮ ಕೂಡ 'ಮನುಷ್ಯತ್ವ'ವನ್ನು ಕಲಿಸದೇ ಹೋದ! ಇಸ್ಕಾನ್ ಪ್ರಕಾರವೇ ಅದೊಂದು ಕೃಷ್ಣ ಭಕ್ತರ ಶ್ರದ್ಧಾ ಕೇಂದ್ರ. ರಾಜಾಜಿನಗರದ ಹರೇಕೃಷ್ಣ ಬೆಟ್ಟದಲ್ಲಿ ಹೈಟೆಕ್ ರೆಸ್ಟೋರೆಂಟೊಂದನ್ನು ಹೋಲುವ ದೇವಸ್ಥಾನ ಕಟ್ಟಿಸಿ, ಬಿಸಿಬೇಳೆಬಾತು, ಪುಳಿಯೋಗರೆ ಪ್ರಸಾದವನ್ನೇ ಹೋಟೆಲ್ ಮಾದರಿಯಲ್ಲಿ ಮಾರಲು ನಿಂತದ್ದು ಇಸ್ಕಾನ್‌ನ ಪ್ರಾಥಮಿಕ ದಂಧೆಯಷ್ಟೇ. ಕರ್ನಾಟಕದ ಜನ ಕೃಷ್ಣನಲ್ಲಿ ಭಕ್ತಿಯಿಟ್ಟೇ ಇಸ್ಕಾನ್‌ಗೆ ಕಾಸು ಕೊಟ್ಟರು. ಜನರ ದುಡ್ಡಲ್ಲೇ ದೇವಸ್ಥಾನ ತಲೆಯೆತ್ತಿತ್ತು. ಬಟ್ಟೆ ಒಗೆದು ಹೊಟ್ಟೆ ಹೊರೆಯುತ್ತಿದ್ದ ಮಡಿವಾಳರನ್ನೆಲ್ಲ ಬೀದಿಗೆ ಹಾಕಿದ ಆಗಿನ ಮುಖ್ಯಮಂತ್ರಿ ಹೆಗಡೆ ಇಸ್ಕಾನ್‌ಗೆಂದು ಅಗಸರ ಬೆಟ್ಟವನ್ನೇ ಬರೆದು ಕೊಟ್ಟರು.

ಪ್ರಾರಂಭದಲ್ಲಿ ಒಂದಷ್ಟು ಶಾಲಾ ಮಕ್ಕಳಿಗೆಂದು ಮಧ್ಯಾಹ್ನದ ಊಟ ಆರಂಭಿಸಿದ ಇಸ್ಕಾನ್‌ಗೆ ಅದೇನು ಯೋಗ್ಯತೆಯಿದೆಯೆಂದು ಮುಖ್ಯಮಂತ್ರಿ ಕೃಷ್ಣ ಅಕ್ಷರ ದಾಸೋಹವನ್ನು ಒಪ್ಪಿಸಿದರೊ?

ಕಳ್ಳರ ಕೈಗೆ ಬಿಸಿಯೂಟವನ್ನು ಒಪ್ಪಿಸಿದರೆ ಏನಾಗುತ್ತದೆ ಎಂಬುದಕ್ಕೆ ಅಕ್ಟೋಬರ್ 16 ರ ಘಟನೆಯೊಂದೇ ಸಾಕು. ಅದು ಇಡೀ ಉತ್ತರ ಕರ್ನಾಟಕವೇ ಪ್ರವಾಹಕ್ಕೇ ಸಿಲುಕಿ ತತ್ತರಿಸುತ್ತಿದ್ದ ಸಂದರ್ಭ. ಇತ್ತ ಬೆಂಗಳೂರಿನ ಜನ ನೆರೆ ಸಂತ್ರಸ್ತರಿಗೆಂದು ಪರಿಹಾರ ಸಂಗ್ರಹಣೆಗಿಳಿದಿದ್ದರು. ಈ ಪೈಕಿ ರಾಜರಾಜೇಶ್ವರಿನಗರದ ಮಾಜಿ ಸಿಎಂಸಿ ಅಧ್ಯಕ್ಷ ಹನುಮಂತರಾಯಪ್ಪನವರಿಗೆ ಒಂದಷ್ಟು ಲಾರಿಗಳಲ್ಲಿ ಅಕ್ಕಿಮೂಟೆಗಳನ್ನು ಹಾಕಿ ಉತ್ತರ ಕರ್ನಾಟಕದ ಪ್ರವಾಹಪೀಡಿತರಿಗೆ ಕಳಿಸುವ ಇರಾದೆ. ತನ್ನಿಮಿತ್ತ ಕಮ್ಮಿ ದರಕ್ಕೆ ಎಲ್ಲಿ ಅಕ್ಕಿ ಸಿಗಬಹುದೆಂದು ಯಶವಂತಪುರದ ಆರ್‌ಎಂಸಿ ಯಾರ್ಡಿನ ಬ್ರೋಕರುಗಳನ್ನು ವಿಚಾರಿಸಿದ್ದಾರೆ.

ಅಲ್ಲಿ ಹನುಮಂತರಾಯಪ್ಪನವರಿಗೆ ಗಂಟುಬಿದ್ದವನು ಇಸ್ಕಾನ್‌ನ ಬ್ರೋಕರ್ ಸುಬ್ಬಣ್ಣ ಎಂಬ ಕೋಮಟಿ ಶೆಟ್ಟಿ. ಬೆಂಗಳೂರಿನ ಯಾರೇ ನ್ಯಾಯಬೆಲೆ ಅಂಗಡಿಯವನ ಮುಂದೆ ಈತನ ಹೆಸರೆತ್ತಿದರೆ, ಬಡಬಗ್ಗರ ಪಾಲಿನ ಸರ್ಕಾರಿ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆಗಳನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುವ ದೊಡ್ಡದೊಂದು ಜಾಲವೇ ತೆರೆದುಕೊಳ್ಳುತ್ತದೆ. ಸುಬ್ಬಣ್ಣ ಬೆಂಗಳೂರಿನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನಟೋರಿಯಸ್ ಸ್ಮಗ್ಲರ್.

ಆ ಕಾಲದಿಂದಲೂ ನ್ಯಾಯಬೆಲೆ ಅಂಗಡಿಗಳ ದಿನಸಿಯನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುವ ವಿಜಯನಗರದ ವಾಸಿ ಇದೇ ಸುಬ್ಬಣ್ಣನ ಮೂಲಕ ಇಸ್ಕಾನ್



ಅನಾಚಾರಕ್ಕಿಳಿದಿದೆ. ಸರ್ಕಾರಿ ಲೆಕ್ಕದ ಪ್ರಕಾರವೇ ಇಸ್ಕಾನ್ ದಿನವೊಂದಕ್ಕೆ ಎರಡು ಲಕ್ಷದ ನಲವತ್ತು ಸಹಸ್ರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸುತ್ತದೆ. ಅದಕ್ಕೆಂದು ಇಸ್ಕಾನ್ ಸಂಸ್ಥೆಗೆ ಸರ್ಕಾರ ಪ್ರತಿ ಮಗುವಿನ ಲೆಕ್ಕಕ್ಕೆಂದು ನೂರು ಗ್ರಾಂ ಅಕ್ಕಿ ಕೊಡುತ್ತದೆ.

ಅಂದರೆ ಪ್ರತಿನಿತ್ಯ ಸರಿಸುಮಾರು 25 ಸಾವಿರ ಕೇಜಿಗಳಷ್ಟು. ತಿಂಗಳಿಗದು ಆರೂವರೆ ಲಕ್ಷ ಕೆಜಿಗಳಷ್ಟಾಗುತ್ತದೆ. ಅಕ್ಷರ ದಾಸೋಹಕ್ಕೆಂದೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ರಿಯಾಯಿತಿ ದರಕ್ಕೆ ದಕ್ಕುವ ಬಿಸಿಯೂಟದ ಅಕ್ಕಿಯ ಪಾಲಿನಲ್ಲಿ ತಲಾ ಮಗುವೊಂದರ ಲೆಕ್ಕದ ನೂರು ಗ್ರಾಂ ಪೂರ್ತಿಯಾಗಿ ಬಳಕೆಯಾಗುವುದಿಲ್ಲ. ಅಂದರೆ ಮಗುವೊಂದು ಒಪ್ಪೊತ್ತಿಗೆ ಉಣ್ಣುವುದು ಕೇವಲ 50 ಗ್ರಾಂ ಮಾತ್ರ!

ಅಲ್ಲಿಗೆ ಮಗುವೊಂದರ ಲೆಕ್ಕದಲ್ಲಿ ದಿನಕ್ಕೆ 50 ಗ್ರಾಂ ಹೆಚ್ಚುವರಿ ಅಕ್ಕಿ ಇಸ್ಕಾನ್ ಗೋಡೌನಿನಲ್ಲೇ ಉಳಿದುಬಿಡುತ್ತದೆ. ಹೀಗೆ ದಿನವೊಂದಕ್ಕೆ ಸರಿಸುಮಾರು 10 ಸಾವಿರ ಕೆ.ಜಿ.ಗಳಷ್ಟು ಬಿಸಿಯೂಟದ ಅಕ್ಕಿಯನ್ನು ಮಿಕ್ಕಿಸಿಕೊಳ್ಳುವ ಇಸ್ಕಾನ್ ಕಾನೂನಿನ ಪ್ರಕಾರ ಅದನ್ನು ಸರ್ಕಾರಕ್ಕೆ ವಾಪಸ್ಸು ಮಾಡಬೇಕು ಅಥವಾ ಪ್ರತಿ ಮಗುವಿನ ಪಾಲಿನ ನೂರು ಗ್ರಾಂಗಳನ್ನು ಆಯಾ ಮಗುವಿಗೇ ನ್ಯಾಯಬದ್ಧವಾಗಿ ಬಡಿಸಬೇಕು.

ಆದರೆ ಇಸ್ಕಾನ್ ಇಂಥ ಸರ್ಕಾರಿ ಅಕ್ಕಿಯನ್ನೇ ಕಾಳಸಂತೆಯಲ್ಲಿ ಮಾರಿಕೊಳ್ಳುತ್ತಿದೆ. ಅಗತ್ಯವಸ್ತು ಕಾಯ್ದೆ 1955 ರ ಪ್ರಕಾರ ಬಿಸಿಯೂಟ ಕಲ್ಪಿಸುವ ಯಾವುದೇ

AKSHAYA PĀTRA
Unlimited Food for Education

ಸಂಸ್ಥೆಯೊಂದು ನಿರ್ದಿಷ್ಟ ಜಾಗದಲ್ಲೇ ಸರ್ಕಾರಿ ಅಕ್ಕಿಯನ್ನು ದಾಸ್ತಾನು ಮಾಡಬೇಕು. ಇಂಥಾ ವಿಳಾಸದ ಗೋಡೌನಿನಲ್ಲೇ ಸಂಗ್ರಹಿಸಿಡುವ ಬಗ್ಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಪರವಾನಗಿ ಪಡೆದಿರಬೇಕು. ಪ್ರತಿನಿತ್ಯ ಖರ್ಚಾಗುವ ಅಕ್ಕಿಗೂ ಮತ್ತು ಉಗ್ರಾಣದಲ್ಲಿರುವ ಉಳಿಕೆ ದಾಸ್ತಾನಿಗೂ ಲೆಕ್ಕ ತಾಳೆಯಾಗಬೇಕು.

ಇದು ಕಾನೂನು. ಹೀಗಿದ್ದೂ ಕಳ್ಳಾಟಕ್ಕಿಳಿದ ಇಸ್ಕಾನ್ ಧೂರ್ತರ ಪೈಕಿ 'ಅಕ್ಷಯ ಪಾತ್ರೆ' ಯೋಜನೆಯನ್ನು ನಿರ್ವಹಿಸುವವರು ಶ್ರೀಶೆಂತ ಪ್ರಭು ಮತ್ತು ನವೀನ್ ದಾಸ್ ಪ್ರಭು. ಇವರಿಬ್ಬರೂ ಇಸ್ಕಾನ್ ಧಣಿಗಳಾದ ಮಧು ಪಂಡಿತದಾಸ್ ಮತ್ತು ಚಂಚಲಪತ್ನಿದಾಸರ ಪಕ್ಕಾ ಚೇಲಾಗಳು. ಬಿಸಿಯೂಟದ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಳ್ಳುವ ಷಡ್ಯಂತ್ರವೊಂದನ್ನು ಬಹುದಿನಗಳಿಂದಲೇ ಇಸ್ಕಾನ್ ಖದೀಮರು ರೂಪಿಸಿದ್ದಾರೆ. ಅದನ್ನು ಅಕ್ಕಿ ಸ್ಮಗ್ಲರ್ ಸುಬ್ಬಣ್ಣನಿಗೆ ವಹಿಸಿದ್ದಾರೆ.

ಈ ಸುಬ್ಬಣ್ಣನಿಗೆ ಬೆಂಗಳೂರು ಸುತ್ತಮುತ್ತಲ ಬಹುತೇಕ ಹೋಟೆಲುಗಳು, ಕಲ್ಯಾಣ ಮಂಟಪ, ಬೇಕರಿ ಮತ್ತು ಕೋಳಿ ಫಾರಮ್‌ಗಳ ಲಿಂಕಿದೆ. ರಿಯಾಯಿತಿ ದರದ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿಗಳನ್ನು ಆತ ವ್ಯವಸ್ಥಿತವಾಗಿ ಇಂಥ ವ್ಯಾಪಾರಿಗಳಿಗೆ ಮಾರಿ ಹಾಕುತ್ತಾನೆ. ಅದಕ್ಕೆಂದೇ ತನ್ನದೇ ನೆಟ್‌ವರ್ಕ್ ಕೂಡ ಸುಬ್ಬಣ್ಣನಿಗಿದೆ. ಕ್ವಿಂಟಾಲ್ ಅಕ್ಕಿಯೊಂದಕ್ಕೆ ಕನಿಷ್ಠ ನೂರೈವತ್ತು ರೂಪಾಯಿಯಿಂದ ಇನ್ನೂರು ರೂಪಾಯಿಯ ತನಕ ಬ್ಲಾಕ್ ಮಾರ್ಕೆಟ್ ರೇಟಿರುವಾಗ ಇಸ್ಕಾನ್ ಅಕ್ಕಿಗೆ ಗಿರಾಕಿಗಳ ಬರವಾದರೂ ಎಲ್ಲಿತ್ತು?



ಇಸ್ಕಾನ್ ಖದೀಮರಾದ ಮಧುಪಂಡಿತ ಮತ್ತು ಚಂಚಲಪತ್ನಿದಾಸರು ಕುದುರಿಸಿದ ಡೀಲಿನ ಮೇರೆಗೆ ಕಾರ್ಯಾಚರಣೆಗಿಳಿದ ಸ್ಮಗ್ಲರ್ ಸುಬ್ಬಣ್ಣ ಅಕ್ಕಿ ಮೂಟೆಗಳನ್ನು ಸಂಗ್ರಹಿಸಿ ಇಡಲೆಂದೇ ಜ್ಞಾನಭಾರತಿಯ ಕೆಂಗುಂಟೆ ಸರ್ಕಲ್ಲಿನಲ್ಲೊಂದು ಕಲ್ಯಾಣಮಂಟಪವನ್ನು ಹಿಡಿದ. ಕನ್ಯಾಕುಮಾರಿ ಕಲ್ಯಾಣ ಮಂಟಪ ಎಂದಿದ್ದ ಬೋರ್ಡನ್ನು ಕಿತ್ತೆಸೆದು ಲೋಡುಗಟ್ಟಲೇ ಲಾರಿಗಳಲ್ಲಿ ಅಲ್ಲಿಗ ಅಕ್ಕಿ ತಂದಿಟ್ಟ.

ಇಸ್ಕಾನ್‌ನ ಅಧಿಕೃತ ಗೋಡೌನ್ ಇರುವುದು ಕನಕಪುರ ರಸ್ತೆಯ ವಸಂತಪುರದಲ್ಲಿ, ಮಕ್ಕಳ ತಟ್ಟೆಯಿಂದ ಕದ್ದ ಅಕ್ಕಿಯನ್ನು ಅಲ್ಲಿಡುವಂತಿಲ್ಲವಲ್ಲ; ಸ್ಮಗ್ಲರ್ ಸುಬ್ಬಣ್ಣ ಕೆಂಗುಂಟೆ ಸರ್ಕಲ್ಲಿನ ಗೋಡೌನಿನಿಂದಲೇ ಬಿಡಿಬಿಡಿಯಾಗಿ ಅಕ್ಕಿ ಸಾಗಿಸುತ್ತಿದ್ದ. ಯಾವತ್ತು ಪ್ರವಾಹ ಪೀಡಿತರಿಗೆಂದು ಕಾಂಗ್ರೆಸ್ ನಾಯಕ ಹನುಮಂತರಾಯಪ್ಪ ಲೋಡುಗಟ್ಟಲೇ ಅಕ್ಕಿ ಬೇಕೆಂದು ಬೌಕಾಸಿಗಿಳಿದರೋ ಸ್ಮಗ್ಲರ್ ಸುಬ್ಬಣ್ಣ ಡೀಲು ಕುದುರಿಸಿದ್ದಾನೆ. ಹನುಮಂತರಾಯಪ್ಪನವರನ್ನು ನೇರವಾಗಿ ಕನ್ಯಾಕುಮಾರಿ ಕಲ್ಯಾಣಮಂಟಪಕ್ಕೇ ಕರೆದೊಯ್ದು ಸಾವಿರಾರು ಮೂಟೆಗಳನ್ನು ತೋರಿಸಿ 'ಕೇಜಿಗೆ 15 ರೂಪಾಯಿಯಂತೆ ಎಷ್ಟು ಬೇಕಾದರೂ ಕೊಡ್ತೀನಿ' ಅಂದಿದ್ದಾನೆ. ಯಾವ ಅಕ್ಕಿಯಪ್ಪಾ ಇದು? ಎಂದು ಕೇಳಿದ್ದಕ್ಕೆ ಇಸ್ಕಾನ್ ಧಣಿ ಮಧು ಪಂಡಿತದಾಸನ ಹೆಸರನ್ನೂ ಇದು ಅಕ್ಷರ ದಾಸೋಹದ ಶಾಲಾ ಮಕ್ಕಳ ಬಿಸಿಯೂಟದ ಅಕ್ಕಿಯೆಂದೇ ಲಜ್ಜೆಗೆಟ್ಟು ಬಾಯಿಬಿಟ್ಟಿದ್ದಾನೆ.

ಇಷ್ಟು ಗೊತ್ತಾಗಿದ್ದೇ ತಡ, ಹನುಮಂತರಾಯಪ್ಪ ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ. ಜೊತೆಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೂ ಮಾಹಿತಿ ಕೊಟ್ಟಿದ್ದಾರೆ. ಸ್ಮಗ್ಲರ್ ಸುಬ್ಬಣ್ಣನ ಇತಿಹಾಸ ಮೊದಲೇ ಗೊತ್ತಿದ್ದ ಆಹಾರ ಮತ್ತು ನಾಗರಿಕ ಸರಬರಾಜು ಉಪ ನಿರ್ದೇಶಕ ವಿಜಯ್‌ಕುಮಾರ್ ತಕ್ಷಣವೇ ಸುಬ್ಬಣ್ಣನ ಗೋಡೌನಿನ ಮೇಲೆ ದಾಳಿ ನಡೆಸಿದರೆ ಅಲ್ಲಿದ್ದದ್ದು ಬರೋಬ್ಬರಿ ನಾಲ್ಕು ಸಾವಿರ ಕ್ವಿಂಟಾಲ್‌ಗಳಷ್ಟು ಬಿಸಿಯೂಟದ ಅಕ್ಕಿ!

ಇಸ್ಕಾನ್‌ನ ಅಕ್ಕಿಕಳ್ಳರು ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದರು. ಬಿಸಿಯೂಟದ ಅಕ್ಕಿ ಸ್ಮಗ್ಲಿಂಗ್ ಬಯಲಾಗಿದ್ದೇ ತಡ ಪ್ರಾರಂಭದಲ್ಲಿ ಅದಕ್ಕೂ ಇಸ್ಕಾನ್‌ಗೂ ಸಂಬಂಧವೇ ಇಲ್ಲ, ಇದು ನಮ್ಮ ಅಕ್ಕಿಯಲ್ಲ ಎಂದು ಹೇಳಿಕೆ ಕೊಟ್ಟ ಇಸ್ಕಾನ್ ಧಣಿ ಮಧು ಪಂಡಿತದಾಸ ಮರುದಿನಕ್ಕೇ ವರಸೆ ಬದಲಿಸಿದ್ದ. ಹೌದು ಅದು ಅಕ್ಷಯ ಪಾತ್ರೆಯ ಅಕ್ಕಿಯೇ, ವಸಂತಪುರದ ಗೋಡೌನಿನಲ್ಲಿ ಜಾಗ ಇಲ್ಲ ಎಂದು ಇಲ್ಲಿ ದಾಸ್ತಾನು ಮಾಡಿದ್ದೆವು ಎಂದ ಮಧು ಪಂಡಿತನ ಹೇಳಿಕೆಯಲ್ಲೇ ಕಳ್ಳಾಟ ಬಯಲಾಗಿತ್ತು.

ಹಾಗೊಮ್ಮೆ ಅಧಿಕೃತವಾಗೇ ಇಟ್ಟಿದ್ದರೆ ಅದಕ್ಕೆ ಸರ್ಕಾರಿ ಪರವಾನಗಿ ಪಡೆಯಬೇಕಿತ್ತು. ತನ್ನ ವಸಂತಪುರದ ಗೋಡೌನಿಗೆ ಈಗಾಗಲೇ ಪರವಾನಗಿ ಪಡೆದ ಇಸ್ಕಾನ್‌ಗೆ ಮೂರು ತಿಂಗಳಾದರೂ ಕೆಂಗುಂಟೆಯ ಗೋಡೌನಿಗೆ ಲೈಸೆನ್ಸ್ ಪಡೆಯುವುದು ಗೊತ್ತಾಗದ ವಿಷಯವೇನಲ್ಲ. ನಿಜಕ್ಕೂ ಬಿಸಿಯೂಟಕ್ಕೆಂದೇ ಸಂಗ್ರಹಿಸಿಟ್ಟಿದ್ದರೆ ಒಂದೋ ರಾಜಾಜಿನಗರದ ಇಸ್ಕಾನ್ ದೇವಾಲಯದ ಸಮೀಪದಲ್ಲೋ ಅಥವಾ ವಸಂತಪುರದಲ್ಲಿರುವ ಎರಡನೇ ಅಡುಗೆ ಮನೆಗೆ ಆಸುಪಾಸಿನಲ್ಲೋ ಗೋದಾಮು ಮಾಡಬೇಕಿತ್ತು. ಈಗ ಕಳ್ಳದಾಸ್ತಾನು ಪತ್ತೆಯಾಗಿರುವ ಕನ್ಯಾಕುಮಾರಿ ಕಲ್ಯಾಣ ಮಂಟಪ ರಾಜಾಜಿನಗರದ ಇಸ್ಕಾನ್‌ಗೂ ಕನಕಪುರ ರಸ್ತೆಯ ಇಸ್ಕಾನ್‌ಗೂ ತೀರ ವಿರುದ್ಧ ದಿಕ್ಕಿನಲ್ಲಿದೆ. ಅಷ್ಟೇ ಅಲ್ಲ ವಿಪರೀತ ದೂರದಲ್ಲಿದೆ.

ಇನ್ನೂ ವಿಪರ್ಯಾಸವೆಂದರೆ ಸಿಕ್ಕಿಬಿದ್ದ ಮೇಲೆ ಇಸ್ಕಾನ್ ಕಳ್ಳ ದಾಖಲೆ ಸೃಷ್ಟಿಸಹೋಗಿ ಸಿಕ್ಕಿಬಿದ್ದಿದೆ. ಈತನಕ ಸುಬ್ಬಣ್ಣನ ಹೆಸರಲ್ಲಿದ್ದ ಕನ್ಯಾಕುಮಾರಿ ಕಲ್ಯಾಣ ಮಂಟಪದ ಬಾಡಿಗೆ ಕರಾರನ್ನು ಹಳೇ ದಿನಾಂಕದಲ್ಲಿ ಮಾಡಿದಂತೆ ಇಸ್ಕಾನ್ ಹೆಸರಿಗೆ ಬದಲಿಸಲಾಗಿದೆ. ಅಕ್ಟೋಬರ್ ಆರರಂದು ಜಿಲ್ಲಾ ಪಂಚಾಯ್ತಿಗೊಂದು ಅರ್ಜಿ ಕೊಟ್ಟಂತೆ ಮಾಡಿ ಗೋದಾಮಿನ ಲೈಸೆನ್ಸ್ ಕೋರಿದಂತೆ ಅರ್ಜಿಯೊಂದನ್ನು ಸೃಷ್ಟಿಸಿದ್ದಾರೆ. ಈಗಾಗಲೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಸಂತಪುರದ ಗೋಡೌನಿಗೆ ಲೈಸೆನ್ಸ್ ಪಡೆದ ಇಸ್ಕಾನ್ ಖದೀಮರು ಕೆಂಗುಂಟೆಯ ಕಳ್ಳ ಗೋದಾಮಿಗೆ ಜಿಲ್ಲಾ ಪಂಚಾಯ್ತಿಗೆ ಅರ್ಜಿ ಸಲ್ಲಿಸುವುದು ಹಾಸ್ಯಾಸ್ಪದವಲ್ಲದೇ ಮತ್ತೇನು?

ಸದ್ಯ ಬೆಂಗಳೂರು ನಗರ ಜಿಲ್ಲಾಧಿಕಾರಿ ಡಿ.ಎನ್. ನಾಯಕ್ ಇಡೀ ಅಕ್ಕಿ ಕಳ್ಳ ಸಾಗಾಣಿಕೆ ಪ್ರಕರಣದ ವಿಚಾರಣೆ ನಡೆಸುತ್ತಿದ್ದು, ಅವರು ಮನಸ್ಸು ಮಾಡಿದರಷ್ಟೇ ಇಸ್ಕಾನ್ ಧೂರ್ತರು ಜೈಲು ಪಾಲಾಗುತ್ತಾರೆ. ಏನೆಲ್ಲಾ ಗೋಲ್‌ಮಾಲ್ ಮಾಡಿ ಅಕ್ಷರ ದಾಸೋಹವನ್ನೇ ಹೈಜಾಕ್ ಮಾಡಿದ ಇಸ್ಕಾನ್ ಧೂರ್ತರಿಗೆ, ಅಕ್ಕಿ ಕಳ್ಳತನವನ್ನು ಮುಚ್ಚಿಹಾಕುವುದು ಎಷ್ಟು ಹೊತ್ತು?

ಕೊನೆಗೂ ಉಳಿಯುವ ಪ್ರಶ್ನೆಯೆಂದರೆ-ಕನಿಷ್ಠ ಸಿಬಿಐ ತನಿಖೆಯಾದರೂ ಇಸ್ಕಾನ್ ಅಕ್ಕಿಕಳ್ಳರನ್ನು ಜೈಲಿಗೆ ಹಾಕುತ್ತಾ?

● ರಾ. ಸೋಮನಾಥ್

ಇದು ಮೂರನೇ ಕೇಸು

ಮಕ್ಕಳ ಬಿಸಿಯೂಟದ ಅಕ್ಕಿಯನ್ನು ಇಸ್ಕಾನ್ ಖದೀಮರು ಮಾರಿಕೊಳ್ಳುತ್ತಿರುವುದು ಇದೇ ಮೊದಲೇನಲ್ಲ, ಈಗಾಗಲೇ ಇಂಥ ಎರಡು ಕ್ರಿಮಿನಲ್ ಕೇಸುಗಳು ಇಸ್ಕಾನ್ ವಿರುದ್ಧ ದಾಖಲಾಗಿವೆ. ಮೊದಲನೇ ಪ್ರಕರಣ ನಡೆದದ್ದು 2007 ರ ಆಗಸ್ಟ್ ತಿಂಗಳಲ್ಲಿ, ವಸಂತಪುರದ ಇಸ್ಕಾನ್ ಗೋದಾಮಿನಿಂದ ಕದ್ದು ಅಕ್ಕಿ ಸಾಗಿಸುತ್ತಿದ್ದ ಎರಡು ಲಾರಿಗಳನ್ನು ಹಿಡಿದ ಸುಬ್ರಹ್ಮಣ್ಯಪುರ ಪೊಲೀಸರು ಅದ್ಯಾವ ಮಾಯೆಗೆ ಬಲಿಯಾದರೋ?

ಇಸ್ಕಾನ್ ಮುಖ್ಯಸ್ಥ ಮಧು ಪಂಡಿತದಾಸ ಮತ್ತು ಚಂಚಲಪತ್ನಿದಾಸರ ಮೇಲೆ ಪೊಲೀಸರು ಹಾಕಬೇಕಿದ್ದ ಕೇಸು ಮಿಸ್ಸಾಗಿ ಮುಗ್ಧ ಲಾರಿ ಚಾಲಕರ ಮೇಲೆ ಬತ್ತು, ಇದಾದನಂತರ ಹೊಸಕೋಟೆಯಲ್ಲೂ ಇಂಥದ್ದೇ



ಮತ್ತೊಂದು ಕೇಸು ದಾಖಲಾಯಿತು. ನಾಲ್ಕು ಲಾರಿಗಳ ತುಂಬ ಸಿಕ್ಕಿಬಿದ್ದ ಅಕ್ಕಿ ಮೂಟೆಗಳೆಲ್ಲವೂ ಇಸ್ಕಾನ್ ಅಕ್ಷಯ ಪಾತ್ರೆಗೆಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗೋಡೌನಿನಿಂದಲೇ ಹೊರಬಿದ್ದಿತ್ತು, ಎಲ್ಲಾ ಸಾಕ್ಷ್ಯಾಧಾರಗಳ ಸಮೇತ ಹಿಡಿದಿದ್ದ ಹೊಸಕೋಟೆ ಪೊಲೀಸರನ್ನೇ ಇಸ್ಕಾನ್ ಬಾಯಿ ಮುಚ್ಚಿಸಿತು. ಅಕ್ಷರ ದಾಸೋಹದ ಅಕ್ಕಿ ಮಾರಿಕೊಳ್ಳುವ ಇಸ್ಕಾನ್ ಬುದ್ಧಿಗೆ ಇದು ಮೊದಲ ಉದಾಹರಣೆಯೇನಲ್ಲ.



ಅಕ್ಷಯ ಪಾತ್ರೆಯೋ? ಭಿಕ್ಷಾ ಪಾತ್ರೆಯೋ?



ಅಕ್ಷಯ ಪಾತ್ರೆ ಎಂದರೆ ಒಂದು ಅಗಳಿನಿಂದ ಶ್ರೀ ಕೃಷ್ಣ ಪರಮಾತ್ಮ ನೂರಾರು ಸಾಧುಸಂತರಿಗೆ ಅನ್ನ ಬಡಿಸಿದ ಪಾಡ. ಇದನ್ನೇ ತನ್ನ ಹಗಲುದರೋಡೆಯ ಲಾಂಛನವಾಗಿ ಬಳಸುತ್ತಿರುವ ಇಸ್ಕಾನ್ ಸದ್ಯ ರಾಜ್ಯಾದ್ಯಂತ ಐದು ಲಕ್ಷ ಮಕ್ಕಳ ಊಟದ ತಟ್ಟೆಗೆ ಕೈಹಾಕಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಅನುದಾನ ಸೇರಿದಂತೆ ಪ್ರತಿ ಮಗುವಿನ ಮಧ್ಯಾಹ್ನದ ಊಟಕ್ಕೆ ಸರ್ಕಾರ ಇಸ್ಕಾನ್‌ಗೆ ಕೊಡುತ್ತಿರುವುದು ಮೂರೂವರೆ ರೂಪಾಯಿ. ರಾಜ್ಯಾದ್ಯಂತ ನೂರಕ್ಕೂ ಹೆಚ್ಚು ಎನ್‌ಜಿಓಗಳು ಈ ದುಡ್ಡಲ್ಲೇ ಇವತ್ತಿಗೂ ಮಕ್ಕಳಿಗೆ ಪ್ರತಿನಿತ್ಯ ಊಟ ಕಲ್ಪಿಸುತ್ತಿರುವಾಗ ಇಸ್ಕಾನ್ ಮಾತ್ರ ಬೇರೆಯದೇ ಕಳ್ಳಾಟಕ್ಕಿಳಿದಿದೆ. ಅದು ಅಂತಾರಾಷ್ಟ್ರೀಯ ಮಟ್ಟದ ಭಿಕ್ಷಾಟನೆ.

ಈ ಹಿಂದೆ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ತನ್ನ ಆಶ್ರಮದ ಶಾಲೆಯ ಮಕ್ಕಳು ಸರ್ಕಾರಿ ವೆಚ್ಚದ ಊಟ ಮಾಡುತ್ತಿರುವ ಫೋಟೋ ತೆಗೆದು ಅದನ್ನೇ ತನ್ನ ವೆಬ್‌ಸೈಟ್‌ಗೆ ಹಾಕಿ ದೇಶ ವಿದೇಶಗಳಿಂದ ಭಿಕ್ಷೆ ಎತ್ತುತ್ತಿದ್ದದ್ದನ್ನೇ ಇಸ್ಕಾನ್ ದೊಡ್ಡ ಮಟ್ಟದಲ್ಲಿ ಮಾಡುತ್ತಿದೆ. ಇಸ್ಕಾನ್ ಪ್ರಕಾರ 'ಅಕ್ಷಯ ಪಾತ್ರೆ' ಯೋಜನೆಗೆ ಕೇಂದ್ರ-ರಾಜ್ಯ ಸರ್ಕಾರಗಳ್ಯಾವುದೂ ದುಡ್ಡು ಕೊಡುತ್ತಿಲ್ಲ. ಅದು ಸ್ವತಃ ಇಸ್ಕಾನ್ ನಡೆಸುತ್ತಿರುವ ಸೇವಾ ಕೈಂಕರ್ಯವಂತೆ. ಇಸ್ಕಾನ್ ಹಂಗುಲಕ್ಕಾಗಿ ದುಡ್ಡು ಮತ್ತು ಶ್ರೀಕೃಷ್ಣನ ಭಕ್ತರು ಕೊಟ್ಟ ಉದಾರ ದೇಣಿಗೆಯಿಂದಲೇ ತಾನು ರಾಜ್ಯಾದ್ಯಂತ ಐದು ಲಕ್ಷ ಮಕ್ಕಳಿಗೆ ಪ್ರತಿ ಮಧ್ಯಾಹ್ನದ ಊಟ ಕಲ್ಪಿಸುತ್ತಿದ್ದೇನೆಂದು ಇಸ್ಕಾನ್ ವಿದೇಶಗಳಲ್ಲಿ ಪ್ರಚಾರ ಮಾಡುತ್ತಿದೆ.

ಅದೂ ಎಂಥಾ ಅಸಹ್ಯಕರ ದೇಶವಿರೋಧಿ ಅಪಪ್ರಚಾರವೆಂದರೆ ಕೆದರಿದ ಕೂದಲ ಕಂಗೆಟ್ಟ ಮಗುವೊಂದರ ಫೋಟೋ ಹಾಕಿ ಅದರ ಕೆಳಗೆ 'I had wished to die' ಎಂಬ ಶೀರ್ಷಿಕೆ ಕೊಡುತ್ತಾರೆ. ಅದರರ್ಥ ನಾನು ಹೊಟ್ಟೆ ಹಸಿವನ್ನು ತಾಳಲಾರದೆ ಆತ್ಮಹತ್ಯೆಗೆ ಯತ್ನಿಸಿದ್ದೆ...' ಎಂದು ಆ ಮಗು ಹೇಳಿಕೊಂಡಂತೆ.

ಕರ್ನಾಟಕದಲ್ಲಿ ಇಂಥ ಐದು ಲಕ್ಷ ಮಕ್ಕಳಿಗೆ ಪ್ರತಿನಿತ್ಯ ತಾನು ಮಧ್ಯಾಹ್ನದ ಊಟ ಕಲ್ಪಿಸುತ್ತಿದ್ದೇನೆಂದು ಇಸ್ಕಾನ್ ದೇಶ-ವಿದೇಶಗಳ ಶ್ರೀಮಂತರ ತಲೆ ತಿಕ್ಕುತ್ತಿದೆ. 28 ಡಾಲರುಗಳನ್ನು ಕೊಟ್ಟರೆ ಇಂಥ ಒಂದು ಮಗುವಿಗೆ ಇಡೀ ವರ್ಷ ತಾನು ಊಟ ಹಾಕುತ್ತೇನೆಂದು ಇಸ್ಕಾನ್ ವಿದೇಶಗಳಲ್ಲಿ ಭಿಕ್ಷಾಪಾತ್ರೆ ಹಿಡಿಯುತ್ತದೆ. ಊಟಕ್ಕಾಗಿ ಮಕ್ಕಳು ಕಿತ್ತಾಡುತ್ತಿರುವ ಫೋಟೋಗಳನ್ನೂ ಸೃಷ್ಟಿಸಿದೆ. ಹೀಗೆ ವಿದೇಶಗಳಿಂದ ಇಂಥ ಕಪೋಲಕಲ್ಪಿತ ಫೋಟೋಗಳನ್ನು ತೋರಿಸಿ ಈಗಾಗಲೇ 60 ಕೋಟಿ ರೂಪಾಯಿಗಳ ಭಿಕ್ಷೆ ಎತ್ತಿದ ಇಸ್ಕಾನ್ ಅದನ್ನು ಕನಕಪುರ ರಸ್ತೆಯಲ್ಲಿ ರಿವರ್‌ಪಾರ್ಕ್ ಎಂಬ ಐಷಾರಾಮಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಬಳಸುತ್ತಿದೆ.

ಯಾರನ್ನು ದೇಶದ್ರೋಹಿಗಳೆಂದು ಜನ ಪರಿಗಣಿಸುತ್ತಾರೋ ಅಂಥವರೂ ನಾಚುವಂತೆ ಇಸ್ಕಾನ್ ದೇಶದ ವಿರುದ್ಧ ಅಪಪ್ರಚಾರಕ್ಕಿಳಿದಿದೆ.

ಮಗುವೊಂದಕ್ಕೆ ಸರ್ಕಾರವೇ ಕೊಡುವ ದುಡ್ಡಿನಲ್ಲಿ ಇಸ್ಕಾನ್ ಇವತ್ತಿಗೂ ಅನ್ನಕೊಡುತ್ತಿದೆಯೇ ಹೊರತು ತನ್ನ ಜೇಬಿನಿಂದ ನಯಾಪೈಸೆ ಬಿಚ್ಚುತ್ತಿಲ್ಲ. ಇನ್ನೂ ಅಸಹ್ಯಕರವೆಂದರೆ ಮಗುವೊಂದಕ್ಕೆ ಕೊಡಬೇಕಾದ ಪ್ರತಿನಿತ್ಯದ ನೂರು ಗ್ರಾಮ್ ಅಕ್ಕಿಯನ್ನೇ ಉಳಿಸಿ ಅದರಲ್ಲಿ ಐವತ್ತು ಗ್ರಾಂಗಳಷ್ಟು ಕದ್ದು ಕಳ್ಳದಾರಿಯಲ್ಲಿ ಮಾರಿಕೊಳ್ಳುತ್ತದೆ. ಆದರೆ ವಿದೇಶಗಳಲ್ಲಿ ಇದನ್ನೇ ತೋರಿಸಿ ಭಿಕ್ಷೆ ಬೇಡುತ್ತದೆ.

ಇಲ್ಲಿ ಮೋಸಹೋಗಿದ್ದು ಸರ್ಕಾರ ಮತ್ತು ಕನ್ನಡ ಜನತೆ. ಅಕ್ಷರ ದಾಸೋಹ ಎಂಬ ಸರ್ಕಾರಿ ಯೋಜನೆಯನ್ನೇ ಮರೆಮಾಚಿ ಇಸ್ಕಾನ್ ಅದಕ್ಕೆ ಅಕ್ಷಯ ಪಾತ್ರೆ ಎಂಬ ಹೆಸರು ಕೊಟ್ಟಿದ್ದು ಮೋಸವಲ್ಲದೆ ಮತ್ತೇನು?

ಜನರ ತೆರಿಗೆಯ ದುಡ್ಡಲ್ಲಿ ನಡೆಯುತ್ತಿರುವ ಬಿಸಿಯೂಟಕ್ಕೆ ಯಾವುದೇ ಸಂಸ್ಥೆ ಅದು ತನ್ನ ಸ್ವಂತ ಸಾಧನೆಯೆಂದು ಪ್ರಚಾರಗಿಟ್ಟಿಸಲು ಅಧಿಕಾರ ಕೊಟ್ಟವರ್ಯಾರು? ವಿಪರ್ಯಾಸವೆಂದರೆ ಪ್ರತಿನಿತ್ಯ ಉಣ್ಣುವ ಶಾಲಾ ಮಕ್ಕಳಿಗೂ ಇದು ಸರ್ಕಾರದ ಯೋಜನೆಯೆಂಬುದೇ ಮರೆತು ಇಸ್ಕಾನ್ ಕೃಪೆಯೆಂಬ ಭಾವನೆ ಬೆಳೆದಿದೆ. ಸಾಲದ್ದಕ್ಕೆ ಸ್ಥಳೀಯ ಶ್ರೀಮಂತರು ಮತ್ತು ದಾನಿಗಳಿಂದಲೂ ಅಕ್ಷಯ ಪಾತ್ರೆಗೆಂದು ಇಸ್ಕಾನ್ ನಿಧಿ ಸಂಗ್ರಹಿಸುತ್ತದೆ. ಹೀಗೆ ಐದು ಸಾವಿರ ರೂಪಾಯಿಗಳ ತನಕ ದುಡ್ಡು ಕೊಟ್ಟವರ ಹೆಸರನ್ನು ಇಸ್ಕಾನ್ ನಡೆಸುವ ಭಕ್ತಿವೇದಾಂತ ದರ್ಶನ ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆ. ಈ ರೀತಿ ದುಡ್ಡು ಸಂಗ್ರಹಿಸಲೆಂದೇ ಇಸ್ಕಾನ್ ಐವತ್ತಕ್ಕೂ ಅಧಿಕ ಸಿಬ್ಬಂದಿಗಳನ್ನು ನೇಮಿಸಿಕೊಂಡಿದೆ. ಇಂಥ ಪ್ರತಿ ಕಾರ್ಯಕರ್ತನೂ ಮಾಸಿಕ ಕನಿಷ್ಠ 60 ಸಾವಿರ ರೂಪಾಯಿ ಸಂಗ್ರಹಿಸಲೇಬೇಕೆಂಬ ಟಾರ್ಗೆಟ್ ಹೇರುತ್ತದೆ. ಅಂಥವರಿಗೆ ಇಸ್ಕಾನ್ ಕೊಡುವ ಸಂಬಳ ತಿಂಗಳಿಗೆ ಮೂರೂವರೆಯಿಂದ ಐದು ಸಾವಿರ.

ಅಕ್ಷಯ ಪಾತ್ರೆಯ ಹೆಸರಲ್ಲಿ 60 ಸಾವಿರದ ಚಂದಾ ಎತ್ತಿದವರಿಗೆ ತಿಂಗಳಿಗೆ ಮೂರೂವರೆ ಸಾವಿರ ರೂಪಾಯಿ ಸಂಬಳ ಕೊಡುವುದು ಯಾವ ಮಹಾ?

ಅಷ್ಟಕ್ಕೂ ಶಾಲಾಮಕ್ಕಳಿಗೆ ಮಧ್ಯಾಹ್ನದ ಊಟ ಜಾರಿಗೆ ತಂದಿದ್ದೇ ಪೌಷ್ಟಿಕತೆಯ ಕಾರಣಕ್ಕೆ. ಆದರೆ ಇಸ್ಕಾನ್ ಔಷಧಿಯ ಗುಣಗಳುಳ್ಳ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನೇ ನಿಷೇಧಿಸಿದೆ. ಬಹುತೇಕ ಯಂತ್ರೋಪಕರಣಗಳ ಮೂಲಕವೇ ಅಡುಗೆ ಮಾಡುವುದರಿಂದ ಸರಿಸುಮಾರು 20 ಸಾವಿರದಷ್ಟು ಬಿಸಿಯೂಟದ ನೌಕರರು ಬೀದಿಗೆ ಬಿದ್ದಾಗಿದೆ. ಸಾಲದ್ದಕ್ಕೆ ಕೆಲ ಖಾಸಗಿ ಶಾಲೆಗಳಿಂದ ಮಕ್ಕಳ ಊಟಕ್ಕೆಂದು ಮುಂಗಡ ಶೇವಣಿಯನ್ನೂ ಇಸ್ಕಾನ್ ವಸೂಲಿ ಮಾಡಿದೆ.

ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿದ್ದಷ್ಟೇ ಅಲ್ಲ, ಸರ್ಕಾರವೇ ಇಡೀ ವೆಚ್ಚವನ್ನು ಭರಿಸುತ್ತಿರುವಾಗ ಶಾಲೆಗಳಿಂದ ಅಡ್ವಾನ್ಸ್ ಡಿಪಾಜಿಟ್ ಸಂಗ್ರಹಿಸಲು ಇಸ್ಕಾನ್‌ಗೆ ಅಧಿಕಾರ ಕೊಟ್ಟವರ್ಯಾರು? ಇದು ಕ್ರಿಮಿನಲ್ ವಂಚನೆಯಲ್ಲವೆ? ಇಸ್ಕಾನ್ ಆತ್ಮವಂಚನೆಗೆ ಮತ್ತೊಂದು ಉದಾಹರಣೆಯೆಂದರೆ ಅದೇನಿದ್ದರೂ ಅನುಕೂಲಸ್ಥರ ಮಕ್ಕಳಿರುವ ದೊಡ್ಡದೊಡ್ಡ ಶಾಲೆಗಳಿಗಷ್ಟೇ ಪ್ರಾಮುಖ್ಯತೆ ಕೊಡುತ್ತದೆಯೇ ಹೊರತು ಸಣ್ಣಪುಟ್ಟ ಶಾಲೆಗಳತ್ತ ಗಮನಹರಿಸುವುದೇ ಇಲ್ಲ. ಅದೇನಿದ್ದರೂ ಸಣ್ಣಪುಟ್ಟ ಎನ್‌ಜಿಓಗಳ ಕಾರ್ಯವಂತೆ.

ಇದು ಸೇವೆಯೇ? ಬಡಮಕ್ಕಳ ಫೋಟೋ ಸೃಷ್ಟಿಸಿ, ವಿದೇಶಿಯರಿಂದ ದುಡ್ಡೆತ್ತಿ ಅಂಥ ದುಡ್ಡನ್ನು ತನ್ನ ಐಷಾರಾಮಿ ರಿಯಲ್ ಎಸ್ಟೇಟ್ ದಂಧೆಗೆ ಬಳಸುತ್ತಾ ಕೊನೆಗೆ ಮಕ್ಕಳ ಅನ್ನದ ತಟ್ಟೆಗೇ ಕನ್ನಹಾಕಿ ಕದ್ದ ಅಕ್ಕಿಯನ್ನೆ ಲಾಭಕ್ಕೆ ಮಾರಿಕೊಳ್ಳುವ ಇಸ್ಕಾನ್ ಖದೀಮ ಪಾಪವನ್ನು ಸಾಕ್ಷಾತ್ ಶ್ರೀ ಕೃಷ್ಣ ಪರಮಾತ್ಮನೂ ಕ್ಷಮಿಸಲಾರ!

ತನಿಖೆಯಾದರೆ ಇಸ್ಕಾನ್‌ನ ಅರ್ಧ ಕಳ್ಳರು ಜೈಲು ಸೇರುತ್ತಾರೆ. ಆದರೆ ತನಿಖೆ ಮಾಡುವವರ್ಯಾರು? ಶಿಕ್ಷಿಸುವವರ್ಯಾರು? ●


ಅಲ್ಪಸಂಖ್ಯಾತರು ಅಂದರೆ ಪೇಜಾವರರಿಗೆ ನಡುಕವಂತಲ್ಲಾ!

"ಇಡೀ ಉತ್ತರ ಕರ್ನಾಟಕ ಜಲಪ್ರಳಯದಿಂದ ಕೊಚ್ಚಿ ಹೋಗಿ.. ಜನ ನಿರ್ಗತಿಕರಾಗಿ, ಜಾನುವಾರು ಜವರಾಯನ ಪಟ್ಟಣ ಸೇರಿ, ಗಂಜಿ ಕೇಂದ್ರಗಳು ಮಾಯವಾದ ಸಂದರ್ಭದಲ್ಲಿ ಬೈಲಹೊಂಗಲದಲ್ಲಿ ಬೃಹತ್ ಹಿಂದೂ ಸಮಾವೇಶ ನಡೆಯಿತಂತಲ್ಲಾ! ಅಷ್ಟೇ ಅಲ್ಲದೆ ಡೊಳ್ಳು, ಕೋಲಾಟ, ಕರಡಿ ಕುಣಿತ, ವೀರಗಾಸೆ ಮೆರವಣಿಗೆಯಿದ್ದು ಇದರ ಸಾರಥ್ಯವನ್ನು ಉಡುಪಿ ಪಿರಿಯಾದ ಜಗದ್ಗುರು ವಿಶ್ವೇಶ ತೀರ್ಥ ಶ್ರೀಪಾದಂಗಳು ವಹಿಸಿದ್ದರಂತಲ್ಲಾ, ಈ ಸಂದರ್ಭದಲ್ಲಿ ಅವರು ಹಾಕಿದ ಸರಿಗುಟರಿನ ಬಗ್ಗೆ ಕೇಳಬೇಕೆಂದು ಫೋನ್ ಮಾಡಲಾಗಿ ಅವರ ಜಂಗಮ ದೂರವಾಣಿ ರಿಂಗಾಯ್ತು,

ರಿಂಗ್‌ಟೋನ್ : "ಯದಾಯದಾಹಿ ಧರ್ಮಸ್ಯಂ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನ ಮದರ್ಮಸ್ಯ..."

"ಹಲೋ ಯಾರು?"

"ನಾನು ಸ್ವಾಮಿ, ಯಾಹೂ ಅಂತ ಪತ್ರಕರ್ತ, ನಮಸ್ಕಾರ."



"ಆಯ್ತು ಹೇಳಿ."

"ತಾವು ಬೈಲಹೊಂಗಲದ ಹಿಂದೂ ಸಭೆಗೆ ಹೋಗಿದ್ರಂತೆ?"

"ಹೌದು, ಬಹಳ ಚಂದ ಇತ್ತು, ಸಮಾ ಜನ ಬಂದಿದ್ದರು. ಅವರ ಉತ್ಸಾಹ, ಭಕ್ತಿಯನ್ನು ನೋಡಿ ನಮಗೆ ಖುಷಿಯಾಗಿದ್ದುಂಟು."

"ಆ ಖುಷೀಲಿ ಭಯಂಕರ ಭಾಷಣ ಮಾಡಿದ್ದೀರಲ್ಲಾ ಸ್ವಾಮಿ?"

"ಭಯಂಕರ ಅಂತ ಹೇಳುವುದು ಬೇಡ. ಹಿಂದೂಗಳಿಗೆ ಧೈರ್ಯ ತುಂಬಿದ್ದು ಹೌದು."

"ಧೈರ್ಯದ ಮಾತು ಬೇರೆ, ದರ್ಪದ ಮಾತು ಬೇರೆ. ನೀವು ದರ್ಪದ ಮಾತಾಡಿದ್ದೀರಾ."

"ದರ್ಪದ ಮಾತನ್ನಾಡುವ ಅನಿವಾರ್ಯತೆ ತಂದದ್ದು ಅಲ್ಪಸಂಖ್ಯಾತರು."

"ಅಲ್ಪಸಂಖ್ಯಾತರು ಏನು ಮಾಡಿದ್ರು ಸ್ವಾಮಿ?"

"ಅವರದ್ದು ಒಂದು ದರ್ಪ ನೋಡಲಿಕ್ಕೆ ಅಸಾಧ್ಯ. ನಮ್ಮನ್ನು ಅಸಡ್ಡೆಯಿಂದ ನೋಡುವುದುಂಟು, ಆಡಿಕೊಳ್ಳುವುದುಂಟು, ನಮ್ಮವರು ಊಟ ಮಾಡುವುದನ್ನು ಆಡಿಕೊಳ್ಳುವುದುಂಟು. ಇವರು ಊಟ ಮಾಡುವುದಿಲ್ಲವೆ?"

"ಎಲ್ಲರೂ ಊಟ ಮಾಡ್ತರೆ ಸ್ವಾಮಿ. ಬಹಳಷ್ಟು ಜನ ಬದುಕಿಗಾಗಿ ಊಟ ಮಾಡ್ತರೆ. ಆದ್ರೆ ನಿಮ್ಮವರು ಊಟಕ್ಕಾಗಿಯೇ ಬದುಕಿದಂಗಾಡ್ತರೆ. ಅದ್ಕೆ ಆಡಿಕಂಡಿರಬೇಕು, ಬಿಡಿ."

"ಬಿಡುವುದಿಲ್ಲ, ನಾವು ಅಲ್ಪಸಂಖ್ಯಾತರ ದರ್ಪ ಸಹಿಸುವುದಿಲ್ಲ."

"ಅಲ್ಪಸಂಖ್ಯಾತರು ಅಂದ್ರೆ ಯಾರು ಸ್ವಾಮಿ?"

"ಯಾರು ಅಂತಹೇಳಿ. ನನ್ನ ಬಾಯಿಯಿಂದ ಹೇಳಿಸುವುದು ಬೇಡ, ನಿಮಗೆ ಗೊತ್ತುಂಟು."

"ನೋಡಿ ಸ್ವಾಮಿ, ಒಂದು ಮಾಹಿತಿ ಹೇಳ್ತಿನಿ ಕೇಳಿ. ಉತ್ತರ ಕರ್ನಾಟಕದಲ್ಲಿ ಒಕ್ಕಲಿಗರು ಅಲ್ಪಸಂಖ್ಯಾತರು. ದಕ್ಷಿಣ ಕರ್ನಾಟಕದಲ್ಲಿ ಲಿಂಗಾಯತರು ಅಲ್ಪಸಂಖ್ಯಾತರು. ಇನ್ನೆಲ್ಲಾ ಜಾತಿಗಳೂ...ಇಡೀ ಕರ್ನಾಟಕದ ಎಲ್ಲಾ ಭಾಗದಲ್ಲೂ ಅಲ್ಪಸಂಖ್ಯಾತರು. ಈ ಪೈಕಿ ಯಾರು ಅಂತ ನೀವೇ ಹೇಳಬೇಕು."

"ಅಲ್ಪಸಂಖ್ಯಾತರು ಅಂದರೆ ಇನ್ಯಾರು? ಮುಸ್ಲಿಮರು."

"ಅಲ್ಲಾ ಸ್ವಾಮೀ, ಮುಸ್ಲಿಮರನ್ನು ಅಲ್ಪಸಂಖ್ಯಾತರು ಅಂತೀರಲ್ಲಾ, ನಿಮ್ಮ ದಡ್ಡತನಕ್ಕೆ ಏನೇಳ್ಳಿ?"

"ನಮ್ಮದು ದಡ್ಡತನ ಅಂತ ಹೇಳುವುದು ಬೇಡ."

"ಇನ್ನೇನು ಮತ್ತೆ? ಯಾವುದೇ ಮುಸ್ಲಿಂ ದೇಶಕ್ಕಿಂತ ಹೆಚ್ಚಿನ ಜನ ಮುಸ್ಲಿಮರು ನಮ್ಮ ದೇಶದಲ್ಲವುರೆ. ಸುಮಾರು ಹದಿನೆಂಟು ಕೋಟಿ ಸಾಬರು ಇಂಡಿಯಾದಲ್ಲಿರುವಾಗ ಅವುರೆಂಗೆ ಅಲ್ಪಸಂಖ್ಯಾತರು? ಅಂಗೇ ನೋಡಿ ನಮ್ಮಲ್ಲಿರೊ ತೀರ ಅಲ್ಪಸಂಖ್ಯಾತರು ಅಂದ್ರೆ ಮಾಧ್ವರು. ಆ ಕಾರಣಕ್ಕೆ ಅವರಲ್ಲಿ ಪುಕ್ಕಲುತನ ಆವರಿಸಿಕೊಂಡಿದೆ. ಅದಕ್ಕೆ ಮೈಕ್ ಸಿಕ್ಕಿದಾಗ ಮೈಮೇಲೆ ಪಂಜುರ್ಲಿ ಬಂದಂಗೆ ಕೂಗ್ತಾರೆ. ಬಹುಶಃ ಬೈಲಹೊಂಗಲದಲ್ಲಿ ನೀವೂ ಹಾಗೇ ಕೂಗಾಡಿರಬೇಕು?"

"ನೀವು ಕೂಗಿದ್ದು ಅಂತ ಹೇಳುವುದು ಬೇಡ."

"ನೀವು ಅಲ್ಪಸಂಖ್ಯಾತರು ಅಂತ ಹೇಳಿರೋದು ಮುಸ್ಲಿಮರಿಗಲ್ಲ, ಬಹುಶಃ ನಮಗೇ ಹೇಳಿದ್ದಿರಿ."

"ನಿಮಗೆ ಯಾಕೆ ಹೇಳುವುದು? ನೀವು ಅಲ್ಪಸಂಖ್ಯಾತರ?"

"ಹೌದು ಸ್ವಾಮಿ ನಾವು ಶೂದ್ರರು. ನಿಮ್ಮ ಹಿಂದೂ ಧರ್ಮದ ಅಸಂಖ್ಯಾತ ಜಾತಿಲಿರೋ ತಬ್ಬಲಿ ಜಾತಿಗಳೆಲ್ಲಾ ಅಲ್ಪಸಂಖ್ಯಾತರೆಯ. ನಮಗೆ ನಿಮ್ಮ ಬಗ್ಗೆ ಅಂತ ಒಳ್ಳೆ ಭಾವನೆ ಇಲ್ಲ, ಯಾಕಂದ್ರೆ ನೀವು ಗುಡಿ ಒಳಗಡೆ ನಮ್ಮನ್ನು ಸೇರಿಸೋದಿಲ್ಲ, ಸಹಪಂಕ್ತಿ ಭೋಜನಕ್ಕೂ ಸೇರಿಸಲ್ಲ, ಆದರೂ ನಿಮ್ಮ ಸಮಾನತೆಯ ಮಾತನ್ನ ನಂಬಿ, ನಮ್ಮ ಜೊತೆ ಊಟಮಾಡಿ ಅಂತ ಆಹ್ವಾನಿಸಿದ್ದೋ. ನೀವು ಬರದೆ ತಪ್ಪಿಸಿಕೊಂಡ್ರಿ. ಅದು ನಿಮ್ಮ ಸೋಗಲಾಡಿತನದ ಮಾತು ಅಂತ ಆಮೇಲೆ ಗೊತ್ತಾಯ್ತು. ಅವತ್ತಿನಿಂದ ನಿಮ್ಮ ಮಾತನ್ನ ಎಚ್ಚರಿಕೆಯಿಂದ ಗಮನಿಸ್ತಾ ಬರ್ತಾಯಿದ್ದಿವಿ. ಆದ್ದರಿಂದ ನೀವು ಅಲ್ಪಸಂಖ್ಯಾತರು ಅಂತ ಸಂಭೋಧಿಸಿರದು ನಮಗೇ ವರತು ಸಾಬರಿಗಲ್ಲ."

"ನಾವು ಬೇರೆಯವರಿಗೆ ಆಡಿದ ಮಾತನ್ನು ನಮಗೇ ಆಡಿದ್ದು ಅಂತ ನೀವು ಭಾವಿಸುವುದು ಸರಿಯಲ್ಲ. ಈ ಸಮಯದಲ್ಲಿ ಹಿಂದೂಗಳೆಲ್ಲ ಒಗ್ಗಟ್ಟಾಗಿರಬೇಕು."

"ಯಾಕೆ ಒಗ್ಗಟ್ಟಾಗಿರಬೇಕು? ಅಂತದ್ದೇನಾಗಿದೆ ಈಗ?"

"ನಮ್ಮ ಧರ್ಮ ಅಪಾಯದಲ್ಲಿದೆ, ಅದಕ್ಕೆ."


"ಯಾವ ಧರ್ಮ ಅಪಾಯದಲ್ಲಿದೆ? ಅಪಾಯ ಅಂದ್ರೇನು? ಅದನ್ನಾದ್ರು ಹೇಳಿ."

"ನಮ್ಮ ಗೋವುಗಳು ಕಾಣೆಯಾಗ್ತಾವುಂಟು, ನಮ್ಮ ಹೆಣ್ಣುಮಕ್ಕಳು ಕಾಣೆಯಾಗ್ತಾವುಂಟು."

"ನಿಮ್ಮ ಕೊಟ್ಟಿಗೆ ದನ ಕಾಣೆಯಾದ್ರೆ, ನಿಮ್ಮ ಸಂಬಂಧಿಕರ ಹೆಣ್ಣುಮಕ್ಕಳು ಓಡಿಹೋದರೆ ಹಿಂದೂ ಧರ್ಮ ಅಪಾಯದಲ್ಲಿದೆ ಅಂತ. ಅರ್ಥನಾ? ಪೇಜಾವರ ಸ್ವಾಮಿಗಳೇ, ನಿಮ್ಮ ಧರ್ಮ ಯಾವುದು ಅಂತ ಹೇಳಲಿ?"

"ಹೇಳಿ, ನಾನು ಧರ್ಮದ ವಿಷಯದಲ್ಲಿ ಎಲ್ಲರಿಂದ ತಿಳಿದುಕೊಳ್ಳುವುದುಂಟು."

"ನಿಮ್ಮ ಧರ್ಮ ಯಾವುದು ಅಂದ್ರೇ ಕ್ರೌರ್ಯ ಮತ್ತು ಜಡತ್ವ. ಇವೆರಡನ್ನು ಸಮೀಕರಿಸಿದ ಧರ್ಮವೇ ಪೇಜಾವರ ಧರ್ಮ. ಅದಕ್ಕೆ ಯಾವ ಅಪಾಯವೂ ಇಲ್ಲದಾಗ ಬೊಬ್ಬೆ ಹಾಕೋದು ನಿಮ್ಮ ಧರ್ಮ. ಥೂತ್ತೇರಿ!!!"





ಶಿವಮೊಗ್ಗ: ಗೋ ಭಕ್ತರಿಂದ ಗೋ ಆಸ್ಪತ್ರೆ ನಾಶ

ಶಿವಮೊಗ್ಗದಲ್ಲಿ 'ಅಭಿವೃದ್ಧಿ' ಕಾರ್ಯಗಳು ಭಾರೀ ವೇಗವಾಗಿ ಸಾಗುತ್ತಿವೆ. ಇದಕ್ಕೆ ಸಾಕ್ಷಿಯಾಗಿ ನೂರು ವರ್ಷಗಳ ನಂತರವೂ ಉಳಿದುಕೊಳ್ಳಬಲ್ಲ ಸಿಮೆಂಟ್ ಕಾಂಕ್ರೀಟಿನ ಬಿ.ಹೆಚ್. ರಸ್ತೆ, ಇದೀಗ ನಿರ್ಮಾಣವಾಗುತ್ತಿರುವ ವರ್ತುಲ ರಸ್ತೆ, ಅಗಲಗೊಳ್ಳಲಿರುವ ದುರ್ಗಿಗುಡಿ ರಸ್ತೆ, ಇನ್ನೇನು ಉದ್ಘಾಟನೆಯಾಗಲಿರುವ ಮಿನಿ ವಿಧಾನ ಸೌಧ, ಯಡಿಯೂರಪ್ಪ ಅಂಡ್ ಕಂಪನಿಯ ಬೃಹತ್ ಕಟ್ಟಡಗಳು, ಸದ್ಯದಲ್ಲಿಯೇ ನಿರ್ಮಾಣವಾಗಲಿರುವ ವಿಮಾನ ನಿಲ್ದಾಣ, ಸಾಗರ, ಶಿಕಾರಿಪುರ ರಸ್ತೆಯಲ್ಲಿ ಶರವೇಗದಲ್ಲಿ ಬೆಳೆಯುತ್ತಿರುವ ಬಡಾವಣೆಗಳು ಇವೆಲ್ಲಾ ಇವೆ. ಆದರೆ ಈ 'ಅಭಿವೃದ್ಧಿ' ಎಂಬ ಅಭಿವೃದ್ಧಿಯ ಗುತ್ತಿಗೆ ಹಿಡಿದಿರುವ ಮುಖ್ಯಮಂತ್ರಿ ಯಡಿಯೂರಪ್ಪನಾಗಲಿ, ಇವರ ಆಜ್ಞಾಧಾರಕ ಜಿಲ್ಲಾಧಿಕಾರಿ ಪಂಕಜ್‌ಕುಮಾರ್ ಪಾಂಡೆಯಾಗಲಿ, ಬಿಜೆಪಿ ಪ್ರಾಬಲ್ಯ ಹೊಂದಿರುವ ಶಿವಮೊಗ್ಗ ನಗರಸಭೆಯಾಗಲಿ ನಿಜವಾಗಿಯೂ ಈ 'ಅಭಿವೃದ್ಧಿ'ಯನ್ನು ಯಾರ ಹಿತಾಸಕ್ತಿಯಿಂದ ಮಾಡುತ್ತಿದ್ದಾರೆಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ.

ಅದು ಶಿವಮೊಗ್ಗ ಮತ್ತು ಅಕ್ಕಪಕ್ಕದ ಹಳ್ಳಿಗಳ ಜನರ ಉಪಯೋಗಕ್ಕೆಂದು ಕಟ್ಟಿಸಿಕೊಡಲಾಗಿದ್ದ ಪಶುವೈದ್ಯಕೀಯ ಚಿಕಿತ್ಸಾಲಯ. ನಗರದ ಹೃದಯಭಾಗದಲ್ಲಿ ಅಮೀರ್ ಅಹಮದ್ ವೃತ್ತದ ಬಳಿ ಎರಡು ಎಕರೆ ಜಮೀನಿನಲ್ಲಿ ಈಗ್ಗೆ 73 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಆ ಕಟ್ಟಡವನ್ನು ದಿವಂಗತ ಗರುಡಾಚಾರ್ ಎಂಬ ಖ್ಯಾತ ವಕೀಲರು ಅದನ್ನು ಸಾರ್ವಜನಿಕರ ಬಳಕೆಗೆಂದು ಸರ್ಕಾರಕ್ಕೆ ದಾನ ಮಾಡಿದ್ದರು. ಕಳೆದ ವರ್ಷವೇ ಈ 'ಅಭಿವೃದ್ಧಿ'ಯ ಹರಿಕಾರರ ಅಣತಿಯಂತೆ ಶಿವಮೊಗ್ಗ ನಗರಸಭೆಯು ಈ ಕಟ್ಟಡದ ಪಕ್ಕದಲ್ಲಿದ್ದ ಶಿವಪ್ಪನಾಯಕ ಮಾರ್ಕೆಟನ್ನೂ ಒಳಗೊಂಡಂತೆ ಹಲವು ಕಟ್ಟಡಗಳನ್ನು ನೆಲಸಮ ಮಾಡಿತ್ತು, ಆಗ ಈ ಪಶು ವೈದ್ಯಕೀಯ ಆಸ್ಪತ್ರೆಯನ್ನೂ ನೆಲಸಮ ಮಡುವ ಭರದಲ್ಲಿ ಅದರ ಕಾಂಪೌಂಡನ್ನೂ ಒಡೆದು ಹಾಕಲಾಗಿತ್ತು. ಆದರೆ ಅಂದು ಈ ಕಟ್ಟಡವನ್ನು ಒಡೆಯುವ ಕೆಲಸವನ್ನು ಹೈಕೋರ್ಟು ತಡೆಯಾಜ್ಞೆ ನೀಡಿದ್ದರಿಂದ ಅದಿನ್ನೂ ಉಳಿದಿದೆ.

ಅದು ಗರುಡಾಚಾರ್ ಕಾಳಜಿ

ಗರುಡಾಚಾರ್ ಎಂಬುವವರು ಪ್ರಭಾವಿ ವಕೀಲರೂ ಆಗಿದ್ದು 1936ರಲ್ಲಿ ಅಂದು ಅಸ್ತಿತ್ವದಲ್ಲಿದ್ದ ಮಿಳಗಟ್ಟದ ಹೊರವಲಯದಲ್ಲಿ ತಮ್ಮ ಹೆಸರಿನಲ್ಲಿದ್ದ ಎರಡೆಕರೆ ಜಮೀನಿನಲ್ಲಿ ಈ ಪಶುವೈದ್ಯ ಚಿಕಿತ್ಸಾಲಯವನ್ನು ನಿರ್ಮಿಸಿದರು. ಅವರ ಪ್ರಾಮಾಣಿಕ ಕಾಳಜಿ ಇದ್ದುದು ಜಾನುವಾರುಗಳ ರಕ್ಷಣೆಯ ಬಗ್ಗೆ ತಮ್ಮ ಈ ಕಾಳಜಿಯಿಂದ ತಮ್ಮ ಜಮೀನಿನಲ್ಲಿ ತಾವೇ ಕಟ್ಟಡವನ್ನೂ ನಿರ್ಮಿಸಿ ಸರ್ಕಾರಕ್ಕೆ ದೇಣಿಗೆ ನೀಡಿದ್ದರು. 05-09-1936ರಂದು ಮೈಸೂರು ಸರ್ಕಾರದ ದಿವಾನರಾಗಿದ್ದ ದಿ.ಸಿ.ರಾಜಗೋಪಾಲಾಚಾರಿಯವರೇ ಕಟ್ಟಡದ ಉದ್ಘಾಟನೆಯನ್ನೂ ನೆರವೇರಿಸಿದ್ದರು. ಈ ಕಟ್ಟಡವನ್ನು ದಿ.ಗರುಡಾಚಾರ್ ತಮ್ಮ ಮೊದಲ ಪತ್ನಿ ದಿ. ಗರುಡಮ್ಮರ ಸ್ಮರಣಾರ್ಥವಾಗಿಯೂ ಕಟ್ಟಿಸಿದ್ದರು. ಅಂದಹಾಗೆ ಗರುಡಮ್ಮನವರು ಬೇರೆ ಯಾರೂ ಅಲ್ಲ, ಪ್ರಥಮ ಕನ್ನಡ ಕಾದಂಬರಿಕಾರರಾಗಿದ್ದ ಮುನ್ಸೀಫ್ ಬಿ. ವೆಂಕಟಾಚಾರ್ಯರ ಮಗಳು. ಗರುಡಾಚಾರ್ ತಾವು ಸರ್ಕಾರಕ್ಕೆ ಮಾಡಿದ್ದ ದಾನದ ಪತ್ರದಲ್ಲಿ ಬಹಳ ಸ್ಪಷ್ಟವಾಗಿ ಈ ಆಸ್ತಿಯನ್ನು ಪಶುಗಳ ಆರೈಕೆ, ಪೋಷಣೆಗಾಗಿಯೇ ಬಳಸಬೇಕೆಂದೂ ಹೇಳಿದ್ದರು.

ನಗರಸಭೆಗೆ ಕೆಡಹುವ ಕಾತುರ

2008ರ ಆಗಸ್ಟ್ 30 ರಂದು ಶಿವಮೊಗ್ಗ ನಗರಸಭೆಯು ಈ ಆಸ್ಪತ್ರೆಯನ್ನು ಕೆಡವಿ ಅಲ್ಲಿನ ಎರಡೆಕರೆ ಜಾಗದಲ್ಲಿ ವಾಣಿಜ್ಯ ಸಂಕೀರ್ಣವನ್ನು ಕಟ್ಟುವ ನಿರ್ಣಯವನ್ನು ಕೈಗೊಂಡಿತು. ಅಕ್ಟೋಬರ್ 22ರಂದು ಈ ನಿರ್ಣಯವನ್ನು ಜಾರಿಮಾಡಲು ತನಗೆ ಅಧಿಕಾರ ನೀಡುವಂತೆ ಜಿಲ್ಲಾಡಳಿತವನ್ನು ಕೋರಿ ಒಂದು ಪತ್ರ ಬರೆಯಿತು. ಅಷ್ಟೊತ್ತಿಗಾಗಲೇ ಜಿಲ್ಲಾಡಳಿತವು ಬಿ.ಎಚ್. ರಸ್ತೆಯನ್ನು ಅಗಲ ಮಾಡುವ ಕೆಲಸದಲ್ಲಿ ತೊಡಗಿತ್ತಾದ್ದರಿಂದ ಅದು ನಗರಸಭೆಯೊಂದಿಗೆ ಕೈಜೋಡಿಸಿ ಈ ಕಟ್ಟಡವನ್ನು ನೆಲಸಮ ಮಾಡಲು ಜಂಟಿ ಕಾರ್ಯಾಚರಣೆಗಿಳಿಯಿತು.




ಗರುಡಾಚಾರ್ ನೀಡಿದ್ದ ಪಶು ಆಸ್ಪತ್ರೆ ಮೇಲೆ ಚೆಡ್ಡಿಗಳ ಕಣ್ಣು

ಈ ವಾಣಿಜ್ಯ ಸಂಕೀರ್ಣ ಯೋಜನೆಯ ಹಿಂದೆ ನಗರಸಭೆಗೆ ಶಿವಮೊಗ್ಗೆಯನ್ನು ಉದ್ಧಾರ ಮಾಡುವ ಇರಾದೆಯಾಗಲಿ, ಅಭಿವೃದ್ಧಿ ಮಾಡುವ ಇಚ್ಛೆಯಾಗಲಿ ಖಂಡಿತವಾಗಿಯೂ ಇರಲಿಲ್ಲ, ಬದಲಾಗಿ ಇವತ್ತು ಹೆಚ್ಚು ಮೌಲ್ಯ ಹೊಂದಿರುವ ಈ ಜಾಗದಲ್ಲಿ ಒಂದು ಕಟ್ಟಡವನ್ನು ಕಟ್ಟಿ ಅದನ್ನು ಖಾಸಗಿ ಅವರಿಗೆ ನೀಡಿ ಕಮಿಷನ್ ದೋಚುವ ಉದ್ದೇಶವಿತ್ತು, ಆ ಕಾರಣಕಾಗಿಯೇ ನಗರಸಭೆಯು ಲಾಭಬಡುಕತನಕ್ಕೆ ಬದ್ಧ ಇಡೀ ಕಟ್ಟಡವನ್ನು ಒಡೆಯಲು ಹೊರಟಾಗ ಕನಿಷ್ಟ ಸೌಜನ್ಯಕ್ಕಾದರೂ ಆ ಪುಣ್ಯಾತ್ಮ ಗರುಡಾಚಾರ್‌ರವರ ಕುಟುಂಬದವರನ್ನು ಸಂಪರ್ಕಿಸುವ ಗೋಜಿಗೂ ಹೋಗಲಿಲ್ಲ.

ಇದು ತನ್ನದೇ ಆಸ್ತಿಯೆಂಬಂತೆ 30-11-2008 ರಂದು ಜಿಲ್ಲಾಧಿಕಾರಿ ಪಾಂಡೆಯ ಅಧ್ಯಕ್ಷತೆಯಲ್ಲಿ ಒಂದು ಕಾಟಾಚಾರದ ಸಭೆ ನಡೆಸಿ ಪಶುವೈದ್ಯಕೀಯ ಚಿಕಿತ್ಸಾಲಯ ಮತ್ತು ಅಕ್ಕಪಕ್ಕದ ಜಾಗದಲ್ಲಿ ಬೃಹತ್ ಶಾಪಿಂಗ್ ಮಾಲ್ ಒಂದನ್ನು ನಿರ್ಮಿಸುವ ನಿರ್ಣಯವನ್ನು ಕೈಗೊಂಡುಬಿಟ್ಟಿತು. ಈಗಿರುವ ಕಟ್ಟಡಗಳಿಗೆ ಬದಲಿ ಜಾಗವನ್ನು ಒದಗಿಸಲಾಗುವುದೆಂದೂ ನಿರ್ಣಯಿಸಲಾಯಿತು. ನಗರಸಭೆಗೆ ಎಷ್ಟು ಅರ್ಜೆಂಟಿತ್ತೆಂದರೆ ತರಾತುರಿಯಲ್ಲಿ ಅಲ್ಲಿ ಶಾಪಿಂಗ್ ಮಾಲ್ ನಿರ್ಮಿಸಲು ಟೆಂಡರ್‌ನ್ನೂ ಕರೆಯಿತು. ಕಾನೂನಿನ ಪ್ರಕಾರ ಯಾವುದೇ ಒಂದು ಆಸ್ತಿಯನ್ನು ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ದಾನ ಮಾಡಿದಾಗ ಮುಖ್ಯವಾಗಿ ಅದು ಅದೇ ಉದ್ದೇಶಕ್ಕೆ ಉಪಯೋಗವಾಗುವುದು ಶರತ್ತು ಬದ್ಧವಾಗಿರುತ್ತದೆ. ಇದರ ಹೊರತಾಗಿ ಅದರ ಮೇಲೆ ಯಾರಿಗೂ ಹಕ್ಕಿರುವುದಿಲ್ಲ, ಆದರೆ ಶಿವಮೊಗ್ಗದಲ್ಲಿ ಕಾನೂನು, ಕಾಯ್ದೆ ಎಲ್ಲವೂ ತಾವೇ ಎಂದುಕೊಂಡಿರುವ ಜಿಲ್ಲಾಡಳಿತಕ್ಕಾಗಲಿ, ನಗರಸಭೆಗಾಗಲಿ ಇದರ ಕನಿಷ್ಠ ಜ್ಞಾನವೂ ಇರಲಿಲ್ಲ.

ಈ ಹಿಂದೆ ಬಿ.ಎಚ್.ರಸ್ತೆಯ ಇಕ್ಕೆಲಗಳ ಕಟ್ಟಡಗಳನ್ನು ಒಡೆದು ಹಾಕುವಾಗಲೂ ಇದೇ ಜಿಲ್ಲಾಡಳಿತ ತೊಂದರೆಗೊಳಗಾಗುವವರ ಬಗ್ಗೆ ಕನಿಷ್ಠ ಕನಿಕರವನ್ನೂ ತೋರಿರಲಿಲ್ಲ, ಕಳೆದ ಬಾರಿಯ ದಸರಾ ಹಬ್ಬವನ್ನು ಕಟ್ಟಡ ಮಾಲೀಕರು ಮತ್ತು ಬಾಡಿಗೆದಾರರು ಕಣ್ಣೀರಿನಿಂದ ಆಚರಿಸುವಂತೆ ಮಾಡಿತ್ತು, ತಮ್ಮ ಅಂಗಡಿಗಳ ಸಾಮಾನುಗಳನ್ನಾದರೂ ಖಾಲಿಮಾಡಲೂ ಅವಕಾಶಕೊಡದಂತೆ ಯಾರೆಷ್ಟು ಗೋಗರೆದರೂ ಅದನ್ನು ಕೇಳದೆ ಜೆಸಿಬಿ ಯಂತ್ರಗಳನ್ನು ಬಿಟ್ಟು ಕಟ್ಟಡಗಳನ್ನು ಉರುಳಿಸಿದ್ದರು. ಕೆಲವು ಕಟ್ಟಡ ಮಾಲೀಕರು ನ್ಯಾಯಾಲಯದ ಮೆಟ್ಟಿಲು ಹತ್ತಿದ ಮೇಲೆ ತಾವು ಯಾವ ಕಟ್ಟಡಗಳನ್ನೂ ಒಡೆದೇ ಇಲ್ಲವೆಂದೂ, ಮಾಲೀಕರುಗಳು ತಾವಾಗಿಯೇ ಕಟ್ಟಡಗಳನ್ನು ಒಡೆದುಕೊಂಡಿದ್ದಾರೆಂದೂ ನ್ಯಾಯಾಲಯದಲ್ಲಿ ಹೇಳಿಕೆ ನೀಡುವ ದಾರ್ಷ್ಟ್ಯವನ್ನು ಇದೇ ಡಿ.ಸಿ.ಪಾಂಡೆ ತೋರಿಸಿದ್ದ. ಹೀಗೆ ನ್ಯಾಯಾಲಯವನ್ನೇ ದಿಕ್ಕುತಪ್ಪಿಸುವ ಜಿಲ್ಲಾಡಳಿತಕ್ಕಾಗಲೀ,




ಯಡಿಯೂರಪ್ಪ ಮತ್ತು ಈಶ್ವರಪ್ಪ ಹೇಳಿದ್ದೇ ವೇದವಾಕ್ಯವೆನ್ನುವ ನಗರಸಭೆಗಾಗಲಿ ಪಶುವೈದ್ಯಕೀಯ ಆಸ್ಪತ್ರೆಯ ಹಿಂದಿರುವ ದಿ.ಗರುಡಾಚಾರ್‌ರ ಕಾಳಜಿ, ಸೇವಾ ಮನೋಭಾವನೆ ಅರ್ಥವಾಗುವುದು ಸಾಧ್ಯವೇ?

ಈ ಮಧ್ಯೆ ಇನ್ನೊಂದು ಸೋಜಿಗದ ಅಂಶವನ್ನು ಗಮನಿಸಿ. ಸದಾ ಗೋರಕ್ಷಣೆಯ ಬಗ್ಗೆ ಪುಂಖಾನುಪುಂಖವಾಗಿ ಪುಂಗಿ ಬಿಡುವ ಬಿಜೆಪಿಯಾಗಲಿ, ಇತರೆ ಚೆಡ್ಡಿ ಸಂಘಟನೆಗಳಾಗಲಿ ಅದೇ ಗೋವುಗಳ ಆರೋಗ್ಯ ಕಾಪಾಡಲೆಂದೇ ಇರುವ ಈ ಪಶು ಚಿಕಿತ್ಸಾಲಯವನ್ನು ನಾಶಗೊಳಿಸಲು ಅದೇ ಬಿಜೆಪಿ ನೇತೃತ್ವದ ಸರ್ಕಾರ ಮುಂದಾಗಿದ್ದರೂ ಇಲ್ಲಿಯತನಕ ಚಕಾರವೆತ್ತಿಲ್ಲ! ಈ ಕ್ರಮದಿಂದಾಗಿ ಶಿವಮೊಗ್ಗ ಮತ್ತು ಸುತ್ತಮುತ್ತಲಿರುವ ಗೋವುಗಳಿಗೆ, ಜಾನುವಾರುಗಳಿಗೆ ತೊಂದರೆ ಆಗುತ್ತದೆಂದಾಗಲಿ, ಮಾಲ್ ನಿರ್ಮಾಣ ದಿಂದ ಖಾಸಗಿಯವರಿಗೆ ಮಾತ್ರ ಲಾಭವೆಂದಾಗಲಿ ಇವರು ಪ್ರತಿಭಟಿಸುವುದಿರಲಿ, ಕನಿಷ್ಟ ಒಂದು ಹೇಳಿಕೆಯನ್ನೂ ನೀಡಿಲ್ಲ. ಗೋಮಾತೆಯ ಮೇಲಿನ ಇವರ ಭಕ್ತಿ ಎಷ್ಟು ಡೋಂಗಿ ಎಂಬುದು ಇದರಿಂದ ತಿಳಿಯುತ್ತದೆ.

ಇದುವರೆಗೆ ಈ ಆಸ್ಪತ್ರೆಯ ಲಾಭವನ್ನು ಶಿವಮೊಗ್ಗದ ಹಾಗೂ ನೆರೆಯ ಹಳ್ಳಿ, ತಾಲೂಕುಗಳ ಸಾವಿರಾರು ಜನರು ಪಡೆದಿದ್ದಾರೆ. ಎಷ್ಟೋ ಜಾನುವಾರುಗಳು ಈ ಚಿಕಿತ್ಸಾಲಯದಿಂದಾಗಿ ಬದುಕಿ ಉಳಿದಿವೆ. ಕೇವಲ ರಾಜಕೀಯ ಲಾಭಕ್ಕಾಗಿಯೇ ಗೋರಕ್ಷಣೆಯ ಕುರಿತು ಮಾತಾಡುವವರಿಗೆ ಈ ಸತ್ಯ ತಿಳಿದಿದ್ದರೂ ಉಸಿರೆತ್ತದೆ ಮೌನವಾಗಿದ್ದಾರೆಂದರೆ ಅರ್ಥವೇನು?!

ಈ ಕಟ್ಟಡವನ್ನು ನೆಲಸಮ ಮಾಡುವುದಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿದ ಮೇಲೆ ನಗರಸಭೆ ಏನೆಂದು ಹೇಳಿಕೆಯಿತ್ತಿದೆ ಗೊತ್ತೆ? "ಈ ಆಸ್ಪತ್ರೆ ಕಟ್ಟಡಕ್ಕೆ ರಸ್ತೆಯ ಮೇಲೆ ಜಾನುವಾರುಗಳನ್ನು ಹೊಡೆದುಕೊಂಡು ಬರಲು ಆಗುವುದಿಲ್ಲ. ಹಾಗಾಗಿ ಆ ಕಟ್ಟಡವನ್ನು ಕೆಡವಲು ನಗರಸಭೆಗೆ ಅವಕಾಶವನ್ನು ನೀಡಬೇಕು'' ಎಂದಿದೆ. ಆದರೆ ಪಶು ವೈದ್ಯಕೀಯ ಆಸ್ಪತ್ರೆ ಎಂದರೆ ದನ ಕರುಗಳನ್ನು ಹೊಡೆದುಕೊಂಡು ಬಂದು ಇಲ್ಲಿ ಕೂಡುವುದೇನೂ ಅಲ್ಲವಲ್ಲ, ಬದಲಾಗಿ ನಗರಸಭೆಗಾಗಲಿ, ಜಿಲ್ಲಾಡಳಿತಕ್ಕಾಗಲಿ ಇಚ್ಛಾಶಕ್ತಿ ಇದ್ದಲ್ಲಿ ಈ ಕಟ್ಟಡವನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ಪಶು ವೈದ್ಯಕೀಯಕ್ಕೆ ಸಂಬಂಧಿಸಿದ ಸಂಶೋಧನೆ, ಹಸುಗಳ ತಳಿ ಸಂಶೋಧನೆ, ಅಭಿವೃದ್ಧಿಗೆ ಬಳಸಿದಲ್ಲಿ ಹೆಚ್ಚು ಉಪಯುಕ್ತತೆ ಇರುತ್ತದೆ.



ಆದರೆ ಸದ್ಯ ಶಿವಮೊಗ್ಗದ ಇಂಚಿಂಚು ನೆಲವನ್ನೂ ಲಾಭದ ಕಣ್ಣಿನಿಂದಲೇ ನೋಡುತ್ತಿರುವ ಅಧಿಕಾರಶಾಹಿಗಳಿಗೆ ಈ ಇಚ್ಛಾಶಕ್ತಿ ಇರಲು ಸಾಧ್ಯವಿಲ್ಲ, ಅವರಿಗೇನಿದ್ದರೂ ಆದಷ್ಟು ಬೇಗ ಇಡೀ ಕಟ್ಟಡವನ್ನು ಕೆಡವಿ ಇಡೀ ಮೂರೆಕರೆ ಜಾಗದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿ ಬಿಜೆಪಿಯ ಚುನಾವಣೆ ಖರ್ಚಿಗೆ ಕಿಕ್‌ಬ್ಯಾಕ್ ಕೊಡುವ ಯಾರೋ ದೊಡ್ಡ ಉದ್ಯಮಿಗಳಿಗೆ ಅದನ್ನು ಗುತ್ತಿಗೆ ಕೊಟ್ಟು ಪ್ರತಿವರ್ಷ ಬಾಡಿಗೆ ಹೆಸರಲ್ಲಿ ಒಂದಷ್ಟು ದುಡ್ಡು ತಿನ್ನುವ ಉದ್ದೇಶವಿದೆ.

ಇದನ್ನು ಮಾಡಲಿಕ್ಕೆ ಈಗ ನ್ಯಾಯಾಲಯದ ತಡೆಯಾಜ್ಞೆ ಅಡ್ಡಿಯಾಗಿದೆ. ಈಗ ನಗರಸಭೆಯ, ಜಿಲ್ಲಾಡಳಿತದ ಅಧಿಕಾರಿಗಳು ಕೈಕೈ ಹಿಸುಕುತ್ತಾ ತಡೆಯಾಜ್ಞೆ ತಂದವರ ಮೇಲೆ ಒತ್ತಡ ಹಾಕುತ್ತಿದ್ದಾರೆ. ನಗರಸಭೆಯು ಇನ್ನೊಂದು ಕುತಂತ್ರವನ್ನು ಮಾಡಲೂ ಪ್ರಯತ್ನಿಸಿದೆ. ಈ ಪಶುವೈದ್ಯಕೀಯ ಚಿಕಿತ್ಸಾಲಯದ ಕಟ್ಟಡ ಮಾತ್ರವೇ ಗರುಡಾಚಾರ್‌ರಿಂದ ದಾನವಾಗಿ ಬಂದದ್ದೆಂದೂ, ಆ ಎರಡೆಕರೆ ಜಾಗವೇನಿದ್ದರೂ ಅದು ಸರ್ಕಾರಕ್ಕೇ ಸೇರಿದ್ದೆಂದೂ ದಾಖಲೆಗಳನ್ನು ಸೃಷ್ಟಿಸಲೂ ಯತ್ನಿಸಿದೆ. ಆದರೆ ಮೂಲ ದಾಖಲೆಗಳು ನಗರಸಭೆಯು ಈ ವಾದ ಕುಟಿಲತನದಿಂದ ಕೂಡಿದ್ದು ಎಂಬುದನ್ನು ಬಯಲು ಮಾಡುತ್ತವೆ.

ದಿ.ಗರುಡಾಚಾರ್‌ರವರ ಕಾಳಜಿ, ಆಶಯವನ್ನು ಸರಿಯಾಗಿ ಅರ್ಥಮಾಡಿಕೊಂಡಿರುವ ಅವರ ವಂಶಸ್ಥರು ಹಾಗೂ ಪಶುವೈದ್ಯಕೀಯ ಚಿಕಿತ್ಸಾಲಯದಲ್ಲಿ ಹಲವಾರು ವರ್ಷಗಳಿಂದ ಸದ್ದಿಲ್ಲದೆ ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿರುವವರು ನಗರಸಭೆಯ ಈ ಅತಿಕ್ರಮಣ ಕಂಡು ಬಹಳವಾಗಿ ನೊಂದುಕೊಂಡು ಈ ಅನ್ಯಾಯವನ್ನು ತಡೆಯಲು ಮುಂದಾಗಿದ್ದಾರೆ.

ದಿ.ಗರುಡಾಚಾರ್‌ರವರ ಏಕೈಕ ಮಗಳಾಗಿರುವ ವಯೋವೃದ್ಧೆ ಕೆ.ಎನ್. ಗೋದಮ್ಮ ಕಾನೂನಿನ ಮೊರೆ ಹೋಗಿದ್ದಾರೆ. ಗೋದಮ್ಮನವರ ಕಾಳಜಿ ಎಷ್ಟು ನಿಷ್ಕಳಂಕವಾಗಿದೆ ಎಂದರೆ ಅವರು ತಾವು ಗರುಡಾಚಾರ್ ಅವರ ಪುತ್ರಿ ಎಂಬ ಕಾರಣಕ್ಕೆ ನ್ಯಾಯಾಲಯದ ಮೊರೆ ಹೋಗಿಲ್ಲ, ಬದಲಾಗಿ ಸಾಮಾಜಿಕ ಕಾಳಜಿಯಿಂದ ಓರ್ವ ಸಾಮಾನ್ಯ ವ್ಯಕ್ತಿಯಂತೆ ಈ ಕೆಲಸಕ್ಕೆ ಮುಂದಾಗಿದ್ದಾರೆ. ಅವರ ದಾವೆಯು ಇದೀಗ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ರೂಪದಲ್ಲಿ ಉಚ್ಚನ್ಯಾಯಾಲಯದ ಮುಂದಿದೆ. ಆದರೂ ಗರುಡಾಚಾರ್‌ರವರ ಕುಟುಂಬದವರು ಕಟ್ಟಡವನ್ನು ಕೆಡಹುವ ತಮ್ಮ ಕಾರ್ಯಕ್ಕೆ ಒಪ್ಪಿದ್ದಾರೆ ಎಂದು ನಂಬಿಸಲು ನಗರಸಭೆಯು ಕಪಟಯತ್ನ ನಡೆಸಿದೆ.

ಇದು ಮೊದಲೇನಲ್ಲ

ಈ ಹಿಂದೆ 1953 ರಲ್ಲಿ ಗರುಡಾಚಾರ್‌ರವರು ಇದ್ದಾಗಲೇ ಅವರನ್ನು ಈ ಜಾಗದಲ್ಲಿ ಬಸ್‌ನಿಲ್ದಾಣ ನಿರ್ಮಿಸಲು ಸರ್ಕಾರವು ಅವಕಾಶ ಕೇಳಿತ್ತು, ಆದರೆ ಅದನ್ನು ಗರುಡಾಚಾರ್ ಖಡಾಖಂಡಿತವಾಗಿ ನಿರಾಕರಿಸಿ "ನಾನು ಈ ಜಾಗವನ್ನು ದಾನ ಮಾಡಿದ್ದು ಜಾನುವಾರುಗಳಿಗೆ ಒಳಿತಾಗಬೇಕು ಎನ್ನುವ ಒಂದೇ ಉದ್ದೇಶದಿಂದ. ಬೇರೆ ಯಾವ ಉದ್ದೇಶಕ್ಕೂ ಈ ಜಾಗವನ್ನು ಬಳಸಲು ನಾನು ಕೊಡುವುದಿಲ್ಲ, ಬಳಸಲೂಬಾರದು" ಎಂದು ಹೇಳಿ ಸರ್ಕಾರದ ಪ್ರತಿನಿಧಿಗಳನ್ನೂ ವಾಪಸ್ ಕಳಿಸಿಬಿಟ್ಟಿದ್ದರು. ಅವರು ನಿಧನರಾದ ಮೇಲೆ ಮತ್ತೆ 1986ರಲ್ಲೊಮ್ಮೆ ನಗರಸಭೆಯು ಈ ಜಾಗವನ್ನು ಅನ್ಯ ಉದ್ದೇಶಕ್ಕೆ ಬಳಸಲು ಹೊರಟಿತ್ತು. ಆಗ ದಿ. ಗರುಡಾಚಾರ್‌ರವರ ಪುತ್ರ ರಾಮಕೃಷ್ಣ ಅಯ್ಯಂಗಾರ್ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಈಗ ಮತ್ತೆ ನಗರಸಭೆ, ಜಿಲ್ಲಾಡಳಿತ ಎರಡೂ ಸೇರಿ ಅದೇ ಕೆಲಸಕ್ಕೆ ಕೈ ಹಾಕಿವೆ. ಈಗೆ ಈ ಕೃತ್ಯದ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಈಶ್ವರಪ್ಪರ ಕುಮ್ಮಕ್ಕು ಇರುವುದು ಮೇಲ್ನೋಟಕ್ಕೇ ತಿಳಿಯುತ್ತದೆ. ನಗರಸಭೆಯ ಅಕ್ರಮವನ್ನು ಪ್ರಶ್ನಿಸಿ ಗರುಡಾಚಾರ್ ಕುಟುಂಬದವರು ಯಡಿಯೂರಪ್ಪನಿಗೂ, ಜಿಲ್ಲಾಧಿಕಾರಿಗೂ ಹಲವಾರು ಪತ್ರಗಳನ್ನು ಬರೆದಿದ್ದರಾದರೂ ಈವರೆಗೆ ಒಂದಕ್ಕೂ ಉತ್ತರಿಸುವ ಸೌಜನ್ಯವನ್ನು ಯಾರೂ ತೋರಿಲ್ಲ. ಕೊನೆಗೆ ಬೇರೆ ವಿಧಿ ಇಲ್ಲದೆ ಗರುಡಾಚಾರ್ ಅವರ ಕುಟುಂಬದವರು ಮಾಹಿತಿ ಹಕ್ಕು ಕಾಯ್ದೆಯಡಿ ಈ ಜಾಗವನ್ನು ಕುರಿತು ಎಲ್ಲ ದಾಖಲಾತಿಗಳನ್ನು ಪಡೆದು ಕೋರ್ಟಿನ ಮೆಟ್ಟಿಲನ್ನು ಏರಿದ್ದಾರೆ.

ಇಂದು ಶಿವಮೊಗ್ಗದಲ್ಲಿ 'ಅಭಿವೃದ್ಧಿ' ಯ ಹೆಸರಲ್ಲಿ ನಡೆಯುತ್ತಿರುವುದೇನಿದ್ದರೂ ಯಡಿಯೂರಪ್ಪ, ಈಶ್ವರಪ್ಪ, ಡಿ.ಹೆಚ್ ಶಂಕರಮೂರ್ತಿ ಮತ್ತವರ ಪಟಾಲಂಗಳ ಅಭಿವೃದ್ಧಿ, ಇದಕ್ಕಾಗಿ ಇಡೀ ಜಿಲ್ಲಾಡಳಿತವನ್ನೂ, ನಗರಸಭೆಯ ಅಧಿಕಾರವನ್ನೂ ಬಳಸಿಕೊಳ್ಳಲಾಗುತ್ತಿದೆ. ಸಾವಿರಾರು ಕೋಟಿ ರೂ.ಗಳನ್ನು ಸುರಿದು ನಿರ್ಮಾಣವಾಗುತ್ತಿರುವ ರಸ್ತೆ ಗುತ್ತಿಗೆಗಳನ್ನು ಹಿಡಿದಿರುವ ಮೂರ್‍ನಾಲ್ಕು ಕಂಪನಿಗಳು ಹಣವನ್ನು ಬಾಚಿಕೊಳ್ಳುತ್ತಿವೆ. ಬರಲಿರುವ ಎಲೆಕ್ಷನ್‌ಗಳಿಗೆ ಸಾಕಾಗುವಷ್ಟು ಹಣವನ್ನು ಈ ಗುತ್ತಿಗೆದಾರರ ಕಮೀಷನ್‌ನಿಂದಲೇ ಬಿಜೆಪಿ ಲಪಟಾಯಿಸಿದೆ. ಆದರೆ ಶಿವಮೊಗ್ಗದ ಜನ ಮಾತ್ರ ತಮ್ಮ ಊರು ಭಾರೀ ಅಭಿವೃದ್ಧಿಯಾಗುತ್ತಿದೆ ಎಂಬ ಭ್ರಮೆಯಲ್ಲಿ ತೇಲಾಡುತ್ತಿದ್ದಾರೆ.

ಇಂಥದ್ದರಲ್ಲಿ ಜನುವಾರುಗಳ ಮೇಲಿದ್ದ ದಿ.ಗರುಡಾಚಾರ್‌ರ ಪ್ರೀತಿಯನ್ನು, ಅದರ ಸಂಕೇತವಾಗಿರುವ ಪಶುವೈದ್ಯಕೀಯ ಆಸ್ಪತ್ರೆಯನ್ನು, ಆ ಆವರಣದಲ್ಲಿರುವ ಅಮೃತಮಹಲ್ ತಳಿ ಉದ್ಧಾರಕ್ಕಿರುವ ಕಟ್ಟಡವನ್ನು ಅವುಗಳನ್ನೆಲ್ಲ ಉಳಿಸಲು ಹೋರಾಡುತ್ತಿರುವ ಗರುಡಾಚಾರ್‌ರ ಏಕೈಕ ಮಗಳು ಗೋದಮ್ಮ ಮತ್ತಿತರರ ಕಾಳಜಿಯನ್ನು ಅರಿತು ಅವರ ಬೆಂಬಲಕ್ಕೆ ಯಾರಾದರೂ ಇದ್ದಾರೆ ಎಂದು ನಿರೀಕ್ಷಿಸಬಹುದೇ?

● ಹರ್ಷ ಕುಗ್ವೆ

ಪಿಡಿಓ ಪರೀಕ್ಷೆ: ಬಿಜೆಪಿಗಳಿಂದ ಬಿಜೆಪಿಗಳಿಗಾಗಿ!

ಅನುಭವಿ, ಆಯೋಗ್ಯ ಸರ್ಕಾರವೊಂದರಿಂದಾಗಿ ನಾಗಬೇಕೋ ಅವೆಲ್ಲ ಆಗುತ್ತಿವೆ. ನೆಟ್ಟಗೆ ಒಂದು ರೀಕ್ಷೆಯನ್ನು ನಡೆಸಲಾಗದ ದುಷ್ಟ ಬಿಜೆಪಿಗಳು, ರ್ಕಾರಿ ನೇಮಕಾತಿಗಳಲ್ಲೂ ಬಿಜೆಪಿ ಕಾರ್ಯಕರ್ತರನ್ನು ತುರುಕುವ ಹೀನ ಕೆಲಸಕ್ಕಿಳಿದಿದ್ದಾರೆ.


ಪಿಎಸ್‌ಐ ಪರೀಕ್ಷೆಯ ಪ್ರಶ್ನಪತ್ರಿಕೆ ಲೀಕ್ ಆದ ನ್ನಿ ಬಂದರೂ ಗೃಹಸಚಿವ ಆರಿವುಗೇಡಿ ಕಾರ್ಯಗದು ಸಂಬಂಧವಿಲ್ಲ. ಮುಖ್ಯಮಂತ್ರಿಗೆ ವರ್ಗಾವಣೆ ಬಗ್ಗೆ ದಿಟೇಲ್ ಗೊತ್ತು. ಆದರೆ ತನ್ನ ಸರ್ಕಾರ ಯಾವ್ಯಾವ ನೇಮಕಾತಿ ಮಾಡುತ್ತಿದೆ ಎಂಬುದು ಮಾತ್ರ ಗೊತ್ತೇ ಇಲ್ಲ. ಇತ್ತ ಶೋಭಾ ಕರಂದ್ಲಾಜೆಯವರ ಪಂಚಾಯತ್‌ರಾಜ್ ಇಲಾಖೆ ನಡೆಸಿದ ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ನೇಮಕಾತಿ ಪರೀಕ್ಷೆಯಂತೂ ಅಧ್ವಾನಗಳ ಸರಣಿಯನ್ನೇ ಸೃಷ್ಟಿಸುತ್ತಿದೆ. ಸಾವಯವ ಕೃಷಿ, ಅರಣ್ಯರಕ್ಷಣೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ತನ್ನ ನಿಷ್ಠ ಕಾರ್ಯಕರ್ತರಿಗೆ ಉದ್ಯೋಗ ನೀಡಿದ ಬಿಜೆಪಿಯೀಗ ಸರ್ಕಾರಿ ಕೆಲಸಗಳಲ್ಲೂ ತನ್ನ ಕಾರ್ಯಕರ್ತರನ್ನು ತುರುಕಿಬಿಡುತ್ತಿದೆ. ಅದರ ಫಲವೇ ಪರೀಕ್ಷಾ ಅಕ್ರಮಗಳು. ಕೆಲತಿಂಗಳ ಹಿಂದೆ ಬೆಂಗಳೂರು ವಿವಿಯ ಪ್ರಶ್ನಪತ್ರಿಕೆಗಳು ಬಯಲಾದಾಗ ಎಬಿವಿಪಿ ಕಾರ್ಯಕರ್ತರ ಹೆಸರು ಕೇಳಿಬಂದಿತ್ತು. ಈಗ ಪಿಡಿಓ ಪರೀಕ್ಷೆ ಎಂಬ ಪ್ರಹಸನ ಬಿಜೆಪಿಯ ಅಜೆಂಡಾದಂತೆ ನಡೆದು, ಆಕಸ್ಮಿಕವಾಗಿ ಗಂಗಾವತಿಯಲ್ಲಿ ಪ್ರಶ್ನಪತ್ರಿಕೆ ಮತ್ತು ಸರಿಯುತ್ತರಗಳು ಲೀಕ್ ಆಗಿದ್ದು ಪತ್ತೆಯಾಗಿ ಬಿಜೆಪಿ ಬಣ್ಣವನ್ನು ಬಯಲು ಮಾಡಿದೆ.

ಅಭ್ಯರ್ಥಿಗಳೊಂದಿಗೆ ಚೆಲ್ಲಾಟ


ಬರಲಿರುವ ಗ್ರಾಮಪಂಚಾಯತ್ ಚುನಾವಣೆ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಗ್ರಾಮೀಣ ಭಾಗದಲ್ಲಿ ಬೇರುಬಿಟ್ಟುಕೊಳ್ಳಲು ರೂಪಿಸಿದ ಕಾರ್ಯಕ್ರಮವೇ ಈ ಪಿಡಿಓ ನೇಮಕಾತಿ. ಇಲ್ಲಿವರೆಗೆ ಇಂತಹ ಹುದ್ದೆಯೇ ಇರಲಿಲ್ಲ. ಗ್ರಾಮಪಂಚಾಯತಿಯ ಕಾರ್ಯದರ್ಶಿಗಳೇ ಮಾಡಬಹುದಾದ ಕೆಲಸವನ್ನು ಅನಗತ್ಯ ಹುದ್ದೆ ಸೃಷ್ಟಿಸುವ ಮೂಲಕ ಪಿಡಿಓಗಳಿಗೆ ನೀಡಲು ಶೋಭಾ ನಿರ್ಧರಿಸಿದರು. 4-5 ಗ್ರಾಮಪಂಚಾಯತಿಗಳಿಗೆ ಒಬ್ಬ ಅಭಿವೃದ್ಧಿ ಅಧಿಕಾರಿಯನ್ನು ನೇಮಿಸುವ ಮೂಲಕ ಎಲ್ಲೆಡೆ ತನ್ನ ಚೆಡ್ಡಿ ಅಜೆಂಡಾವನ್ನು ಹರಡಲು, ಎಲ್ಲ ಯೋಜನೆಗಳ ಫಲಾನುಭವಿಗಳು ತಮ್ಮವರಾಗುವಂತೆ ನೋಡಿಕೊಳ್ಳಲು ಮತ್ತು ಗ್ರಾಮಪ್ರದೇಶಗಳ ಮೇಲೆ ಬಿಜೆಪಿ ಹಿಡಿತ ಸಾಧಿಸಲು ರೂಪುಗೊಂಡ ಹುದ್ದೆ ಇದು. ಹಾಗಾಗಿ ಈ ಹುದ್ದೆಗಳಲ್ಲಿ ಎಷ್ಟಾಗುತ್ತೋ ಅಷ್ಟು ಬಿಜೆಪಿ ಮತ್ತು ಕಾರ್ಯಕರ್ತರನ್ನು ತುರುಕುವುದು ಮತ್ತು 3-4 ತಿಂಗಳಲ್ಲಿ ಜರುಗಲಿರುವ ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ಅವರನ್ನು ಬಳಸಿಕೊಂಡು ಹೆಚ್ಚು ಸ್ಥಾನ ಗೆಲ್ಲುವುದು ಈ ನೇಮಕಾತಿಯ ಪರಮೋದ್ದೇಶ. ಆದರೆ ಗಂಗಾವತಿಯಲ್ಲಿ ಎಡವಟ್ಟು ನಡೆದಿದ್ದರಿಂದ ಈಗ ಹೈಕೋರ್ಟ್ ಕಡೆ ಮುಖಮಾಡಿ ಪಿಳಿಪಿಳಿ ಕಣ್ಣು ಬಿಡುತ್ತಿದ್ದಾರೆ ಶೋಭಕ್ಕ.

ಸೆಪ್ಟೆಂಬರ್ 20ರಂದು 2400 ಪಿಡಿಓ ಹುದ್ದೆಗಳಿಗಾಗಿ ಒಂದೂವರೆ ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದರು. ಕೊಪ್ಪಳ ಜಿಲ್ಲೆಯ 58 ಹುದ್ದೆಗಳಿಗೆ ಮೂರು ಸಾವಿರಕ್ಕಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು ಎಂಬ ಪಾಯಿಂಟೇ ಅಕ್ರಮದ ಮುನ್ಸೂಚನೆಯಂತಿತ್ತು.





ವಿಠ್ಠಲ್ ಚವ್ಹಾಣ್



ಆಂಜನೇಯ



ಬಾಲಸ್ವಾಮಿ



ಶೋಭಕ್ಕನ ಕೈಯಲ್ಲಿ ಚೆಡ್ಡಿ ಲಿಸ್ಟ್

ಪಿಡಿಓ ನೇಮಕಾತಿ ಅಧಿಸೂಚನೆ ಹೊರಬಿದ್ದಾಗಲೇ ಚೆಡ್ಡಿಗಳು ತಮ್ಮ ಕೆಲಸ ಆರಂಭಿಸಿದ್ದರು. ಪಿಡಿಓ ಪರೀಕ್ಷೆಗೆ ಅರ್ಜಿ ಹಾಕಿದ ಚೆಡ್ಡಿ ಬಾಂಧವರ ಜಿಲ್ಲಾವಾರು ಲಿಸ್ಟ್ ರೆಡಿ ಮಾಡಿದರು. ಆ ಲಿಸ್ಟನ್ನು ಎಬಿವಿಪಿ ಮೂಲದ ಸಚಿವೆ ಶೋಭಾರ ಕೈಗೆ ನೀಡಿದರು.

ಈಗ ಏಳುವ ಪ್ರಶ್ನೆಯೆಂದರೆ, ಈಗ ಸಿಕ್ಕಿಬಿದ್ದಿರುವ ಗ್ಯಾಂಗಿನ ಸಹಾಯದಿಂದ ಸಚಿವೆ ಬಳಿಯಿದ್ದ ಲಿಸ್ಟ್‌ನಲ್ಲಿನ ಚೆಡ್ಡಿ ಅಭ್ಯರ್ಥಿಗಳಿಗೆ ನೆರವು ನೀಡಲು ಪ್ರಯತ್ನಿಸಿರಬಹುದೇ? ಸಮಗ್ರ ತನಿಖೆಯಾದರೆ ಮಾತ್ರ ಸಂಪೂರ್ಣ ಸತ್ಯ ಹೊರಬೀಳುವುದು.



ಶೋಭಾ ಕರಂದ್ಲಾಜೆ

ಪ್ರಶ್ನಪತ್ರಿಕೆಗಳನ್ನು ಲೀಕ್ ಮಾಡಿದ್ದಲ್ಲದೇ ಸರಿಯುತ್ತರಗಳನ್ನೂ ಪೂರೈಸುವ ಕೆಲಸ ಮಾಡಿದವರು ಸರ್ಕಾರಿ ಅಧಿಕಾರಿಗಳೇ! ಗಂಗಾವತಿ ಪಿಎಸ್‌ಐ ಗುಂಡಪ್ಪ ಉಡಗಿಯವರ ಕಾರ್ಯಾಚರಣೆಯಲ್ಲಿ ಈ ಕಳ್ಳರು ಸಿಕ್ಕಿಬೀಳದೆ ಹೋಗಿದ್ದರೆ ಸಾವಿರಾರು ಚೆಡ್ಡಿಗಳು ಈಗಾಗಲೇ ಪಿಡಿಓಗಳಾಗಿ ಬಿಜೆಪಿಯ ಪ್ರಚಾರ ಕಾರ್ಯದಲ್ಲಿ ತೊಡಗಿರುತ್ತಿದ್ದರೇನೋ?

ಅಂದು ಉಡಗಿ ಕೈಗೆ ಸಿಕ್ಕಿ ಬಿದ್ದವರೇನೂ ಕಡಿಮೆ ಆಸಾಮಿಗಳಲ್ಲ. ಪ್ರಕರಣದ ಪ್ರಮುಖ ರೂವಾರಿ ವಿಠ್ಠಲ್ ಚವ್ಹಾಣ್ ಸಕ್ಕರೆ ಸಚಿವ ಶಿವರಾಜ್ ತಂಗಡಿಯ ಆಪ್ತ ಮತ್ತು ಬಿಜೆಪಿಯ ಪ್ರಮುಖ ನಾಯಕ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳನ ಮಗನೊಂದಿಗೂ ವ್ಯವಹಾರಿಕ ಸಂಬಂಧ ಇಟ್ಟುಕೊಂಡಿರುವ ಚವ್ಹಾಣ್ ಗ್ರಾನೈಟ್ ಕಲ್ಲುಗಳ್ಳ.



ಪರೀಕ್ಷೆ ಬರೆಯುತ್ತಿರುವ ಅಭ್ಯರ್ಥಿಗಳು...

ಇಂತಹ ಕಲ್ಲುಗಳ್ಳನಿಗೆ ಸಾಥ್ ನೀಡಿದವರಲ್ಲಿ ಇಬ್ಬರು ಕೆಎಎಸ್ ಅಧಿಕಾರಿಗಳಿದ್ದಾರೆ. ಹುಬ್ಬಳ್ಳಿಯ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಹನುಮಂತಪ್ಪ ಸಾಲಿ, ಧಾರವಾಡ ವಾಣಿಜ್ಯ ತೆರಿಗೆ ಇಲಾಖೆಯ ಪ್ರೊಬೆಷನರಿ ಸಹಾಯಕ ಆಯುಕ್ತ ಬಾಲಸ್ವಾಮಿ ಇವರಿಬ್ಬರೂ ಕೆಎಎಸ್ ಅಧಿಕಾರಿಗಳು. ಸಿಂಧನೂರು ಅಬಕಾರಿ ಇನ್ಸ್‌ಪೆಕ್ಟರ್ ಆಂಜನೇಯ ಬುದಗುಂಪ, ಬೆಳಗಾವಿ ಸಿದ್ಧರಾಮೇಶ್ವರ ಡಿಇಡಿ ಕಾಲೇಜಿನ ಮಾಸ್ತರು ರಾಜಶೇಖರ್ ಚಳಗೇರಿ, ಇನ್ನೊಬ್ಬ ಉಪನ್ಯಾಸಕ ಸಂಜೀವ್ ಜುಮಾರ್, ಕಂಪ್ಯೂಟರ್ ಕೇಂದ್ರವೊಂದರ ಶ್ರೀಕಾಂತ್- ಇವರೆಲ್ಲ ಧನದಾಹಿಗಳು. ಅದಕ್ಕೂ ಮುಖ್ಯವಾಗಿ ಚೆಡ್ಡಿ ನಿಷ್ಠೆಯ ದುಷ್ಕರು...

ಮೊಬೈಲ್‌ಗಳ ಮೂಲಕವೇ ವ್ಯವಹಾರ ಕುದುರಿಸಿದ ಈ ಕಳ್ಳರು ಇಡೀ ರಾಜ್ಯಾದ್ಯಂತ ಜಾಲ ಬೀಸಿದ್ದಾರೆ. ಒಂದಿಷ್ಟನ್ನು ದುಡ್ಡಿಗಾಗಿ ಮಾರಿಕೊಂಡಿದ್ದರೆ, ಇನ್ನೊಂದಿಷ್ಟನ್ನು ಬಿಜೆಪಿ ಕಾರ್ಯಕರ್ತರ ಅನುಕೂಲಕ್ಕೆ 'ತ್ಯಾಗ' ಮಾಡಿದ್ದಾರೆ. ಇವರ ಬಳಿ ಸಿಕ್ಕ ಮೊಬೈಲ್‌ನಲ್ಲಿ ಪರೀಕ್ಷಾ ಹಿಂದಿನ ದಿನದಂದು 2 ಸಾವಿರಕ್ಕೂ ಹೆಚ್ಚು ಎಸ್ಸೆಮ್ಮೆಸ್‌ಗಳು ಹರಿದಾಡಿವೆ. ಎಲ್ಲವೂ ಪ್ರಶ್ನೆ-ಉತ್ತರಗಳ ಡೀಲ್‌ಗಾಗಿಯೇ ಹರಿದ ಎಸ್ಸೆಮ್ಮೆಸ್‌ಗಳು.

ಸದ್ಯ ಎಂಟು ಆರೋಪಿಗಳೇನೋ ಸಿಕ್ಕಿಬಿದ್ದಿದ್ದಾರೆ. ಆದರೆ ಈ ಜಾಲದ ಕಿಂಗ್‌ಪಿನ್ ಬೆಂಗಳೂರಿನ ರಾಜೇಶ್ ಮಾತ್ರ ಪರಾರಿಯಾಗಿದ್ದಾನೆ. ಈತನಿಗೆ ಸಚಿವೆ ಶೋಭಾರ ಅಭಯಹಸ್ತ ಇದೆ ಎಂದು ಪಂಚಾಯತ್ ಇಲಾಖೆ ಕಚೇರಿಯ ಗೋಡೆಗಳು ಪ್ರತಿಧ್ವನಿಸುತ್ತಿವೆ.

ಕಾಟಾಚಾರದ ತನಿಖೆ


ಬಿಜೆಪಿಯ ಅಸಲಿ ಬಣ್ಣ ಬಯಲಾಗತೊಡಗಿದ್ದು ಅದು ನಡೆಸುತ್ತಿರುವ ಹೋಪ್‌ಲೆಸ್ ತನಿಖೆಯಿಂದ. ಪ್ರಾಮಾಣಿಕ ಪಿಎಸ್‌ಐ ಉಡಗಿಯವರೇನೋ ತಮ್ಮ ಕೆಲಸ ಮಾಡಿದರು. ಆದರೆ ಕೊಪ್ಪಳ ಜಿಲ್ಲಾ ಎಸ್ಪಿ ಈಶ್ವರಚಂದ್ರ ವಿದ್ಯಾಸಾಗರ್ ಮಾತ್ರ ಮುಂದಿನ ತನಿಖೆಗೆ ಸಹಕರಿಸದೇ ವಿಳಂಬ ಮಾಡುತ್ತಿದ್ದಾನೆ. ಸಚಿವರಾದ ತಂಗಡಗಿ, ಕಾರಜೋಳಗಳ ಒತ್ತಡದ ಫಲವಾಗಿ ತನಿಖೆ ಕುಂಟುತ್ತಾ ಸಾಗಿದೆ. ಆದರೆ ಹೈಕೋರ್ಟ್‌ನಲ್ಲಿ ಈ ಅಕ್ರಮ ಪರೀಕ್ಷೆ ವಿರುದ್ಧ ನಾಲ್ಕು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್)ಗಳು ದಾಖಲಾಗಿರುವುದರಿಂದ ಪಂಚಾಯತ್ ಇಲಾಖೆಯೇ ಗಾಬರಿ ಬಿದ್ದಿದೆ. ಈಗಾಗಲೇ ಅಭ್ಯರ್ಥಿಗಳ ಫೈನಲ್ ಲಿಸ್ಟ್ ರೆಡಿಮಾಡಿಟ್ಟು ಕೊಂಡಿರುವ ಶೋಭಕ್ಕನ ಗ್ಯಾಂಗಿಗೆ ಹೈಕೋರ್ಟು ಅಡ್ಡನಿಂತಿದೆ.

ಅರ್ಹ ಅಭ್ಯರ್ಥಿಗಳಿಗೆ ವಂಚನೆಯಾಗಬಾರದೆಂದರೆ ಪಿಡಿಓ ಮರುಪರೀಕ್ಷೆ ನಡೆಸುವುದು ತೀರಾ ಅತ್ಯಗತ್ಯ

● ಹುರುಳಿಕುಪ್ಪಿ ವಿನಯ್

ಶೋಷಿತರಿಗೆ ಶಿಕ್ಷೆ

ಈ ಪಿಡಿಓ ನೇಮಕಾತಿ ಅಧಿಸೂಚನೆ ಹೊರಬಿದ್ದಾಗಿನಿಂದಲೂ ಗುಪ್ತವಾಗಿ ಕಾರ್ಯಾಚರಣೆ ನಡೆಸಿದ್ದು ಬ್ರಾಹ್ಮಣಶಾಹಿ ಅಧಿಕಾರಿ ವರ್ಗ. ಇವರೆಲ್ಲ ಆರೆಸ್ಸೆಸ್ ಒಲವಿನವರು. ಹಳ್ಳಿಗಾಡಿನ ದಲಿತ, ಅಲ್ಪಸಂಖ್ಯಾತ, ಹಿಂದುಳಿದವರಿಗೆ ವಂಚಿಸಲೆಂದೇ 'ಮೆರಿಟ್ ಟ್ರ್ಯಾಕ್ ಸರ್ವೀಸಸ್' ಎಂಬ ಚೆಡ್ಡಿ ಕಂಪೆನಿಗೆ ಇಡೀ ಪರೀಕ್ಷಾ ಪ್ರಕ್ರಿಯೆಯ ಉಸ್ತುವಾರಿ ನೀಡಿಬಿಟ್ಟರು. ಪರೀಕ್ಷೆಗಳನ್ನು ನಡೆಸಲೆಂದೇ ಇರುವ ಸರ್ಕಾರಿ ಕೆಪಿಎಸ್‌ಸಿಯನ್ನು ಹೊರಗಿಟ್ಟು ಶೋಭಕ್ಕನ ಗ್ಯಾಂಗ್ ಆ ಕೆಲಸವನ್ನು ಬೆಂಗಳೂರಿನ ಮೆರಿಟ್ ಟ್ರ್ಯಾಕ್‌ಗೆ ನೀಡಿದ್ದೇ ಮೊದಲ ಮಹಾವಂಚನೆ. ಈ ಮೆರಿಟ್ ಟ್ರ್ಯಾಕ್‌ನ ಸಿಇಓ ಮದನ್ ಪದಕಿ ಅದ್ಯಾವ ದಾರಿ ಬಳಸಿ ಶೋಭಾರನ್ನು ತಲುಪಿದ ಎಂದು ಹುಡುಕುತ್ತಾ ಹೋದರೆ ಕಾಣುವುದು ಆರೆಸ್ಸೆಸ್, ಎಬಿವಿಪಿ ನೆರಳುಗಳು. ಕಾರ್ಪೊರೇಟ್ ಸಂಸ್ಥೆಗಳ ಉದ್ಯೋಗಿಗಳ ನೇಮಕಾತಿ ಮಾಡುವ 'ದಂಧೆ' ಮಾಡುವ ಮೆರಿಟ್ ಟ್ರ್ಯಾಕ್‌ಗೆ ಸಾವಿರ ಸಾವಿರ ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸುವುದು ಗೊತ್ತೇ ಹೊರತು ಲಕ್ಷ ಲಕ್ಷ ಅಭ್ಯರ್ಥಿಗಳ ಪರೀಕ್ಷೆ ನಡೆಸುವುದು ಗೊತ್ತಿಲ್ಲ.



ಮದನ್ ಪದಕಿ

ಅಂದಂತೆ ಶೋಷಿತ ವರ್ಗಕ್ಕೆ ಅನ್ಯಾಯ ಮಾಡಲೆಂದೇ ಈ ಆಯ್ಕೆ ಪ್ರಕ್ರಿಯೆ ನಡೆದಿದೆ. ಮೊದಲಿಗೆ, ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸಬೇಕೆಂದು ಕಡ್ಡಾಯ ಮಾಡಿ ಲಕ್ಷಾಂತರ ಗ್ರಾಮೀಣ ಅಭ್ಯರ್ಥಿಗಳು ಅರ್ಜಿ ತುಂಬದಂತೆ ಮಾಡಲಾಗಿತ್ತು. ನಂತರ ಗ್ರಾಮೀಣ ಶೋಷಿತ ಅಭ್ಯರ್ಥಿಗಳನ್ನು ಹೊರಹಾಕಲು ಕಂಪ್ಯೂಟರ್ ಪರೀಕ್ಷೆಯಲ್ಲಿ ಪಾಸಾಗುವುದು ಕಡ್ಡಾಯ ಎಂದು ನಿಯಮ ರೂಪಿಸಲಾಯ್ತು. ಜೊತೆಗೆ ಹಳ್ಳಿಗಳಲ್ಲೇ ಕೆಲಸಮಾಡುವ ಪಿಡಿಓಗಳಿಗೆ ಕನ್ನಡ ಬಾರದಿದ್ದರೂ ಓಕೆ ಆದರೆ ಕಂಪ್ಯೂಟರ್ ಜ್ಞಾನ ಬೇಕೇಬೇಕು ಎಂದಿತ್ತು.

MeritTrac™
India's Largest Skills Assessment Company

ಹೇಗೋ ಆನ್‌ಲೈನ್ ಅರ್ಜಿ ತುಂಬಿದ ಸಾವಿರಾರು ಗ್ರಾಮೀಣ ಅಭ್ಯರ್ಥಿಗಳು ಎಂಎಸ್ ವರ್ಡ್, ಸ್ಪ್ರೆಡ್‌ಶೀಟ್, ಎಂಎಸ್ ಎಕ್ಸೆಲ್ ಕುರಿತಾದ ಪ್ರಶ್ನೆಗಳನ್ನು ನೋಡಿಯೇ ಗಾಬರಿ ಬಿದ್ದರು. ಅಲ್ಲಿಗೆ ಹತ್ತಿಪ್ಪತ್ತು ಸಾವಿರ ಗ್ರಾಮೀಣ ಅಭ್ಯರ್ಥಿಗಳು 'ಔಟ್' ಆಗಿದ್ದರು.

ಹೈಕೋರ್ಟ್‌ವರೆಗೆ ಕೇಸು ಹೋದರೂ ಇವತ್ತಿನವರೆಗೂ ಮೆರಿಟ್ ಟ್ರ್ಯಾಕ್ ಬಾಯಬಿಟ್ಟಿಲ್ಲ. ಜಯನಗರ, ಜೆ.ಪಿ.ನಗರಗಳಲ್ಲಿ ಕಚೇರಿ ಹೊಂದಿರುವ ಈ ಚೆಡ್ಡಿ ಸಂಸ್ಥೆಯ ಒಡೆಯರಾರು ಗೊತ್ತೇ? ಮಣಿಪಾಲದ ಪಕ್ಕಾ ವ್ಯಾಪಾರಿ ಪೈಗಳು... ಈ ಸಂಸ್ಥೆಗೆ ಗುಜರಾತ್ ತಾಂತ್ರಿಕ ವಿವಿಯ ಪ್ರವೇಶ ಪರೀಕ್ಷೆ ನಡೆಸುವ ಗುತ್ತಿಗೆಯೂ ಸಿಕ್ಕಿತ್ತು! ಈ ಎಲ್ಲ ಅಂಶಗಳ ಜಾಡು ಹಿಡಿದುಹೋದರೆ ಈ ಹಗರಣದ ಪೂರ್ತಿ ಹೂರಣ ಬಯಲಾಗುವುದು.

ಇದು ಕೇವಲ ಭ್ರಷ್ಟಾಚಾರದ ಪ್ರಕರಣವಲ್ಲ; ಒಂದು ಕೊಳಕು ಸಿದ್ಧಾಂತದ ಬೆಂಬಲಿಗರನ್ನು ಸರ್ಕಾರಿ ಯಂತ್ರದಲ್ಲಿ ಪ್ರತಿಷ್ಠಾಪನೆಗೊಳಿಸುವ ಹುನ್ನಾರ.


ಗ್ರಾಮೀಣ ಶೋಷಿತರಿಗೆ ಮಹಾನ್‌ದ್ರೋಹ ಆಗುತ್ತಿರುವಾಗ ರೈತ, ದಲಿತ ಚಳವಳಿಯ ನಾಯಕರು ಮತ್ತು ನಮ್ಮ ಬುದ್ಧಿಜೀವಿಗಳು ಸುಮ್ಮನೇ ಕೂತಿರುವುದೇಕೆ? ಈಗಲಾದರೂ ಅವರು ಎಚ್ಚೆತ್ತುಕೊಳ್ಳುವಂತಾಗಲಿ ಅಲ್ಲವೇ? ●

ಲವ್ ಜಿಹಾದ್

ಒಂದೆಡೆ ಹಿಂದುತ್ವವಾದಿಗಳಿಗೆ ಸಮೂಹ ಸನ್ನಿಯಂತೆ ಹಿಡಿದಿರುವ 'ಲವ್ ಜಿಹಾದ್' ರೋಗ, ಇನ್ನೊಂದೆಡೆ 'ನಕ್ಸಲ್ ಪಟ್ಟ' ಎಂಬ ಪೊಲೀಸರ ಭಯೋತ್ಪಾದನೆ, ಮತ್ತೊಂದೆಡೆ ಅಮಾಯಕ ಮಹಿಳೆಯರನ್ನು ತನ್ನ ಮೋಸದ ಬುಟ್ಟಿಗೆ ಹಾಕಿಕೊಂಡು ಕೊಲ್ಲುತ್ತಿದ್ದ ಸರಣಿ ಹಂತಕ ಮೋಹನ್‌ಕುಮಾರ್ ಎಂಬಾತನ ಬಂಧನ... ಈ ಮೂರರ ನಡುವೆ ಸಂಬಂಧವಿದೆ ಎಂದರೆ ನಿಮಗೆ ಅಚ್ಚರಿ ಆಗಬಹುದು. ಆದರೂ ಇದು ಸತ್ಯ!

ಮೊದಲಿಗೆ ಇವತ್ತು ನಮ್ಮ ನ್ಯಾಯಾಧೀಶರನ್ನೂ 'ಆತಂಕಕ್ಕೆ' ದೂಡಿರುವ, ಇದು ದೇಶದ ಭದ್ರತೆಗೆ ಸವಾಲೆಂದು ನ್ಯಾಯಮೂರ್ತಿಗಳು ಅಭಿಪ್ರಾಯ ಪಟ್ಟಿರುವ ಈ 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ಪ್ರೇಮ ಕಾರ್ಯಾಚರಣೆ ಯತ್ತ ಗಮನ ಹರಿಸೋಣ. ಇವತ್ತು ಹಿಂದೂತ್ವವಾದಿಗಳು ಮತ್ತು ಸಂಘ ಪರಿವಾರದ ಚೆಡ್ಡಿಗಳು ಈ 'ಲವ್ ಜಿಹಾದ್' ಅನ್ನು ಮುಸಲ್ಮಾನರು ನಡೆಸುತ್ತಿದ್ದಾರೆಂದೂ, ಆ ಮೂಲಕ ಹಿಂದೂ ಯುವತಿಯರನ್ನು ಪ್ರೇಮದ ಬಲೆಯಲ್ಲಿ ಸಿಲುಕಿಸಿಕೊಂಡು ಮದುವೆ ಆಗುತ್ತಿದ್ದಾರೆಂದೂ, ಕ್ರಮೇಣ ಅವರನ್ನು ಮತಾಂಧರನ್ನಾಗಿಸಿ 'ಮಾನವ ಬಾಂಬ್'ಗಳಾಗಿ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿಸಲಿದ್ದಾರೆಂದೂ ಬೊಬ್ಬೆ ಹಾಕುತ್ತಿದ್ದಾರಲ್ಲವೇ? ಅವರೊಂದಿಗೆ ದನಿಗೂಡಿಸಿರುವ ಹಲವು ಪತ್ರಿಕೆಗಳು ಪ್ರಕಟಿಸಿರುವ ವರದಿಗಳನ್ನೇ ನ್ಯಾಯಾಧೀಶರೂ ಗಂಭೀರರಾಗಿ ಪರಿಗಣಿಸಿ ಸಂವಿಧಾನ ವಿರೋಧಿ ನಿಲುವುಗಳನ್ನು ತಾಳಿದ್ದಾರಲ್ಲವೆ.

'ಲವ್ ಜಿಹಾದ್'ಗೆ 'ಬಲಿ' ಯಾದವರಲ್ಲಿ ಬಂಟ್ವಾಳದ ಅನಿತಾ ಎಂಬ ಯುವತಿಯೂ ಒಬ್ಬಳು ಎಂದು ಚೆಡ್ಡಿಗಳು ಬೊಬ್ಬೆ ಹಾಕಿದ್ದರು. ಕಳೆದ ಜೂನ್ 17 ರಂದು ಈ ಅನಿತಾ ಬಂಟ್ವಾಳದ ಬಿ.ಸಿ. ರಸ್ತೆಯಲ್ಲಿರುವ ದಂತ ವೈದ್ಯಾಲಯಕ್ಕೆ ಹೋಗುತ್ತೇನೆಂದು ಮನೆಯವರಿಗೆ ಹೇಳಿ ಹೊರಬಿದ್ದವಳು ಹಿಂದಿರುಗಿರಲಿಲ್ಲ. ಆಕೆ ನಾಪತ್ತೆಯಾಗಿದ್ದರ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತು. ಆದರೆ ಮೂರು ತಿಂಗಳುಗಳು ಉರುಳಿದರೂ ಪೊಲೀಸರು ಆಕೆಯನ್ನು ಪತ್ತೆ ಮಾಡಲಾಗಿರಲಿಲ್ಲ. ಆಗ ಬಂಟ್ವಾಳದ ಚೆಡ್ಡಿಗಳು ಪೊಲೀಸ್ ಠಾಣೆಯ ಮುಂದೆ ಇದೇ ಅಕ್ಟೋಬರ್ 4 ರಂದು ಪ್ರತಿಭಟನೆ ನಡೆಸಿದ್ದರು. ಅದೆಲ್ಲ ಸರಿ. ಆದರೆ ಅವರು ಪ್ರತಿಭಟನೆಯಲ್ಲಿ ಏನೆಂದು ಹೇಳಿದ್ದರು ಎಂಬುದು ಮುಖ್ಯ.




ಅಂದು ಆ ಪ್ರತಿಭಟನೆಯ ನೇತೃತ್ವ ವಹಿಸಿದ್ದು ಬೇರೆ ಯಾರೂ ಅಲ್ಲ, ಗುರುಪುರದ ವಜ್ರದೇಹಿ ಮಠದ ಯತಿ ರಾಜಶೇಖರಾನಂದ ಸ್ವಾಮಿ. ಹೇಳಿಕೇಳಿ ಈತನ ಮನಸ್ಸೂ ಆತ ತೊಡುವ ಕಾವಿ ಬಟ್ಟೆಯಷ್ಟೇ ಕೇಸರಿ. ಅಷ್ಟೇ ಅಲ್ಲ, ಅಮಾಯಕ ಅನಾಥ ಮಕ್ಕಳನ್ನು ಅಕ್ರಮವಾಗಿ ಸಾಗಿಸುವ ಆರೋಪವನ್ನೂ ಎದುರಿಸುತ್ತಿದ್ದಾನೆ. ಇಂತಹ ವಜ್ರದೇಹಿಗೆ ತಾನು ಸಮಾಜೋದ್ಧಾರಕ ಎಂದು ಪೋಸ್ ಕೊಡುವ ಚಾಳಿಯಂತೂ ಇದೆ.

ಆದ್ದರಿಂದ ಅನಿತಾ ನಾಪತ್ತೆ ಪ್ರಕರಣ ಕುರಿತ ಪ್ರತಿಭಟನೆಯಲ್ಲಿ ಈ ವಜ್ರದೇಹಿ ರಾಜಶೇಖರಾನಂದ "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ 'ಲವ್ ಜಿಹಾದ್' ಎಂಬ ಮುಸಲ್ಮಾನರ ಕಾರ್ಯಾಚರಣೆಗೆ ಹಿಂದೂ ಮಹಿಳೆಯರು ಬಲಿಯಾಗುತ್ತಿದ್ದಾರೆ. ಹಿಂದೂ ಯುವತಿಯರನ್ನು ಮೋಸ ಮಾಡಿ ಪ್ರೀತಿ ಎಂಬ ವಂಚನಾ ಬಲೆಗೆ ಬೀಳಿಸಿಕೊಂಡು ಅವರನ್ನು ಭಯೋತ್ಪಾದಕರನ್ನಾಗಿಸುತ್ತಿದ್ದಾರೆ. ಆಮೇಲೆ ಅವರನ್ನು ತಮ್ಮ ವಿನಾಶಕಾರಿ ಚಟುವಟಿಕೆಗಳಲ್ಲಿ ತೊಡಗಿಸುತ್ತಿದ್ದಾರೆ. ಆದ್ದರಿಂದ ಹಿಂದೂ ಯುವತಿಯರು ಜಾಗೃತರಾಗಿರಬೇಕು, ಬೇರೆ ಸಮುದಾಯದ ಪುರುಷರನ್ನು ಮಾತನಾಡಿಸಕೂಡದು" ಎಂದೆಲ್ಲ ಪೊಲೀಸ್ ಠಾಣೆಯ ಮುಂದೆಯೇ ಬೊಗಳೆಬಿಟ್ಟಿದ್ದ.

ಆವತ್ತು ಅವನೊಂದಿಗೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವರು ನರಹಂತಕ ಮೋದಿ ಭಕ್ತ ನಾಗರಾಜ ಶೆಟ್ಟಿ ಮತ್ತು ಮಚ್ಚೇಂದ್ರ ಸಾಲಿಯಾನ್, ಪ್ರಸಾದ್ ಕುಮಾರ್ ಸರಪಾಡಿ, ಅಶೋಕ್ ಶೆಟ್ಟಿ, ಅನ್ನಯ್ಯ ಕುಲಾಲ್, ಗೋವಿಂದ್ ಪ್ರಭು ಹಾಗು ದೇವದಾಸ್ ಎಂಬ ಇತರೆ ಪುಂಡ ಚೆಡ್ಡಿಗಳು.

ಆದರೆ ಈಗ ಗೊತ್ತಾಗಿರುವುದೇನೆಂದರೆ ಅನಿತಾಳನ್ನು ಯಾವ ಮುಸಲ್ಮಾನನೂ 'ಲವ್ ಜಿಹಾದ್' ಕಾರ್ಯಾಚರಣೆಯಲ್ಲಿ ಹಾರಿಸಿಕೊಂಡು ಹೋಗಿರಲಿಲ್ಲ, ಬದಲಾಗಿ ಆಕೆಗೆ ಮೋಸ ಮಾಡಿ ಕೊಂದು ಹಾಕಿರುವುದು ಸರಣಿ ಕಿಲ್ಲರ್ ಮೋಹನ್ ಕುಮಾರ್ ಎಂಬ 'ಅಪ್ಪಟ ಹಿಂದೂ' ಎಂಬುದು. ಕಾಕತಾಳೀಯ ಸಂಗತಿ ಯಾವುದೆಂದರೆ ಅತ್ತ ಮಂಗಳೂರಿನಲ್ಲಿ ಮೋಹನ್‌ಕುಮಾರ್ ಎಂಬ ಕೊಲೆಗಡುಕ ಅನಿತಾಳನ್ನು ಕೊಂದು ಹಾಕಿದ್ದನ್ನು ಪೊಲೀಸರು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸುತ್ತಿದ್ದಾಗಲೇ ಇತ್ತ ಬೆಂಗಳೂರಿನಲ್ಲಿ ಇಬ್ಬರು ನ್ಯಾಯಾಧೀಶರು 'ಲವ್ ಜಿಹಾದ್' ಬಗ್ಗೆ ಸಂಪೂರ್ಣ ತನಿಖೆ ನಡೆಸಲು ಪೊಲೀಸರಿಗೆ ಆದೇಶಿಸಿದ್ದಾರೆ. ನಾಪತ್ತೆಯಾಗಿರುವ ಮಹಿಳೆಯರಿಗಾಗಿ ಪೊಲೀಸರು ಹುಡುಕಬೇಕು ನಿಜ. ಆದರೆ ಕಪೋಲಕಲ್ಪಿತ 'ಲವ್ ಜಿಹಾದ್' ಎಂಬ ಕಾರ್ಯಾಚರಣೆಯನ್ನೂ ತನಿಖೆಗೆ ಒಳಪಡಿಸಬೇಕೆಂದು ನ್ಯಾಯಾಧೀಶರು ಹೇಳಿದರೆ ಪಾಪ ಪೊಲೀಸರಾದರೂ ಏನು ಮಾಡಲು ಸಾಧ್ಯ?!



'ಲವ್ ಜಿಹಾದ್' ಹಾಗು 'ನಕ್ಸಲ್ ಪಟ್ಟ'

ಇನ್ನು ಲವ್ ಜಿಹಾದ್ ಮತ್ತು ನಕ್ಸಲ್ ಪಟ್ಟಿಗೆ ಏನು ಸಂಬಂಧ ಎಂಬ ಕುತೂಹಲಕಾರಿ ವಿಚಾರದತ್ತ ಗಮನ ಹರಿಸೋಣ...

ಇದು ಲೀಲಾವತಿ ಅಲಿಯಾಸ್ ಲೀಲಾ ಎಂಬ ಮಹಿಳೆಯ ನಾಪತ್ತೆ ಪ್ರಕರಣ ಕುರಿತದ್ದು. ಪಿಯುಸಿ ಓದಿದ್ದ ಲೀಲಾ ಕೆಲ ವರ್ಷಗಳ ಹಿಂದೆ ಬಂಟ್ವಾಳದ ಕೊಡಂಬೆಟ್ಟು (ವಾಮಪದವು) ಎಂಬ ಗ್ರಾಮದಲ್ಲಿನ ತನ್ನ ಮನೆಯಿಂದ ನಾಪತ್ತೆಯಾಗಿದ್ದಳು. ಆಗ ಆಕೆಗೆ 22 ವರ್ಷ ವಯಸ್ಸು. ಹೀಗೆ ನಾಪತ್ತೆಯಾಗುವ ಮುನ್ನ ಲೀಲಾ ಬಂಟ್ವಾಳದಲ್ಲಿ ನಡೆಯುತ್ತಿದ್ದ ಹಲವಾರು ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದಳು. ಅದರಲ್ಲೂ ಬೀಡಿ ಕಾರ್ಮಿಕರ ಹೋರಾಟ, ಹಕ್ಕು ಪತ್ರಕ್ಕಾಗಿನ ಹೋರಾಟಗಳಲ್ಲಿ ಪಾಲ್ಗೊಂಡಿದ್ದಳು. ಒಮ್ಮೆ ಬಿಎಸ್‌ಪಿ ಪಕ್ಷದೊಂದಿಗೆ ಗುರುತಿಸಿಕೊಂಡು ಚುನಾವಣೆಯಲ್ಲಿ ಆ ಪಕ್ಷದ ಪರವಾಗಿ ಪ್ರಚಾರವನ್ನೂ ಲೀಲಾ ಮಾಡಿದ್ದಳು.




ಕೊಲೆಯಾದವರಲ್ಲಿ 'ನಕ್ಸಲ್' ಲೀಲಾ ಮತ್ತು 'ಲವ್ ಜಿಹಾದ್' ಬಲಿಪಶು ಅನಿತಾ



ಡಿಐಜಿ ಗೋಪಾಲ್ ಹೊಸೂರು ಮತ್ತು ಅವರು ಬಿಡುಗಡೆ ಮಾಡಿದ್ದ ನಕ್ಸಲ್ ಪಟ್ಟಿಯಲ್ಲಿ ಲೀಲಾವತಿ

ಲವ್ ಬಾಂಬ್! ಲವ್ ಜಿಹಾದ್! ಹೊಸ ಬಾಟಲಿಯಲ್ಲಿ ಹಳೆಯ ವಿಷ

ಈ ಶೀರ್ಷಿಕೆ ನೋಡಿ ನೀವು ಇದೊಂದು ತಲೆಕೆಟ್ಟ ಕನ್ನಡ ಸಿನಿಮಾದ ಟೈಟಲ್ ಎಂದು ಭಾವಿಸಿದರೆ ನಿಮ್ಮ ಅಜ್ಞಾನಕ್ಕೆ ಕ್ಷಮೆಯೇ ಇಲ್ಲ. ದೇಶಾದ್ಯಂತ ಮುಸ್ಲಿಮ್ ಉಗ್ರಗಾಮಿಗಳು ತಮ್ಮ ಮಾಮೂಲಿ ಜಿಹಾದ್ ಜೊತೆಗೆ ಈಗ ಲವ್ ಜಿಹಾದ್ ಎಂಬ ಹೊಸ ಬಗೆಯ ಭಯೋತ್ಪಾದನೆ ನಡೆಸುತ್ತಿದ್ದು ಅದರಲ್ಲಿ ಲವ್ ಬಾಂಬ್‌ಗಳಾಗಿ ಹಿಂದೂ ತರುಣಿಯರನ್ನು ಬಳಸಿಕೊಳ್ಳುತ್ತಿದ್ದಾರೆ! ಈ ಬಗ್ಗೆ ಪತ್ರಿಕೆ, ಟಿವಿ ಚಾನೆಲ್ಲು ಹಾಗೂ ಇಂಟರ್‌ನೆಟ್ ತಾಣಗಳಲ್ಲಿ ಗಂಭೀರ ಚರ್ಚೆ ನಡೆದಿದ್ದು ಅದರ ಕುರಿತು ನೀವು ತಲೆ ಕೆಡಿಸಿಕೊಂಡಿಲ್ಲ ಎಂದಾದರೆ ನಿಮಗೆ ಹಿಂದೂ ತರುಣಿಯರ ಶೀಲ ಪಾವಿತ್ರ್ಯಗಳ ಬಗ್ಗೆ ಕಾಳಜಿ ಇಲ್ಲ; ದೇಶಪ್ರೇಮವೂ ಇಲ್ಲ ಎಂದೇ ಭಾವಿಸಬೇಕಾಗುತ್ತದೆ.



ಲವ್ ಜಿಹಾದ್ ಎಂದರೆ ಯಾವ ಬಗೆಯ ಕಾರ್ಯಕ್ರಮ, ಅದನ್ನು ಹೇಗೆ ನಡೆಸಲಾಗುತ್ತದೆ, ಯಾರು ಅದರ ಟಾರ್ಗೆಟ್ ಇತ್ಯಾದಿ ವಿಷಯಗಳ ಬಗ್ಗೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸೆಪ್ಟೆಂಬರ್ 4 ರ ಸಂಚಿಕೆಯಲ್ಲಿ ಕಾಲುಮಿಸ್ಟ್ ಹಾಗೂ ಬಿಜೆಪಿ ರಾಜ್ಯಸಭಾ ಸದಸ್ಯ ಬಲ್‌ಬೀರ್ ಪೂಂಜ್ ಒಂದು ಲೇಖನವನ್ನು ಪ್ರಕಟಿಸಿದ್ದಾನೆ. ಮುಸ್ಲಿಮ್ ಹುಡುಗರು ಹಿಂದೂ ಹುಡುಗಿಯರನ್ನು ಒಲಿಸಿಕೊಂಡು ವಿವಾಹವಾಗುವುದಕ್ಕೆ ಗಂಡುಹೆಣ್ಣಿನ ಪ್ರೇಮ ಕಾರಣವೇ ಅಲ್ಲ; ಅದು ಒಂದು "ಇಸ್ಲಾಮಿಕ್" ಯೋಜನೆಯ ಭಾಗವಾಗಿರುವುದು ಕೇರಳ ಪೊಲೀಸರ ತನಿಖೆಯಿಂದ ಸಾಬೀತಾಗಿದೆ ಎಂದು ಬಲ್‌ಬೀರ್ ಪೂಂಜ್ ಹೇಳುತ್ತಾನೆ. ಈ ಯೋಜನೆ ಜಾರಿಗೆ ಬರುತ್ತಿರುವ ವಿಧಾನವನ್ನು ನೀವು ಅವನ ಮಾತುಗಳಲ್ಲೇ ಕೇಳಬೇಕು. "ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಯೊಂದು ಮುಸ್ಲಿಮ್ ತರುಣರಿಗೆ ಹಣಕಾಸು ಇತ್ಯಾದಿಗಳನ್ನು ನೀಡಿ, ತಮ್ಮ ಯೋಜನೆಯ ಕಾಲಾಳುಗಳಾಗಿ ನೇಮಿಸಿಕೊಳ್ಳುತ್ತಿದೆ. ಕಾಲೇಜು ತರುಣಿಯರನ್ನು ಅಂದರೆ ಮುಸ್ಲಿಮೇತರ ಕಾಲೇಜು ತರುಣಿಯರನ್ನು ಮರುಳು ಮಾಡಿ ಒಲಿಸಿಕೊಳ್ಳುವುದಷ್ಟೇ ಇವರ ಕೆಲಸ. ಕ್ರಮೇಣ ಈ ತರುಣಿಯರೇ ಲವ್ ಬಾಂಬ್‌ಗಳಾಗಿ ಮಾರ್ಪಡುತ್ತಾರೆ. ಈ ಲವ್ ಜಿಹಾದ್‌ನ ರೋಮಿಯೋ ಭಯಂಕರರು ನೋಡಲು ಮಾತ್ರ ಅಂದವಾಗಿರಬೇಕು. ಅಂತಹವರನ್ನು ಆಯ್ದುಕೊಂಡು ಕಾರು, ಬೈಕು, ಸೊಗಸಾದ ಬಟ್ಟೆ, ಮತ್ತಿತರ ಐಷಾರಾಮಿ ಖರ್ಚುಗಳಿಗೆ ಅವರಿಗೆ ಹೇರಳ ಹಣ ಕೊಡಲಾಗುತ್ತದೆ.

ಆ ತರುಣರು, ಹಿಂದೂ ತರುಣಿಯರನ್ನು ತಮ್ಮ ಮೋಹದ ಬಲೆಯಲ್ಲಿ ಕೆಡವಿಕೊಂಡು, ಮದುವೆ, ವಿದೇಶ ಪ್ರವಾಸ ಇತ್ಯಾದಿಗಳ ಆಮಿಷ ತೋರಿಸಿ, ಹೆತ್ತವರಿಂದ ಆ ತರುಣಿಯರನ್ನು ಬೇರ್ಪಡಿಸಿ, ತಮ್ಮ ಜೊತೆ ಕದ್ದೊಯ್ಯುತ್ತಾರೆ; ಆನಂತರ ನೋಟರಿಗಳ ಎದುರು ಈ ಜೋಡಿಗಳ ವಿವಾಹ ನೋಂದಣಿಯಾಗುತ್ತದೆ. ಸಾಮಾನ್ಯವಾಗಿ ಮುಸ್ಲಿಮರೇ ಹೆಚ್ಚಾಗಿ ವಾಸಿಸುವ ಸ್ಥಳಗಳಲ್ಲಿ ಈ ತರುಣಿಯರನ್ನು ಬಲಾತ್ಕಾರವಾಗಿ ಇಡಲಾಗುತ್ತದೆ ಹಾಗೂ ಅವರಿಗೆ ಹೊರಜಗತ್ತಿನ ಯಾವ ಸಂಪರ್ಕವೂ ಇರದಂತೆ ನೋಡಿಕೊಳ್ಳಲಾಗುತ್ತದೆ."

ಬಲ್‌ಬೀರ್ ಪೂಂಜ್ ಹೇಳುವ ಪ್ರಕಾರ, ಹೀಗೆ ಮರುಳಾದ ಹಿಂದೂ ತರುಣಿಯರನ್ನು ಮತಾಂತರಗೊಳಿಸಿ, ಭಯೋತ್ಪಾದನೆ, ಜಿಹಾದ್, ಇಸ್ಲಾಂ ಮತ್ತಿತರ ವಿಷಯಗಳ ಬಗ್ಗೆ ಅವರಿಗೆ ಆ ಅಜ್ಞಾತ ಸ್ಥಳಗಳಲ್ಲಿ ಸಿಡಿಗಳನ್ನು ತೋರಿಸಿ ಅವರ "ತಲೆಸ್ವಚ್ಛ" ಮಾಡುತ್ತಾರೆ. ಕೇರಳದಲ್ಲಿ ಇದು ಹಲವು ವರ್ಷಗಳಿಂದ ನಡೆಯುತ್ತಿದ್ದು ಈ ಬಗ್ಗೆ ದೂರು ಕೊಡಲಾಗದಿದ್ದರೂ ಕೇರಳ ಪೊಲೀಸರು ಏನೂ ಕ್ರಮ ತೆಗೆದುಕೊಂಡಿಲ್ಲವಂತೆ! ಬಲ್‌ಬೀರ್ ಪೂಂಜನನ್ನು ನಂಬುವುದಾದರೆ, ಕೇರಳ ರಾಜ್ಯವೊಂದರಲ್ಲೇ 500 ಹಾಗೂ ಭಾರತ ಇಡೀ ದೇಶದಲ್ಲಿ 4500 ಹಿಂದೂ ತರುಣಿಯರು ಈಗ ಭಯೋತ್ಪಾದಕ ಲವ್ ಬಾಂಬ್‌ಗಳಾಗಿದ್ದಾರೆ!

"ದೇಶವನ್ನು ಭಯೋತ್ಪಾದನೆಯ ಕ್ಯಾನ್ಸರ್ ತಿಂದುಹಾಕುತ್ತಿದೆ. ಮಂಗಳೂರಿನ ಪಬ್ ದಾಳಿಯ ಸಂದರ್ಭದಲ್ಲಿ ದೊಡ್ಡದಾಗಿ ಬೊಬ್ಬೆ ಹಾಕಿದ ಮಹಿಳಾ ಹೋರಾಟಗಾರರು ಈಗ ಏನು ಮಾಡುತ್ತಿದ್ದಾರೆ?" ಎಂಬ ಪ್ರಶ್ನೆಯೊಡನೆ ಬಲ್‌ಬೀರ್ ಪೂಂಜ್ ತನ್ನ ಲೇಖನವನ್ನು ಮುಗಿಸುತ್ತಾನೆ. ಮಹಿಳಾ ಹಕ್ಕು ಹೋರಾಟಗಾರರ ಮಾತು ಹಾಗಿರಲಿ, ಮಹಿಳೆಯರ ಬಗ್ಗೆಯೇ ಪೂಂಜ್ ಎಷ್ಟು ಕೀಳಾಗಿ ಯೋಚಿಸುತ್ತಾನೆ ಎನ್ನುವುದಕ್ಕೆ ಅವನ ಲೇಖನವೇ ಒಂದು ಉದಾಹರಣೆ. ಈ ಲೇಖನದಲ್ಲಿ ಅವನು ನಡೆಸಿರುವುದು ಒಂದು ಅಪ್ಪಟ ಭಜರಂಗಿ ಕಾರ್ಯಾಚರಣೆ. ಅವನಿಗೆ ಮಹಿಳೆಯರ ಬಗ್ಗೆ ಗೌರವವಿಲ್ಲ; ಅವನ ಈ ವಾಂತಿಯನ್ನು ಹಾಗೆ ಹಾಗೇ ಪ್ರಕಟಿಸಿದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ತನ್ನ ಓದುಗರ ಬಗ್ಗೆ ಗೌರವವಿಲ್ಲ. ಈ ಲೇಖನದಲ್ಲಿ ಬಲ್‌ಬೀರ್ ಪೂಂಜ್, ಕೇರಳದ ಪೊಲೀಸ್ ಅಧಿಕಾರಿಯ ಮಗಳೊಬ್ಬಳು, ನ್ಯಾಯಾಲಯದ ಮುಂದೆ ಲವ್ ಜಿಹಾದ್ ಬಗ್ಗೆ ಹೇಳಿಕೆ ನೀಡಿದ್ದಾಳೆ ಎಂದು ಬರೆಯುತ್ತಾನೆ. ಆದರೆ ಯಾವ ನ್ಯಾಯಾಲಯ, ಪೊಲೀಸು ಅಧಿಕಾರಿ ಯಾರು, ಅವರ ಮಗಳ ಹೆಸರೇನು ಎಂದು ಹೇಳುವುದಿಲ್ಲ. ಕೇರಳದಲ್ಲಿ 500 ಮತ್ತು ದೇಶದಾದ್ಯಂತ 4000 ಲವ್ ಜಿಹಾದ್‌ನ ಪ್ರಕರಣಗಳು ಸಂಭವಿಸಿದೆ ಎಂದು ಬಲ್‌ಬೀರ್ ಪೂಂಜ್ ಭೋಂಗು ಬಿಡುತ್ತಾನೆ; ಆದರೆ ಒಬ್ಬ ವ್ಯಕ್ತಿಯ ಹೆಸರನ್ನೂ ಹೇಳುವುದಿಲ್ಲ; ಊರಿನ ಹೆಸರನ್ನೂ ಹೇಳುವುದಿಲ್ಲ. ಆತ ವರ್ಣಿಸುವ ಲವ್ ಜಿಹಾದ್‌ನ ವಿಧಾನವಂತೂ ಒಂದು ಕಳಪೆ ಸಿನಿಮಾ ಕತೆಯಾಗುವುದಕ್ಕೂ ಯೋಗ್ಯವಾದದ್ದಲ್ಲ.



ಪ್ರತಿಭಟಿಸಿದ ಹುಡುಗರ ಬಂಧನ

ಬಲ್‌ಬೀರ್ ಪೂಂಜ್‌ನ ಲೇಖನ ಪ್ರಕಟವಾದದ್ದು ಎಕ್ಸ್‌ಪ್ರೆಸ್‌ನ ಸಂಪಾದಕೀಯ ಪುಟದಲ್ಲಿ. ಆದರೆ ಅದು ಪ್ರಕಟವಾದ ಎರಡೇ ದಿನದಲ್ಲಿ, ಅಂದರೆ ಸೆಪ್ಟೆಂಬರ್ 6 ರ ತನ್ನ ಸಂಚಿಕೆಯಲ್ಲಿ ವಿಜಯ ಕರ್ನಾಟಕ (ಮಂಗಳೂರು ಆವೃತ್ತಿ) ಈ ಲೇಖನದ ಮಾಹಿತಿ (?)ಯನ್ನೇ "500 ಯುವತಿಯರ ಮತಾಂತರ: ಗುಪ್ತಚರ ವರದಿ" ಎಂಬ ಸುದ್ದಿ ಮಾಡಿ ಪ್ರಕಟಿಸಿತು. ಅಪ್ಪಟ ಕೋಮುವಾದಿ ಪತ್ರಿಕೆಯಾಗಿರುವ ವಿಜಯ ಕರ್ನಾಟಕ, ಮುಸ್ಲಿಮ ಸಮುದಾಯದ ಬಗ್ಗೆ ಅಸಹ್ಯ ಭಾವನೆ ಉಂಟುಮಾಡು... ಈ "ಸುದ್ದಿ" ಪ್ರಕಟಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಆದ... ಸಂಪಾದಕರ ಅಭಿಪ್ರಾಯಗಳನ್ನು ಸುದ್ದಿಯ ನಡು... ತೂರಿಬಿಡುವುದು ಅನೈತಿಕ ಎಂಬ ಕನಿಷ್ಠ ವೃತ್ತಿಧರ್ಮವನ್ನು ಅತ್ಯಧಿಕ ಪ್ರಸಾರದ ಈ ಪತ್ರಿಕೆ ಪಾಲಿಸುವುದಿಲ್ಲ ಎಂಬುದು ದಿಗಿಲು ಹುಟ್ಟಿಸುತ್ತದೆ.

ಸುದ್ದಿಯ ಛದ್ಮವೇಷದಲ್ಲಿ ಪ್ರಕಟಗೊಂಡ ಈ ಅಪಪ್ರಚಾರ ಎಷ್ಟು ಉದ್ರೇಕಕಾರಿಯಾಗಿತ್ತು ಎಂದ... ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವೆ... ಇದನ್ನು ಹಿಗ್ಗಿಸಿ ಜೆರಾಕ್ಸ್ ಮಾಡಿಸಿ ಪ್ರತಿಗಳನ್ನು ವಿತರ... ಮಾಡುವುದು, ಬಸ್‌ಗಳಲ್ಲಿ ಡ್ರೈವರ್ ಸೀಟಿನ ಹಿಂಭಾಗದ... ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗೋಡೆಗಳ ಮೇ... ಅಂಟಿಸುವುದು ಮುಂತಾದ್ದು ನಡೆದಿದೆ. ಇತ್ತೀಚೆ... ಮೂಲ್ಕಿಯಲ್ಲಿ ಹೀಗೆ ಬಸ್ ಒಂದರಲ್ಲಿ ಈ ವರದಿ... ಪ್ರತಿಯನ್ನು ಅಂಟಿಸಿದ್ದನ್ನು ಮುಸ್ಲಿಮ್ ಯುವಕ... ಪ್ರತಿಭಟಿಸಿದರು. ಆ ಬಸ್ ಡ್ರೈವರ್ ಹಾಗೂ ಕಂಡಕ್ಟರ್ ಧಮಕಿ ಹಾಕಿ ಹಲ್ಲೆಗೆ ಮುಂದಾದರು ಎಂಬ ಕಾರ...

ನ್ಯಾಯಾಂಗದಲ್ಲಿ 'ಲವ್ ಜಿಹಾದ್' ಪ್ರಹಸನ

ನ್ಯಾಯಾಂಗ ಧ್ವಮ್ಮೆ ತಟಸ್ಥವಾಗಿರಬೇಕು, ಪೂರ್ವಾಗ್ರಹಪೀಡಿತವಾಗಿರಬಾರದು ಎಂಬುದು ಸಾಮಾನ್ಯ ನಂಬಿಕೆ. ಆದರೆ ನಮ್ಮ ನ್ಯಾಯಾಲಯಗಳು ಸಮಾಜದ ...ರ್ವಾಗ್ರಹಗಳನ್ನು ಮೀರಿ ನಿಂತಿಲ್ಲ ಎಂಬುದು ಪದೇಪದೇ ಸಾಬೀತಾಗುತ್ತಲೇ ಇದೆ. 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ವಿಚಾರವನ್ನು ನಮ್ಮ ಹೈಕೋರ್ಟ್ ...ನಗತ್ಯವಾಗಿ ಗಂಭೀರ ಪ್ರಕರಣವನ್ನಾಗಿ ಮಾಡಿರುವುದು ಇದಕ್ಕೆ ಸಾಕ್ಷಿ. ಈಗಾಗಲೇ ಮುಸ್ಲಿಮರ ವಿರುದ್ಧ ಸಂಘಪರಿವಾರ ನಡೆಸಿರುವ ಹುನ್ನಾರಕ್ಕೆ ತುಪ್ಪ ಸುರಿಯುವ ರೀತಿಯಲ್ಲಿ ...ನ್ಯಾಯಾಧೀಶರು ವರ್ತಿಸಿದ್ದು ದುರದೃಷ್ಟಕರವೆಂದೇ ಹೇಳಬೇಕು. 21 ವರ್ಷದ ಸಿಲ್ಜಾರಾಜ್ ತನ್ನ ಇಚ್ಛೆಯ ಮೇರೆಗೆ ಅಸ್ಗರ್‌ನೊಂದಿಗೆ ಇರುವುದಾಗಿಯೂ, ...ನ್ನ ಮೇಲೆ ಯಾವುದೇ ಒತ್ತಡ ಇಲ್ಲವೆಂದೂ ಗಂಭೀರ ಹೇಳಿಕೆ ನೀಡಿದ ಮೇಲೂ ಹೈಕೋರ್ಟ್‌ನ ನ್ಯಾಯಾಧೀಶರು ಆಕೆ ತನ್ನ ಪಾಲಕರೊಂದಿಗೆ ...ಮೂರು ವಾರ ಇರಬೇಕು ಎಂದು ಹೇಳಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಲ್ಲದೇ ಇನ್ನೇನು? ಪ್ರೀತಿ, ಪ್ರೇಮವನ್ನು ದೇಶದ ಭದ್ರತೆಗೆ ...ಳುಕು ಹಾಕಿ ನೋಡುವುದು ಸಂಘಪರಿವಾರದ ಚಾಳಿ. ಆದಕ್ಕೆ ನ್ಯಾಯಾಲಯಗಳೂ ಪುಷ್ಟಿ ಕೊಡುತ್ತಾ ಹೋದರೆ ಈ ಸಮಾಜ ಒಡೆದ ...ನೆಯಾಗುತ್ತದಷ್ಟೇ. ಯಾರು ಯಾರನ್ನು ಬೇಕಾದರೂ ಮದುವೆಯಾಗುವ ಸ್ವಾತಂತ್ರ್ಯವನ್ನು ಸಂವಿಧಾನವೇ ನೀಡಿದೆ. ಈಗ ಸಿಲ್ಜಾರಾಜ್‌ಳ ಪ್ರೀತಿಸುವ ...ಕ್ಕನ್ನು ನಿರಾಕರಿಸುವ ಧಾಟಿಯಲ್ಲಿ ಮಾತಾಡುವ ಮೂಲಕ ನ್ಯಾಯಾಧೀಶರು ಆಕೆಯ ವೈಯಕ್ತಿಕ ಸ್ವಾತಂತ್ರ್ಯವನ್ನೇ ಹರಣ ಮಾಡಿದ್ದಾರೆ.




ರಾಷ್ಟ್ರದ ಭದ್ರತೆಯನ್ನು ವ್ಯಕ್ತಿಯೋರ್ವರ ಸಾಂಸಾರಿಕ ಜೀವನಕ್ಕೆ ಲಿಂಕ್ ಮಾಡುವುದರ ಮೂಲಕ ಕೋರ್ಟು ಕೆಟ್ಟ ಪರಂಪರೆಗೆ ನಾಂದಿ ಹಾಡಿದೆ. ...ತಿಯೇ ಭಯೋತ್ಪಾದನೆ, ಮುಸ್ಲಿಮರನ್ನು ಪ್ರೀತಿಸೋದೆ ಭಯೋತ್ಪಾದನೆ ಎಂಬ ಭಾವ ಮೂಡಿಸುವ ಮೂಲಕ ಸಮುದಾಯವೊಂದನ್ನು ಅಪರಾಧಿ ...ನದಲ್ಲಿ ನಿಲ್ಲಿಸುವ ಷಡ್ಯಂತ್ರಕ್ಕೆ ಕೋರ್ಟ್ ಪರೋಕ್ಷವಾಗಿ ಬೆಂಬಲಿಸಿದೆ. ಕುಟುಂಬದ ಯಜಮಾನನಂತೆ, ಪಂಚಾಯತಿಕೆ ನಡೆಸುವ ಮುಖಂಡನಂತೆ ...ರ್ಟ್‌ಗಳು ತೀರ್ಮ ನೀಡುವುದು ಇದೇನೂ ಮೊದಲ ಬಾರಿಯಲ್ಲ. ಸಿರಿಯಾಕ್ ಜೋಸೆಫ್ ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದಾಗ ...ಂತರ್ಜಾತಿ ವಿವಾಹದ ಪ್ರಕರಣವೊಂದು ಅವರ ಎದುರು ಬಂದಿತ್ತು. 21 ವರ್ಷದ ಆ ವಿವಾಹಿತೆಗೆ ಜೋಸೆಫ್ ಸಾಹೇಬರು ಬುದ್ಧಿ ಹೇಳುತ್ತಾ ...ರಿಯಾಗಿ ಬದುಕೋಕೂ ಗೊತ್ತಾಗಲ್ವ?" ಎಂದು ಹೇಳಿ ಅಂತರ್ಜಾತಿ ವಿವಾಹವನ್ನೇ ಗೇಲಿ ಮಾಡಿದ್ದರು. ಸಿಲ್ಜಾರಾಜ್‌ಳ ಗಂಭೀರ ಹೇಳಿಕೆ ಕೇಳಿದ ...ಮೇಲೆ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ರದ್ದು ಮಾಡಬೇಕಾಗಿದ್ದ ನ್ಯಾಯಾಲಯ ಆಕೆಯನ್ನು ನಂಬದೇ 'ಲವ್ ಜಿಹಾದ್' ಎಂಬ ಕಲ್ಪಿತ ಪತ್ರಿಕಾ ವರದಿಗಳನ್ನೇ ನಂಬಿ ...ಸಂವಿಧಾನವನ್ನು, ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಕಡೆಗಣಿಸಿದೆ. ನ್ಯಾಯಾಲಯಗಳಲ್ಲೇ ಹೀಗಾದರೆ ಜನರಿಗೆ ನ್ಯಾಯ ಸಿಗುವುದು ಎಲ್ಲಿ?

● ಮಲ್ಲಿ

ಇಂತಹ ಸಾಮಾಜಿಕ ಕಾಳಜಿಗಳನ್ನು ಹೊಂದಿದ್ದ ಲೀಲಾ ನಾಪತ್ತೆಯಾದಾಗ ...ಳಿಗಾಗಿ ಹುಡುಕಬೇಕಿದ್ದ ಪೊಲೀಸರು ಆದನ್ನು ಮಾಡದೇ ಏನನ್ನು ಮಾಡಿದರು ...ತ್ತೇ? ಲೀಲಾ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದರಿಂದ ಆಕೆ ನಾಪತ್ತೆಯಾಗಿ ...ಡಿನಲ್ಲಿರುವ ನಕ್ಸಲರೊಂದಿಗೆ ಸೇರಿಕೊಂಡು ಗನ್ನು ಹಿಡಿದಿದ್ದಾಳೆ ಎಂದರು!

ಅದು ಅಲ್ಲಿಗೇ ನಿಲ್ಲಲಿಲ್ಲ. ಲೀಲಾಳಿಗೆ 'ನಕ್ಸಲ್' ಎಂಬ ಹಣೆಪಟ್ಟಿ ಕಟ್ಟಿದ ...ಲೀಸರು ಆಕೆಯ ತಂದೆ-ತಾಯಿ-ಸಹೋದರ ...ಹೋದರಿಯರನ್ನು ಇನ್ನಿಲ್ಲದಂತೆ ...ಡಿಸಲಾರಂಭಿಸಿದರು. ಹೊತ್ತಿಲ್ಲದ ಹೊತ್ತಿನಲ್ಲಿ ...ರ ಮನೆಗೆ ನುಗ್ಗುವುದು, ಮನೆಯಲ್ಲಿರುವ ...ಹಿಳೆಯರೊಂದಿಗೆ ಪುರುಷ ಪೊಲೀಸರು ...ಷ್ಟದಾಗಿ ವರ್ತಿಸುವುದು, "ಲೀಲಾ ಫೋನ್ ...ಡಿದ್ದಳಾ? ಎಲ್ಲಿಂದ, ಯಾವಾಗ ಮಾಡಿದ್ದಳು" ...ಂದು ಪೀಡಿಸುವುದು.... ಎಲ್ಲವೂ ನಡೆದಿತ್ತು.





ಅನಿತಾ 'ಲವ್‌ಜಿಹಾದ್'ಗೆ ಬಲಿಯಾಗಿದ್ದಾಳೆ ಎಂದು ಆರೋಪಿಸಿ ಚಿಡ್ಡಿಗಳ ಪ್ರತಿಭಟನೆ

ಪೊಲೀಸರ ಉಪಟಳ ಎಷ್ಟಾಗಿತ್ತೆಂದರೆ ...ರು ಲೀಲಾಳ ತಂಗಿ 19 ವರ್ಷ ವಯಸ್ಸಿನ ಪ್ರಭಾವತಿಯನ್ನು ಇನ್ನಿಲ್ಲದಂತೆ ...ಸಿಸುತ್ತಿದ್ದರು. ಟೆಲಿಫೋನ್ ಬೂತ್‌ನಲ್ಲಿ ಕೆಲಸ ಮಾಡುತ್ತಿರುವ ಪ್ರಭಾವತಿ ಮೇಲೆ ...ಣ್ಣು ಇಟ್ಟಿದ್ದ ಪೊಲೀಸರು ಆಕೆ ಎಲ್ಲಿಗೆ ಹೋದರೂ ಹಿಂಬಾಲಿಸುತ್ತಿದ್ದರು.

ಅಷ್ಟೇ ಅಲ್ಲ, ಕಳೆದ ಏಪ್ರಿಲ್ 29 ರಂದು ಹಿರಿಯ ಪೊಲೀಸ್ ಅಧಿಕಾರಿ ...ಜಿ ಗೋಪಾಲ್ ಹೊಸೂರ್ ಅವರು ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ...ಲರ ಪೋಟೋ ಸಮೇತ ಪಟ್ಟಿಯನ್ನು ಬಿಡುಗಡೆ ಮಾಡಿದ್ದರಲ್ಲ? ಆ ಪಟ್ಟಿಯಲ್ಲಿ ಲೀಲಾ ಹೆಸರು ಮತ್ತು ಪೋಟೋ ಕೂಡ ಇದ್ದು ಆಕೆಯ ಬಗ್ಗೆ ಮಾಹಿತಿ ...ಡಿದವರಿಗೆ ಒಂದು ಲಕ್ಷ ರೂಪಾಯಿ ಬಹುಮಾನವನ್ನು ಘೋಷಿಸಿದ್ದರು.

ವಿಪರ್ಯಾಸದ ಸಂಗತಿ ಎಂದರೆ ಈಗ ಸರಣಿ ಕಿಲ್ಲರ್ ಮೋಹನ್‌ಕುಮಾರ್‌ಗೆ ಬಲಿಯಾದ ಮಹಿಳೆಯರ ಪಟ್ಟಿಯಲ್ಲಿ ಇದೇ ಲೀಲಾಳ ಹೆಸರು ಮತ್ತು ಪೋಟೋ ಕೂಡ ಇದೆ! ಆಕೆಗೆ ಸೈನೆಡ್ ಕೊಟ್ಟು ಕೊಂದಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ.

ಭಾರತದಲ್ಲಿನ ಬಡತನ ಮತ್ತು ಪುರುಷ ಪ್ರಧಾನ ವ್ಯವಸ್ಥೆ ಎಷ್ಟು ಕಠೋರವಾಗಿದೆ ಎಂದರೆ ಅವುಗಳಿಗೆ ಬಲಿಯಾಗುವ ಆದೆಷ್ಟೊ ಯುವತಿಯರು ಪ್ರತಿನಿತ್ಯ ತಮ್ಮ ಮನೆಗಳಿಂದ ನಾಪತ್ತೆಯಾಗುತ್ತಿದ್ದಾರೆ. ಹಾಗೆ ನಾಪತ್ತೆ ಆದ ಮಹಿಳೆಯರಲ್ಲಿ ಕೆಲವರು ಸ್ವಾಭಿಮಾನದ ಬದುಕನ್ನು ಕಂಡುಕೊಂಡರೆ ಬಹಳಷ್ಟು ಜನ ಕಾಮಾಟಿಪುರಗಳಲ್ಲಿ ಸರಕುಗಳಾಗುತ್ತಾರೆ, ಇಲ್ಲ ಗಂಡನೆಂಬ ವ್ಯಕ್ತಿಯ ಆಶ್ರಯವನ್ನು ಬಯಸಿ ಮೋಹನ್‌ಕುಮಾರ್‌ನಂತಹ ಕೊಲೆಗಡುಕರಿಗೆ ಬಲಿಯಾಗುತ್ತಾರೆ. ಇದು ವಾಸ್ತವ.

ಆದರೆ ಆದನ್ನು ಅರಿತು ನಮ್ಮ ಸಮಾಜದಲ್ಲಿನ ಅಸಮತೋಲನಗಳನ್ನು ಸರಿಪಡಿಸದೆ, ಮುಸಲ್ಮಾನರ 'ಲವ್ ಜಿಹಾದ್' ಕಾರ್ಯಾಚರಣೆಗೆ ಹಿಂದೂ ಯುವತಿಯರು ಬಲಿಯಾಗುತ್ತಿದ್ದಾರೆಂದೂ, 'ನಕ್ಸಲ್' ಹೋರಾಟಗಾರರಾಗುತ್ತಿದ್ದಾರೆಂದೂ ಬೊಬ್ಬೆ ಇಡುವುದು ಅಪಾಯಕಾರಿ ಹುಚ್ಚುತನವಾಗುತ್ತದೆ....


ಯಾಕೆಂದರೆ ಈಗಾಗಲೇ ಸ್ಪಷ್ಟವಾಗಿರುವಂತೆ ಅನಿತಾ 'ಲವ್ ಜಿಹಾದ್' ಗೆ ಬಲಿಯಾಗಲಿಲ್ಲ, ಹಾಗೆಯೇ ಲೀಲಾ ಕೂಡ ನಕ್ಸಲ್ ಆಗಲಿಲ್ಲ. ಬದಲಾಗಿ ನಮ್ಮ ಸಮಾಜ ಮಹಿಳೆಯರ ಮೇಲೆ ವಿಧಿಸುವ 'ಮದುವೆ' ಎಂಬ ಮಾನ್ಯತೆಯನ್ನು ಬಯಸಿ ತಮ್ಮ ಪ್ರಾಣವನ್ನೇ ಕಳೆದುಕೊಂಡರು...

● ಸಾವಂತ್ರಿ

...ಡಿ ಮೂಲ್ಕಿ ಪೊಲೀಸರು ಅಕ್ರಮ ಕೂಟ, ದೊಂಬಿ, ...ಲಾತ್ಕಾರ, ನಿಂದನೆ, ಗಲಭೆ ಮತ್ತು ಗಲಭೆಗೆ ...ಪ್ರಚೋದನೆಯ ಅಪರಾಧಗಳಿಗೆ ಸಂಬಂಧಿಸಿದ ಐಪಿಸಿ ...ಲಮುಗಳಡಿ ಈ ಮುಸ್ಲಿಮ್ ಯುವಕರ ಮೇಲೆ ...ಮಿನಲ್ ಕೇಸು ದಾಖಲಿಸಿದ್ದಾರೆ. ಆದರೆ ಕೋಮು ...ಷ ಕೆರಳಿಸುವ ಉದ್ದೇಶದಿಂದಲೇ ಹಸಿ ಸುಳ್ಳನ್ನು ...ದ್ದಿಯ ಹಾಗೆ ಪ್ರಕಟಿಸಿದ ವಿಜಯ ಕರ್ನಾಟಕದ ...ಪಾದಕರ ಮೇಲೆ ಯಾವ ಕ್ರಮವೂ ಇಲ್ಲ! ಯಾಕೆಂದರೆ ...ವರು ಕೇಸರಿ ಬ್ರ್ಯಾಂಡಿನ ದೇಶಭಕ್ತರು! ಇದ್ದುದರಲ್ಲಿ ...ಜ್ಪೆ ಠಾಣೆಯ ಪೊಲೀಸರು ಈ ವಿಷಯದಲ್ಲಿ ನ್ಯಾಯವಾಗಿ ...ಡೆದುಕೊಂಡಿದ್ದಾರೆ. ಬಜ್ಪೆ ಬಸ್ ನಿಲ್ದಾಣದಲ್ಲಿ ವಿಜಯ ...ರ್ನಾಟಕದ ಈ ವರದಿಯ ಪ್ರತಿಯನ್ನು ಅಂಟಿಸಿರುವುದನ್ನು ...ರವರು ಠಾಣೆಯ ಗಮನಕ್ಕೆ ತಂದಾಗ ಡಿವೈಎಸ್‌ಪಿ ...ಶ್ ತಕ್ಷಣ ಅದನ್ನು ತೆರವು ಗೊಳಿಸಿದ್ದಾರೆ. ವಿಜಯ ...ರ್ನಾಟಕದ ಸಂಪಾದಕರನ್ನೇ ಕರೆಸಿ, ಅವರಿಂದ ಈ ...ಪರಾಧವನ್ನು ಒರೆಸಿ ಕ್ಲೀನ್ ಮಾಡಿಸಿದ್ದರೆ ಅದು ಇನ್ನಷ್ಟು ...ಕ್ತವಾದ ಕ್ರಮವಾಗುತ್ತಿತ್ತು.

ಲವ್ ಜಿಹಾದ್ ಕುರಿತು ಕೇರಳದ ಸ್ಪೆಷಲ್ ಸ್ಕ್ವಾಡ್‌ನ ...ಧಿಕಾರಿಗಳು ತನಿಖೆ ನಡೆಸಿ ಅಂತಹದ್ದು ಏನೂ ನಡೆದೇ ...ಲ್ಲ; ಯುವಕ ಯುವತಿ ಪ್ರೀತಿಸಿ ಮದುವೆಯಾಗಿರುವ ...ಕರಣಗಳು ನಡೆದಿವೆಯೇ ಹೊರತು ಒತ್ತಾಯದ ...ತಾಂತರ, ಇತ್ಯಾದಿ ಆಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ...ದರೂ ಮೊನ್ನೆ ತಾ. 15.10.09 ರಂದು ...ಂಗಳೂರಿನಲ್ಲಿ ಹಿಂದೂ ಜನಜಾಗೃತಿ ಸಮಿತಿಯವರು ...ಹೀಬಾದ ಮಡ್‌ಗಾಂವ್‌ನಲ್ಲಿ ನಡೆದ ಬಾಂಬ್ ...ಸ್ಫೋಟಕ್ಕೂ ಈ ಸಂಘಟನೆಗೂ ಸಂಬಂಧವಿದೆ ಎಂಬ ...ದಿಗಳಿವೆ) ಪತ್ರಿಕಾಗೋಷ್ಠಿ ನಡೆಸಿ, ಕರ್ನಾಟಕದಲ್ಲಿ ...0,000 ಹಿಂದೂ ತರುಣಿಯರು ಮತ್ತು ದಕ್ಷಿಣ ಕನ್ನಡ ...ಲ್ಲೆಯೊಂದರಿಂದಲೇ 3,000 ಹಿಂದೂ ತರುಣಿಯರನ್ನು ...ತಾಂತರಿಸಲಾಗಿದೆ ಎಂದು ಆಪಾದಿಸಿದ್ದಾರೆ. ಆ ಸಂಘಟನೆ ...ಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿ ಎದುರು "ಆ ...ಹಾದ್" ಪ್ರತಿಭಟನೆಯನ್ನೂ ನಡೆಸಿದೆ. ಆದರೆ ಪಶ್ಚಿಮ ...ಲಯ ಐಜಿಪಿ ಗೋಪಾಲ್ ಹೊಸೂರ್ "ಅಂತಹ ...ವುದೇ ಪ್ರಕರಣ ನಡೆದಿರುವುದು ನಮ್ಮ ಗಮನಕ್ಕೆ ...ಬಂದಿಲ್ಲ, ಇದುವರೆಗೆ ಯಾರು ಕೂಡ ನಮಗೆ ದೂರು





ಕೊಟ್ಟಿಲ್ಲ. ಅಂತಹವೆಲ್ಲ ನಡೆದಿದ್ದರೆ ಖಂಡಿತ ಆ ಹುಡುಗಿಯರ ಹೆತ್ತವರು ನಮ್ಮ ಬಳಿ ದೂರು ಕೊಡುತ್ತಿದ್ದರು" ಎಂದು ಸ್ಪಷ್ಟಪಡಿಸಿದ್ದಾರೆ. (ದ ಹಿಂದು 16.10.09 ಪುಟ 7).

ಮುಸ್ಲಿಮರ ವಿರುದ್ಧ ಹಿಂದೂಗಳಲ್ಲಿ ಭಯ, ದ್ವೇಷ, ಅಪನಂಬಿಕೆ, ಜಿಗುಪ್ಸೆಗಳನ್ನು ಹುಟ್ಟಿಸಲು ಸಂಘ ಪರಿವಾರ ಲಾಗಾಯ್ತಿನಿಂದ ಅಪಪ್ರಚಾರದ ಕೆಲವು ಮೂಲ ಮಾದರಿಗಳನ್ನು ಅನುಸರಿಸುತ್ತ ಬಂದಿದೆ. ಮುಸ್ಲಿಮರು ಆಕ್ರಮಣಕಾರರು, ಮೂರ್ತಿಭಂಜಕರು, ಗೋಹಂತಕರು, ಮತಾಂಧರು, ದೇವಾಲಯಗಳನ್ನು ದೋಚಿದವರು, ದೇಶ ವಿಭಜನೆಗೆ ಕಾರಣವಾದವರು, ತಲಾ ಐದು ಮದುವೆಯಾಗಿ 20 ಮಕ್ಕಳನ್ನು ಹುಟ್ಟಿಸಿ ಇನ್ನು ಐವತ್ತು ವರ್ಷಗಳಲ್ಲಿ ದೇಶದಲ್ಲಿ ಬಹುಸಂಖ್ಯಾತರಾಗಲು ಹುನ್ನಾರ ನಡೆಸುತ್ತಿರುವವರು, ಹಿಂದುಳಿದವರು, ತುಷ್ಟೀಕರಣದ ಲಾಭ ಪಡೆಯುತ್ತಿರುವವರು, ಎಂಬಿವೇ ಮುಂತಾದ ಅಪಪ್ರಚಾರಗಳ ಜೊತೆಗೆ ಮುಸ್ಲಿಮರು ಕಾಮುಕರು ಮತ್ತು ಹಿಂದೂ ಸ್ತ್ರೀಯರ ಶೀಲ ಕೆಡಿಸಲು ಹಾತೊರೆಯುವವರು ಎಂಬುದು ಸಹ ಸಂಘ ಪರಿವಾರ ಆ ಸಮುದಾಯದ ಬಗ್ಗೆ ನಿರಂತರವಾಗಿ ಮಾಡುತ್ತ ಬಂದಿರುವ ಆರೋಪ.

ಗುಜರಾತ್‌ನಲ್ಲಿ 80 ರ ದಶಕದಲ್ಲೇ ವಿಹಿಂಪ "ಟೆಲಿಫೋನ್ ಬೂತು, ಟೈಲರಿಂಗ್ ಶಾಪ್, ಐಸ್‌ಕ್ರೀಮ್ ಪಾರ್ಲರ್, ಚಪ್ಪಲಿ ಅಂಗಡಿ ಮುಂತಾದ ಕಡೆ ಹಿಂದೂ ಯುವತಿಯರು ಮುಸ್ಲಿಮ್ ಗಂಡಸರ ಬಗ್ಗೆ ಎಚ್ಚರವಾಗಿರಬೇಕು" ಎಂಬ ಒಕ್ಕಣೆಯ ಕರಪತ್ರಗಳನ್ನು ಎಲ್ಲೆಡೆ ವಿತರಿಸಿತ್ತು. ಗುಜರಾತ್ 2002ಕ್ಕೆ ಇದು ಕೂಡ ಒಂದು ಪೂರ್ವಭಾವೀ ತಯಾರಿ ಆಗಿತ್ತು. 10 ವರ್ಷಗಳ ಕೆಳಗೆ ಕರಾವಳಿಯ ಊರುಗಳಲ್ಲಿಯೂ ಅದೇ ಒಕ್ಕಣೆಯ ಕನ್ನಡ ಕರಪತ್ರಗಳನ್ನು ಹಂಚಲಾಗಿತ್ತು.

ಈ ದ್ವೇಷ ಅಪಪ್ರಚಾರಗಳ ಅಭಿಯಾನದಲ್ಲಿ ಲವ್ ಬಾಂಬ್, ಲವ್ ಜಿಹಾದ್ ಎಂಬ ಝಳಕ್ ಹೆಸರು ಮಾತ್ರ ಹೊಸತು. ಆದರೆ ಜನರಿಗೆ ಹಂಚಲಾಗುತ್ತಿರುವ ... ಮಾತ್ರ ಅದೇ ಹಳೆಯ ಆರೆಸ್ಸೆಸ್ ವಿಷ.

● ಜಿ. ರಾಜಶೇಖರ

ಡಾ.ಕೆ.ಎಸ್. ...


-ಶೀಲಾ. ವಕೀಲರು

Caste Disability Removal Act (1850)

ಬಿಜೆಪಿ: ಅಧ್ಯಕ್ಷ ಸ್ಥಾನಕ್ಕೆ ಕಸರತ್ತು

ನೆರೆ ಸಂತ್ರಸ್ತರನ್ನು ಮರೆತು ಪಕ್ಷ ಸಂಘಟಿಸುತ್ತಿರುವ ಬಿಜೆಪಿ ನಾಯಕರು ಈಗ ಸದಸ್ಯತ್ವ ಆಂದೋಲನದಲ್ಲಿ ಮಗ್ನರಾಗಿದ್ದಾರೆ. ಈ ಮಧ್ಯೆ ಅಧ್ಯಕ್ಷ ಸ್ಥಾನಕ್ಕೆ ಸೀಟಿ ರವಿ ರಚ್ಚೆ ಹಿಡಿದಿದ್ದರೆ, ಪ್ರಹ್ಲಾದ್ ಜೋಷಿ ಜನಿವಾರಗಳ ಕಾಲು ಹಿಡಿಯುತ್ತಿದ್ದಾರೆ. ಒಂದೆಡೆ ಸಚಿವ ಸ್ಥಾನಕ್ಕೆ ಆಶೆ ಬಿದ್ದು ಶೆಟ್ಟರ್ ಮೌನ ವ್ರತ ಆಚರಿಸುತ್ತಿದ್ದರೆ ಇನ್ನೊಂದೆಡೆ ವಿಜಯ್‌ಶಂಕರ್ ಎಂಬ ಜೋಕರ್ ಕಾರ್ಡನ್ನು ಯಡ್ಡಿ ಅಖಾಡಕ್ಕೆ ಎಸೆದಿದ್ದಾರೆ. ಇವೆಲ್ಲದರ ನಡುವೆಯೂ ಲಿಂಬಾವಳಿಗೆ ಆ ಸ್ಥಾನ ದಕ್ಕುವಂತಿದೆ...

ಉತ್ತರ ಕರ್ನಾಟಕದ ಜನ ಪ್ರವಾಹದಲ್ಲಿ ಆಸ್ತಿ-ಮನೆ ಕಳೆದುಕೊಂಡು ಆಕಾಶ ನೋಡುತ್ತಾ ಕುಳಿತಿದ್ದರೆ, ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಚಡ್ಡಿಗಳು ಬಿಜೆಪಿ ಪಕ್ಷವನ್ನು ಪುನರ್ ಸಂಘಟಿಸಲು ಎಲ್ಲಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ನೆರೆ ಸಂತ್ರಸ್ತರಿಗೆ ಬದುಕು ಕಟ್ಟಿಕೊಡಲು ನೆರವಾಗುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚಿಸುವುದುನ್ನು ಬಿಟ್ಟು, ಪಕ್ಷದ ಸದಸ್ಯತ್ವ ಆಂದೋಲನ ನಡೆಸುವಂತೆ ಛೂಬಿಟ್ಟಿದ್ದಾರೆ.



ಸಿ.ಟಿ.ರವಿ

ಇನ್ನು ಪಕ್ಷದ ಪುಡಿ ಮತ್ತು ಪುಂಡ ನಾಯಕರಂತೂ ಪಕ್ಷದ ವಿವಿಧ ಘಟಕಗಳಲ್ಲಿ ಅಧಿಕಾರ ಹಿಡಿಯಲು 'ರಾಜಕೀಯ' ಮಾಡುತ್ತಿದ್ದಾರೆ. ಪ್ರವಾಹ ಪರಿಸ್ಥಿತಿ ತಲೆದೋರಿ ತಿಂಗಳಾಗುತ್ತಾ ಬಂದಿದ್ದರೂ ಬಯಲು ನಾಡಿನ ಲಕ್ಷಾಂತರ ಮಂದಿ ಈಗಲೂ ಪೌಷ್ಟಿಕ ಆಹಾರಕ್ಕಾಗಿ, ಶುದ್ಧ ಕುಡಿಯುವ ನೀರಿಗಾಗಿ ಪರದಾಡುತ್ತಿದ್ದಾರೆ. ಆದರೆ ಅಧಿಕಾರದಲ್ಲಿರುವ ಬಿಜೆಪಿ ಒಂದಿಷ್ಟೂ ಹೊಣೆಗಾರಿಕೆ ಇಲ್ಲದಂತೆ ವರ್ತಿಸುತ್ತಿದೆ. "ನವೆಂಬರ್‌ನಲ್ಲಿ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ಚುನಾವಣೆ ಮತ್ತು ಸದಸ್ಯತ್ವ ಆಂದೋಲನ ನಡೆಯುತ್ತದೆ. ಡಿಸೆಂಬರ್‌ನಲ್ಲಿ ರಾಜ್ಯ ಘಟಕದ ಪದಾಧಿಕಾರಿಗಳ ಆಯ್ಕೆ ನಡೆಯುತ್ತದೆ" ಎಂದು ಪಕ್ಷದ ಅಧ್ಯಕ್ಷ ಹಲ್ಲುಕಿಸಿ ಗೌಡ ಒಂದಿಷ್ಟೂ ನಾಚಿಕೆ ಇಲ್ಲದವನಂತೆ ಪ್ರಕಟಿಸಿದ್ದಾನೆ.



ಅನಿಲ್ ಲಾಡ್

ಬಿಜೆಪಿ ಪಕ್ಷ ಬಲಪಡಿಸುವುದೇ 'ದೇಶ ಸೇವೆ' ಎಂದು ನಂಬಿರುವ ಪಕ್ಷದ ಕಾರ್ಯಕರ್ತರು, ಮುಖಂಡರು ನೆರೆ ಸಂತ್ರಸ್ತರ ಪರಿಹಾರಕ್ಕಾಗಿ ಜನ ನೀಡಿದ್ದ ದುಡ್ಡಿನಲ್ಲಿ ಬಿಳಿ ಅಂಗಿ ಖರೀದಿಸಿ ಅದನ್ನು ಹಾಕಿಕೊಂಡು, ಕೇಸರಿ ಶಾಲು ಹೊದ್ದು ಹೊಟೇಲ್‌ಗಳಲ್ಲಿ ತಮ್ಮ ಬೆಂಬಲಿಗರ ಸಭೆ ನಡೆಸಲಾರಂಭಿಸಿದ್ದಾರೆ. ಇದನ್ನು ನೋಡಿ ಜನ ಎಲೆ-ಅಡಿಕೆ ಹಾಕಿಕೊಂಡು ಉಗುಳುವುದೊಂದೇ ಬಾಕಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮತ್ತು ಪಂಚಾಯತ್‌ಗಳಿಗೆ ಚುನಾವಣೆಗಳು ನಡೆಯಲಿರುವ ಹಿನ್ನಲೆಯಲ್ಲಿ ಬಿಜೆಪಿ ಪಕ್ಷವನ್ನು ಬಲಪಡಿಸಲು ಮುಂದಾಗಿದೆ. ಜನರ ಕಷ್ಟ ಏನೇ ಇರಲಿ, ಅಧಿಕಾರ ಹಿಡಿಯುವುದು ಮಾತ್ರ ಮುಖ್ಯ ಎಂಬ ಬಿಜೆಪಿಯ ನಿಲುವಿಗೆ ಜನ ತಕ್ಕ ಪಾಠ ಕಲಿಸಬೇಕಾಗಿದೆ. ಅಧಿಕಾರಿಗಳು ಸರಿಯಾಗಿ ಸಂತ್ರಸ್ತರಿಗೆ ಪರಿಹಾರ ನೀಡುತ್ತಿಲ್ಲ ಎಂದು 'ಕೊರಗಿದ' ಯಡ್ಡಿ ಈಗ ವಿಷಯವನ್ನು ಮರೆತು ಪಕ್ಷದ ರಾಜ್ಯ ಪದಾಧಿಕಾರಿಗಳನ್ನು ಬೆಂಗಳೂರಿಗೆ ಕರೆಸಿಕೊಂಡು ಸಭೆ ನಡೆಸಿ ಪಕ್ಷ ಸಂಘಟಿಸುವ ಕುರಿತು ಗಂಟೆಗಟ್ಟಲೆ ಚರ್ಚಿಸುತ್ತಾರೆಂದರೆ ಜನರ ಬಗ್ಗೆ ಇವರಿಗಿರುವ ಕಾಳಜಿ ಏನೆಂಬುದು ಮನದಟ್ಟಾಗುತ್ತದೆ.

ಭಿನ್ನಮತೀಯರ ಮಟ್ಟಹಾಕಿದ ಯಡ್ಡಿ

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ರಾಜ್ಯ ಬಿಜೆಪಿಯಲ್ಲಿನ ಭಿನ್ನಮತೀಯರನ್ನು ಮಟ್ಟಹಾಕುತ್ತಾ ಬಂದಿರುವ ಯಡ್ಡಿ ಇದೀಗ ಈ ವಿಷಯದಲ್ಲಿ ದಿಗ್ವಿಜಯ ಸಾಧಿಸಿದ್ದಾರೆ. ಹೀಗಾಗಿ ಈಗಲೇ ಪಕ್ಷದ ಸಾಂಸ್ಥಿಕ ಚುನಾವಣೆ ನಡೆದರೆ ತಮಗೆ ಇನ್ನಷ್ಟು ಅಧಿಕಾರ ಸಿಗುತ್ತದೆ ಎಂಬುದು ಯಡ್ಡಿ ಲೆಕ್ಕಾಚಾರ. ಆದ್ದರಿಂದ ಚುನಾವಣೆ ನಡೆಸಿ, ರಾಜ್ಯ ಬಿಜೆಪಿ ಘಟಕವನ್ನು ಪುನರ್‌ರಚಿಸಲು ಉತ್ಸುಕರಾಗಿದ್ದಾರೆ. "ಜನ ಕಷ್ಟದಲ್ಲಿದ್ದಾರೆ, ಎರಡು ಗಂಟೆ ಜಾಸ್ತಿ ಕೆಲಸ ಮಾಡಿ'' ಎಂದು ಸರ್ಕಾರಿ ಅಧಿಕಾರಿಗಳಿಗೆ ಉಪದೇಶ ನೀಡುವ ಯಡ್ಡಿ ತಮ್ಮ ಪಕ್ಷದ ನಾಯಕರಿಗೆ, ಕಾರ್ಯಕರ್ತರಿಗೆ ಜನರ ಕಷ್ಟಗಳಿಗೆ ಸ್ಪಂದಿಸುವ ಜವಾಬ್ದಾರಿ ವಹಿಸುವುದು ಬಿಟ್ಟು, ಪಕ್ಷ ಸಂಘಟಿಸುವ ಜವಾಬ್ದಾರಿ ನೀಡಿದ್ದಾರೆ!

ಬಿಜೆಪಿಯಲ್ಲಿ ಭಿನ್ನಮತದ ದನಿ ಎತ್ತಿದ ನಾಯಕರ ಹೇಡಿತನವನ್ನು ಗಮನಿಸಿದ ಸಂಘಪರಿವಾರದ ನಾಯಕರು ಈಗ ಯಡ್ಡಿಗೇ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ. ಇತ್ತ ಪಕ್ಷದ ರಾಷ್ಟ್ರೀಯ ನಾಯಕರಿಗೂ ಪಕ್ಷದ ಮುಖ ಉಳಿಸಿರುವ ಯಡ್ಡಿಯೇ ಬೇಕು. ಹೀಗಾಗಿ ಭಿನ್ನಮತೀಯ ಚಟುವಟಿಕೆ ನಡೆಸುತ್ತಿದ್ದ ಕೆ.ಎಸ್.ಈಶ್ವರಪ್ಪ ಜಗದೀಶ್ ಶೆಟ್ಟರ್, ರೆಡ್ಡಿ ಬ್ರದರ್ಸ್‌ಗಳ ಮಾತನ್ನು ಈಗ ಕೇಳುವವರೇ ಇಲ್ಲವಾಗಿದೆ. ಇದು ಗೊತ್ತಾಗುತ್ತಿದ್ದಂತೆಯೇ ಯಡ್ಡಿ ಪಕ್ಷದಲ್ಲಿ ಸರ್ವಾಧಿಕಾರಿಯಂತೆಯೇ ವರ್ತಿಸಲಾರಂಭಿಸಿದ್ದಾರೆ.



ಯಡ...

ಈಗ ಯಡ್ಡಿ ಪಕ್ಷದ ರಾಜ್ಯಘಟಕದ ಅಧ್ಯಕ್ಷ ಗಾದಿಗೆ ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಳ್ಳುವುದು ಬಹುತೇಕ ಖಚಿತಪಟ್ಟಿದೆ. ನೆಪಮಾತ್ರಕ್ಕೆ ಚುನಾವಣೆ ಡಿಸೆಂಬರ್‌ನಲ್ಲಿ ನಡೆಯಲಿದೆ. ಹಾಲಿ ಅಧ್ಯಕ್ಷ ಸದಾನಂದ ಗೌಡರ ಅಧಿಕಾರಾವಧಿ ನವೆಂಬರ್‌ಗೆ ಕೊನೆಗೊಳ್ಳಲಿದ್ದು, ಅವರು ಈಗಾಗಲೇ ಎರಡು ಅವಧಿಗೆ ಅಧ್ಯಕ್ಷರಾಗಿರುವುದರಿಂದ ಪಕ್ಷದ ಸಂವಿಧಾನದ ಪ್ರಕಾರ ಮತ್ತೆ ಅವರನ್ನೇ ಮುಂದುವರೆಸಲಾಗದು. ಹೀಗಾಗಿ ಹೊಸ ಅಧ್ಯಕ್ಷರ ನೇಮಕಕ್ಕೆ ತೀವ್ರ ಹುಡುಕಾಡ ನಡೆಸಲಾಗುತ್ತಿದೆ.

ಗೊಣಗುತ್ತಿರುವ ಭಿನ್ನಮತೀಯರು

ಇತ್ತ ಯಡ್ಡಿ ಪಕ್ಷದಲ್ಲಿ ಸರ್ವಾಧಿಕಾರಿಯಂತೆ ಮೆರೆಯುತ್ತಿದ್ದರೆ, ಅತ್ತ ಭಿನ್ನಮತೀಯರು 'ಏನೂ ಮಾಡಲಾಗುವುದಿಲ್ಲ' ಎಂದು ತಮ್ಮ ಆತ್ಮೀಯರ ಬಳಿ ಗೊಣಗುತ್ತಾ ಕಾಲಕಳೆಯುತ್ತಿದ್ದಾರೆ. ಪಕ್ಷದ ಸಾಂಸ್ಥಿಕ ಚುನಾವಣೆ ನಡೆಯಲಿರುವ ಈ ವೇಳೆಯಲ್ಲಿ ಮತ್ತೆ ಪಕ್ಷದಲ್ಲಿ ಭಿನ್ನಮತೀಯ ಚಟುವಟಿಕೆ ನಡೆಸಲು ಮುಂದಾಗಿದ್ದ ಒಬ್ಬೊಬ್ಬರೇ ನಾಯಕರನ್ನು ಯಡ್ಡಿ ಬುದ್ಧಿವಂತಿಕೆಯಿಂದ ಬಗ್ಗು ಬಡಿಯುತ್ತಿದ್ದಾರೆ. ಭಿನ್ನಮತೀಯರಿಗೆ ನಾಯಕತ್ವ ನೀಡಲು ಮುಂದಾಗಿದ್ದ ವಿಧಾನಸಭೆಯ ಸಭಾಧ್ಯಕ್ಷ ಜಗದೀಶ್ ಶೆಟ್ಟರ್‌ಗೆ ಮತ್ತೆ ಸಚಿವ ಸ್ಥಾನ ನೀಡುವ ಆಸೆ ತೋರಿಸಿರುವ ಯಡ್ಡಿ, ಅವರನ್ನು ನಿಷ್ಕ್ರಿಯಗೊಳಿಸುವ ಸಂಚು ನಡೆಸಿದ್ದಾರೆ. ಇದಕ್ಕಾಗಿ 'ಕನ್ನಡ ಪ್ರಭ' ದಿನ ಪತ್ರಿಕೆಯಲ್ಲಿ ಶೆಟ್ಟರ್‌ಗೆ ಸದ್ಯವೇ ಸಚಿವ ಸ್ಥಾನ ದೊರೆಯಲಿದೆ ಎಂಬ ಸುದ್ದಿಯನ್ನು 'ಪ್ಲಾಂಟ್' ಮಾಡಿದ್ದಾರೆ.

ಇನ್ನು ಹರಕುಬಾಯಿಯ ಈಶ್ವರಪ್ಪರನ್ನು ಮಟ್ಟ ಹಾಕಲು ಮೈಸೂರಿನ ವಿಜಯಶಂಕರ್‌ನನ್ನು ಯಡ್ಡಿ ಮುಂದೆ ಬಿಡುತ್ತಿದ್ದಾರೆ. ವಿಜಯಶಂಕರ್ ಕೂಡ ಕುರುಬ ಸಮುದಾದ ನಾಯಕರಾಗಿದ್ದು, ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಿ ಬೆಳೆಸಿದರೆ ಈಶ್ವರಪ್ಪನನ್ನು ಸಂಪೂರ್ಣವಾಗಿ ಮಟ್ಟಹಾಕಬಹುದು ಎಂಬುದು ಯಡ್ಡಿಯ ಯೋಚನೆ. ಹೀಗಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅವರ ಹೆಸರನ್ನೂ ಎಳೆತರಲಾಗಿದೆ.

ಈಗಾಗಲೇ ರೆಡ್ಡಿ ಬ್ರದರ್ಸ್ ವಿರುದ್ಧ ತಿರುಗಿ ಬಿದ್ದಿರುವ ಯಡ್ಡಿ ಅವರ ಆಟ ನಡೆಯದಂತೆ ನೋಡಿಕೊಳ್ಳುತ್ತಿದ್ದಾರೆ. ಪಕ್ಷದಲ್ಲಿ ಅವರಿಗಿರುವ ಬೆಂಬಲ ಅಷ್ಟಕಷ್ಟೇ ಆಗಿರುವುದರಿಂದ ಯಡ್ಡಿಯ ದಾರಿಗೆ ಅವರೇನೂ ಅಡ್ಡಗಾಲು ಹಾಕಲಾರರು. ಈಗಾಗಲೇ ಶ್ರೀರಾಮುಲುಗೆ ಆಪ್ತರಾಗಿದ್ದ ಗದಗದ ಜಿಲ್ಲಾಧಿಕಾರಿ ಪ್ರಸಾದ್‌ರನ್ನು ವರ್ಗಾವಣೆ ಮಾಡುವ ಮೂಲಕ ಯಡ್ಡಿ ಒಡ್ಡಿದ ಸವಾಲನ್ನು ಎದುರಿಸಲಾಗದೇ ರೆಡ್ಡಿ ಬ್ರದರ್ಸ್ ಬಾಲ ಅಡಿಹಾಕಿಕೊಂಡು ಕುಳಿತಿದ್ದಾರೆ.



ಪ್ರಹ್ಲಾದ್ ಜೋಷಿ



ಜಗದೀಶ್ ಶೆಟ್ಟರ್

ಲಿಂಬಾವಳಿ ಮೇಲೆ ಕಣ್ಣು

ರಾಜ್ಯ ಬಿಜೆಪಿ ಘಟಕಕ್ಕೆ ಸಚಿವ ಅರವಿಂದ ಲಿಂಬಾವಳಿಯ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಒಂದು ಕಾಲದಲ್ಲಿ ಅನಂತ್ ಕುಮಾರ್ ಬಣದಲ್ಲಿದ್ದ ಲಿಂಬಾವಳಿ ಈಗ ಯಡ್ಡಿಯ ವಿಶ್ವಾಸಿಗರಲ್ಲಿ ಒಬ್ಬರೆನಿಸಿದ್ದಾರೆ. ಇವರನ್ನು ತಾವೇ ಅಧ್ಯಕ್ಷರನ್ನಾಗಿ ಮಾಡುವುದರಿಂದ ಅನಂತು ಬಾಯಿಗೆ ಸರಿಯಾದ ಬೀಗ ಜಡಿಯಬಹುದು ಎಂಬುದು ಯಡ್ಡಿಯ ಲೆಕ್ಕಾಚಾರ. ಅಲ್ಲದೆ ಎಬಿವಿಪಿಯಿಂದ ಬಂದಿರುವ ಲಿಂಬಾವಳಿ ಸಂಘಟನೆಯ ಚತುರರೂ ಹೌದು. ಇದರಿಂದ ಪಕ್ಷಕ್ಕೆ ಅನುಕೂಲವಾಗಲಿದೆ. ಅಲ್ಲದೆ ಸಂಘಪರಿವಾರದ ನಾಯಕರೂ ಇವರಿಗೆ ಒಪ್ಪಿಗೆ ನೀಡಬಹುದು ಎಂದೆಲ್ಲಾ ಯಡ್ಡಿ ಲೆಕ್ಕ ಹಾಕಿದ್ದಾರೆ.

ಲಿಂಬಾವಳಿಯನ್ನು ಅನಂತು ಬಣ ವಿರೋಧಿಸುವ ಹಾಗೂ ಇಲ್ಲ, ಒಪ್ಪಿಕೊಂಡರೆ ಯಡ್ಡಿಯ ಆಯ್ಕೆಯನ್ನು ಒಪ್ಪಿದಂತಾಗುತ್ತದೆ. ಹೀಗಾಗಿ ಇಕ್ಕಟ್ಟಿಗೆ ಸಿಲುಕಿ ಸುಮ್ಮನಾಗಲಿದೆ. ಯಡ್ಡಿಗೆ ಬೇಕಾಗಿರುವುದು ಇದೇ ತಾನೆ? ಹೀಗಾಗಿ ಮತ್ತೊಂದು ವಿಜಯದ ಯಾತ್ರೆಗೆ ಯಡ್ಡಿ ಸಿದ್ಧತೆ ನಡೆಸಿರುವುದು ಸ್ಪಷ್ಟವಾಗಿದೆ.

ಜಾತಿ ಲೆಕ್ಕಾಚಾರದಲ್ಲಿ ಬಿಜೆಪಿ

ಯಡ್ಡಿ ಲಿಂಗಾಯತರಾಗಿರುವುದರಿಂದ ಪಕ್ಷದ ಅಧ್ಯಕ್ಷ ಸ್ಥಾನ ಲಿಂಗಾಯತರಿಗೆ ನೀಡಲಾಗದು. ಸದಾನಂದ ಗೌಡರು ಒಕ್ಕಲಿಗರಾಗಿದ್ದರು. ಮತ್ತೆ ಈ ಸಮುದಾಯಕ್ಕೆ ನೀಡುವುದರಿಂದ ಹೆಚ್ಚಿನ ಲಾಭವೇನೂ ಆಗದು ಎಂದು ಯಡ್ಡಿ ಬಣ ಲೆಕ್ಕಾಚಾರ ಹಾಕುತ್ತಿದೆ. ಆದರೆ ಬಾಯಿಗೆ ಬಂದಹಾಗೆ ಮಾತನಾಡುವುದನ್ನೇ ಕಲೆಯಾಗಿಸಿಕೊಂಡಿರುವ ಚಿಕ್ಕಮಗಳೂರಿನ ರೌಡಿ ಸಿಟಿ ರವಿ ಮಾತ್ರ "ನನ್ನನ್ನೇ ಅಧ್ಯಕ್ಷರನ್ನಾಗಿ ಮಾಡಿ'' ಎಂದು ಪಟ್ಟು ಹಿಡಿದು ಕುಳಿತಿದ್ದಾನೆ. ಒಂದು ವೇಳೆ ತನಗೆ ಅಧ್ಯಕ್ಷ ಸ್ಥಾನ ತಪ್ಪಿದರೂ ಸಮಾಧಾನ ಮಾಡಲು ಸಚಿವ ಸ್ಥಾನ ನೀಡಬಹುದು ಎಂಬುದು ರವಿ ರಚ್ಚೆಹಿಡಿಯಲು ಕಾರಣ. ಬಹುಶಃ ಈ ತಂತ್ರಗಾರಿಕೆಯಲ್ಲಿ ರವಿ ಯಶಸ್ವಿಯೂ ಆಗಬಹುದು.

ಇನ್ನು ಮೈಸೂರಿನಲ್ಲಿ ಈ ಬಾರಿ ಸೋತಿರುವ ವಿಜಯಶಂಕರ್ ಹೆಸರನ್ನು ಬೇಕೆಂದೇ ಯಡ್ಡಿ ತೇಲಿ ಬಿಟ್ಟಿರುವುದರಿಂದ ಅವರನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಒಂದು ವೇಳೆ ಈಶ್ವರಪ್ಪ ಬಾಲ ಬಿಚ್ಚಿದರೆ, ರೊಚ್ಚಿಗೆ ಯಡ್ಡಿ ವಿಜಯಶಂಕರ್‌ರನ್ನು ಅಧ್ಯಕ್ಷರನ್ನಾಗಿ ಮಾಡಿ ತಮ್ಮ ಸೇಡು ತೀರಿಸಿಕೊಂಡರೂ ಆಶ್ಚರ್ಯವಿಲ್ಲ. ಜಾತಿ ಲೆಕ್ಕಾಚಾರದಲ್ಲಿ ವಿಜಯಶಂಕರ್ ಅಧ್ಯಕ್ಷರಾದರೂ ಒಂದಿಷ್ಟು ಲಾಭವಿದೆ.

ಇನ್ನು ಧಾರವಾಡದ ಬ್ರಾಹ್ಮಣ ಪ್ರಹ್ಲಾದ್ ಜೋಷಿ ಅತ್ತಿಂದಿತ್ತ ಓಡಾಡುತ್ತಾ ಆರ್‌ಎಸ್‌ಎಸ್‌ನ ಬ್ರಾಹ್ಮಣ ವಟುಗಳ ತಲೆತಿನ್ನುತ್ತಾ ಅಧ್ಯಕ್ಷರಾಗಲು ಹೊರಟಿದ್ದಾರೆ. ಜಾತಿ ಲೆಕ್ಕಾಚಾರವನ್ನೆಲ್ಲಾ ಮರೆತು ಬ್ರಾಹ್ಮಣರಿಗೆ ಅವಕಾಶ ನೀಡಲು ಮುಂದಾದರೆ, ಜೋಷಿಯ ಲಕ್ ಕೂಡ ತಿರುಗಬಹುದು. ಆದರೆ ಹಿಂದುಳಿದ ಜಾತಿಯವರನ್ನೇ ಈ ಬಾರಿ ಅಧ್ಯಕ್ಷರನ್ನಾಗಿ ಮಾಡುವುದರಿಂದ ಹೆಚ್ಚು ಲಾಭವಿದೆ ಎಂಬುದು ಸ್ಪಷ್ಟವಾಗಿರುವುದರಿಂದ ಲಿಂಬಾವಳಿಗೆ ಸ್ಥಾನ ಖಚಿತ ಎಂದೇ ಹೇಳಲಾಗುತ್ತಿದೆ. ಇವರ ರಾಜೀನಾಮೆಯಿಂದ ತೆರವಾಗುವ ಸಚಿವ ಸ್ಥಾನ ಸಿ.ಟಿ. ರವಿ ಪಾಲಾಗಬಹುದು. ಇನ್ನು ಕೃಷ್ಣಯ್ಯಶೆಟ್ಟಿಯ ರಾಜೀನಾಮೆಯಿಂದ ತೆರವಾಗಿರುವ ಸಚಿವ ಸ್ಥಾನವನ್ನು ಜಗದೀಶ್ ಶೆಟ್ಟರ್‌ಗೆ ನೀಡಿ ಯಡ್ಡಿ ಭಿನ್ನಮತೀಯ ಚಟುವಟಿಕೆಗಳಿಗೆ ದೊಡ್ಡ ಮೊಳೆ ಹೊಡೆಯಬಹುದು.

ಏನೇ ಆದರೂ ಯಡ್ಡಿಯ ಅಣತಿಯಂತೆಯೇ ಎಲ್ಲವೂ ನಡೆಯಲಿದೆ. ಏಕೆಂದರೆ ಯಡ್ಡಿ ಈಗ ಬಿಜೆಪಿಯ ಸರ್ವಾಧಿಕಾರಿ!

● ನೀರದ ಬೆಂಗಳೂರು

ಚಾಮರಾಜನಗರ ಅರಣ್ಯ ಇಲಾಖೆಯಲ್ಲಿ ಹರಿನಾಥನ ನುಂಗಾಟ

ಹೆಜ್ಜೆಹೆಜ್ಜೆಗೂ ನುಂಗುವ ಕಾಡುಮೃಗವೊಂದು ಯಳಂದೂರಿನ ಅರಣ್ಯದಲ್ಲಿ ಮೇಯ್ದು ಮೇಯ್ದು ಬುಸುಗುಡುತ್ತಿದೆ. ಅದರ ಹೆಸರು ಹರಿನಾಥ್. ಈತ ಇಲ್ಲಿ ಆರ್.ಎಫ್.ಓ.

ಯಳಂದೂರು ತಾಲ್ಲೂಕಿನ ಸಾಮಾಜಿಕ ವಲಯ ಅರಣ್ಯಾಧಿಕಾರಿಯಾಗಿ ಬಂದು ಕಳೆದ ಮೂರು ವರ್ಷದಿಂದ ಬಿಳಿಗಿರಿ ರಂಗನಾಥನ ಬೆಟ್ಟವನ್ನು ನುಂಗಿ ನೀರು ಕುಡಿಯುತ್ತಿದ್ದಾನೆ.

2008-09ನೇ ಸಾಲಿನಲ್ಲಿ ಯಳಂದೂರಿನ ಸಾಮಾಜಿಕ ಅರಣ್ಯ ವಲಯಕ್ಕೆ ಸರ್ಕಾರದಿಂದ ಬಂದ 20 ಲಕ್ಷ ರೂಗಳನ್ನು ಕಣ್ಣುಚ್ಚಿ ತೆಗೆಯುವುದರೊಳಗೆ ನಿಕಾಲಿ ಮಾಡಿ ಒಗೆದಿದ್ದಾನೆ ಹರಿನಾಥ್. ತನ್ನ ಮೇಲಧಿಕಾರಿ ಡಿಎಫ್‌ಓ ಎಸ್.ಪಿ. ರಾಜು ಅವರ ಅನುಮತಿ ಪಡೆಯದೇ ಇಲಾಖೆಗೆ ಅವಶ್ಯವಿದ್ದ ಸಾಮಗ್ರಿ ಖರೀದಿಸಿದ್ದೇನೆಂದು 20 ಲಕ್ಷ ರೂ. ಡ್ರಾ ಮಾಡಿದ. ಕೊಟೇಷನ್ ಇಲ್ಲದೇ ಕಳಪೆ ಸಾಮಗ್ರಿ ಖರೀದಿಸಿ ಕಮಿಷನ್ ಸ್ವಾಹಾ ಮಾಡಿದ.

ಬಿ.ಆರ್. ಹಿಲ್ಸ್ ಕಾಡಿನ ಸಂಪತ್ತಿನ ಲೂಟಿಯಂತೂ ನಡೆದೇ ಇದೆ. ಹರಿನಾಥನ ಈ ಎಲ್ಲ ಕಳ್ಳಾಟಗಳಿಗೆ ಜೊತೆಯಾಗಿ ನಿಂತವನು ವನಪಾಲಕ ಚಿಕ್ಕಮಾದಯ್ಯ. ಇಷ್ಟಕ್ಕೇ ತಣಿಯದು ಹರಿನಾಥನ ಹಸಿವು. ದಾಸ. ತನ್ನ ವ್ಯಾಪ್ತಿಯ ಅರಣ್ಯವಾಸಿ ಗ್ರಾಮ ಪಂಚಾಯಿತ್‌ಗಳಿಗೆಂದು ಸರ್ಕಾರದಿಂದ ಬರುವ ಲಕ್ಷಾಂತರ ರೂಪಾಯಿ ಅನುದಾನವನ್ನು ತನಗಿಷ್ಟ ಬಂದಂತೆ ಖರ್ಚು ಮಾಡುತ್ತ ದುಂಡಗಾಗುತ್ತಲೇ ಇದ್ದಾನೆ. ಯಳಂದೂರು ತಾಲ್ಲೂಕು ಪಂಚಾಯ್ತಿ 2008-09 ರಲ್ಲಿ ವನಸಂವರ್ಧನೆ ಯೋಜನೆಗೆಂದು ಅರಣ್ಯ ಇಲಾಖೆಗೆ 83 ಸಾವಿರ ರೂ. ನೀಡಿತ್ತು. ಗುಂಬಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ವನಸಂವರ್ಧನೆ ಮಾಡ್ತೀನಿ ಅಂತಾ ಬಂದ ಹರಿನಾಥ್ ಏಕಾಏಕಿ 83 ಸಾವಿರ ರೂ. ಪಡೆದು ಕಾಟಾಚಾರಕ್ಕೆ ನಾಲ್ಕು ಗಿಡ ನೆಟ್ಟಿದ್ದಾನೆ. ಈ 'ಮಹಾನ್' ಕಾರ್ಯದಲ್ಲಿ ಗುಂಬಳ್ಳಿ ಗ್ರಾ.ಪಂ. ಅಧ್ಯಕ್ಷರು, ಕಾರ್ಯದರ್ಶಿಗಳು ಕೂಡಾ ಭಾಗಿಯಾಗಿದ್ದಾರೆ.

ದಿನಗೂಲಿ ಕೆಲಸದವರ ಕೂಲಿಯಲ್ಲೂ ನಾಲಿಗೆ ಚಾಚಿದ 'ಹಿರಿಮೆ' ಈ ಹರಿನಾಥನದು. ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ದಿನಗೂಲಿಗಳಾಗಿರುವ ಪಿ.ಸಿ. ನೌಕರರ ವೇತನದ ಹಣವನ್ನೂ ಗುಳುಂ ಮಾಡಿದ್ದಾನೆ. ಈ ಒಂದು ಹಗರಣದ ತನಿಖೆಯಾದರೆ ಸಾಕು. ಹರಿನಾಥ ಮನೆಯಲ್ಲಿರಬೇಕಾಗುತ್ತದೆ. ಡಿಎಫ್‌ಓ ರಾಜು ಮತ್ತು ಎಪಿಎಫ್ ಪುರುಷೋತ್ತಮರು ಈ ಕಾಡುಗಳ್ಳ ಹರಿನಾಥನನ್ನು ಸರಿದಾರಿಗೆ ತರುವುದು ಸದ್ಯದ ತುರ್ತಾಗಿದೆ.

● ಚಿಕ್ಕಮಾಳಿಗೆ

ಮಂಡ್ಯ ನಗರಸಭೆ: ನ್ಯಾಯ ಕೇಳಿದ್ರೆ ಜೈಲು!

'ನ್ಯಾಯ ಕೇಳಿದ, ಜೈಲು, ಜೈಲಾಗೆ ಹೋಯೇಟು' - ಇದು ಮಂಡ್ಯ ಗುತ್ತಿಗೆ ಪೌರ ರ್ಮಿಕರ ನಿತ್ಯದ ಅಳಲು. ನಾಲ್ಕು ರ್ಷಗಳಿಂದಲೂ ಮಂಡ್ಯ ನಗರಸಭೆಯಲ್ಲಿ ಗೂಟ ಹೊಡೆದುಕೊಂಡಿರುವ ಆಯುಕ್ತ ರಾಮಸ್ವಾಮಿ, ರೇಷನ್ ಕಮಲದ ಅಮಲಿನ ಕೌನ್ಸಿಲರ್‌ಗಳಾದ ಡಿ ನಾಗೇಂದ್ರ, ಬ್ಲ್ಯಾಕ್ ಟಿಕೆಟ್ ನಂಜುಂಡ, ರಿಸ ದಂಧೆಯ ಅಧ್ಯಕ್ಷೆ ನಾಗಮಣಿ ಎಲ್ಲರೂ ರಿ ಮಂಡ್ಯವನ್ನು ಅಕ್ಷರಶಃ ನರಕವನ್ನಾಗಿಸಲು ರಟರುವುದರ ಪರಿಣಾಮವಾಗಿ ರಸಭೆ ಕಾರ್ಮಿಕರು ಭವಿಸಬೇಕಾಗಿ ಬಂದಿರುವ ಸ್ಥಿತಿ.


ನಂಜುಂಡ

ಅವತ್ತು ನಡೆದಿದ್ದಿಷ್ಟು:

ಬರೋಬ್ಬರಿ 130 ಪೌರ ರ್ಮಿಕರು ಇಲ್ಲಿ ಗುತ್ತಿಗೆ ಆಧಾರದಲ್ಲಿ ಕಳೆದ ಎಂಟು ರ್ಷಗಳಿಂದ ದುಡಿಯುತ್ತಾ ಬಿದ್ದಾರೆ. ತಮಗೆ ಸಿಗಬೇಕಾದ ನುಸಮ್ಮತ ಸೌಲಭ್ಯಗಳಿಗಾಗಿ ಕಾಲಕ್ಕೆ ಹೋರಾಟವನ್ನು ಡುತ್ತಲೆ ಕೂಲಿ ಡಿಕೊಂಡು ಬದುಕುತ್ತಿದ್ದಾರೆ. ಈ ಬಾರಿಯೂ ರ್ಕಾರದ ಆದೇಶದನ್ವಯ ಗುತ್ತಿಗೆ ಪೌರ ರ್ಮಿಕರಿಗೆ ದಿನವೊಂದಕ್ಕೆ 120 ರೂ. ಕೂಲಿ ಡಬೇಕು ಎಂಬ ಬೇಡಿಕೆಯಿಟ್ಟು ಪೊರಕೆ ತ್ತಿ ಚಳವಳಿಗೆ ನಿಂತಿದ್ದರು. ಚಳವಳಿ ಆರುದಿನ ನಡೆದರೂ ಕಮಿಷನರ್ ರಾಮಸ್ವಾಮಿ ಅತ್ತಹೋಗಿ ಯಾಕೆ ಅಂತಲೂ ಕೇತಾಡಲಿಲ್ಲ. ಯಾವಾಗ ನಗರಸಭೆಯ ಕಾರಿಗಳು ಪೌರ ಕಾರ್ಮಿಕರ ಕೂಗಿಗೆ ಗೊಡಲಿಲ್ಲವೋ ಅವರ ಜಡ ಚರ್ಮಕ್ಕೆ ತಾಗಿಸುವುದಕ್ಕಾಗಿ ಪೌರ ಕಾರ್ಮಿಕರು ನಗರಸಭೆಗೆ ಮುತ್ತಿಗೆ ಹಾಕಿ ಕುಂತರು. ಆಗಲೂ ಆಯುಕ್ತ ರಾಮಸ್ವಾಮಿ ಅತ್ತ ಯಲಿಲ್ಲ, ಅಷ್ಟೊತ್ತಿಗೆ ಅದೆಲ್ಲಿದ್ದಳೋ ನಗರಸಭಾಧ್ಯಕ್ಷೆ ನಾಗಮಣಿ. ಕಾರಿನಿಂದಿಳಿದವಳೆ ಟೆ ಬಡಿಯುತ್ತಾ ಪ್ರತಿಭಟನೆಯಲ್ಲಿ ತೊಡಗಿದ್ದ ಪೌರ ಕಾರ್ಮಿಕರಿಗೆ ದನಕ್ಕೆ ಯುವಂತೆ ಬಡಿಯಲು ಶುರು ಮಾಡಿದಳು. ಕಡೆಗೆ ಅವೆಲ್ಲ ಶಾಂತಿಯಾಗೋ ತ್ತಿಗೆ ಆಯುಕ್ತ ರಾಮಸ್ವಾಮಿ, ಕೌನ್ಸಿಲರ್ ನಾಗೇಂದ್ರ, ನಂಜುಂಡ ದೊಡ್ಡಿ ಶಂಕ್ರ ಎಲ್ಲರೂ ಡಿವೈಎಸ್ಪಿ ದಿನೇಶ್‌ಗೆ ಸರಿಯಾದೊಂದು ಕೌಂಟ್ ಮಡಗಿ ಕಾರ್ಮಿಕರನ್ನು ಚದುರಿಸಿಕೊಳ್ಳಲು' ಹೇಳಿಬಿಟ್ಟರು. ಅಲ್ಲಿಂದಾಚೆಗೆ ಪೊಲೀಸರು ಅಕ್ಷರಶಃ ಕಾರ್ಮಿಕರನ್ನು ಥಳಿಸುವುದಕ್ಕೆ ಪ್ರಾರಂಭಿಸಿದರು.


"ಇಲ್ಲಿ ರೂರಲ್ ಸರ್ಕಲ್ ಇನ್ಸ್‌ಪೆಕ್ಟರ್‌ನಾಗಿರುವಾಗಲೇ 10 ರೂಪಾಯಿಗಾಗಿ ಮರಳು ಲಾರಿಗೂ ಕೈಬೀಸಿದ ಡಿವೈಎಸ್ಪಿ ದಿನೇಶ್ ಫೀಲ್ಡಿಗಿಳಿದ. ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದ ಗುತ್ತಿಗೆ ಪೌರಕಾರ್ಮಿಕರನ್ನು ಚಚ್ಚುತ್ತಾ, ವ್ಯಾನು ಹತ್ತಿಸಿಕೊಂಡು ಹೋದ. ಹೀಗೆ, ಬರೋಬ್ಬರಿ 120ಕ್ಕೂ ಹೆಚ್ಚು ಪೌರಕಾರ್ಮಿಕರು ಜೈಲು ಪಾಲಾದರು. ತಿರುಗಿ ಮಾರನೆಯ ದಿನವೇ ಎಲ್ಲರಿಗೂ ಜಾಮೀನು ದಕ್ಕಿದರೂ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಎಂ.ಬಿ.ನಾಗಣ್ಣ ಜೈಲಿನಲ್ಲಿರುವಂತೆ ನೋಡಿಕೊಳ್ಳುವಲ್ಲಿ ದಿನೇಶ್ ಯಶಸ್ವಿಯಾದ. ನಾಗಣ್ಣರ ಮೇಲೆ ಹಳೆಯ ಕಾವೇರಿ ಚಳುವಳಿಗೆ ಸಂಬಂಧಪಟ್ಟ ಪ್ರಕರಣವೊಂದು ಬಾಕಿಯಿತ್ತು. ಅದನ್ನೇ ನೆಪಮಾಡಿಕೊಂಡು ಆ ಪ್ರಕರಣಕ್ಕೆ ಜೀವ ಕೊಟ್ಟು ಅವರ ಮೇಲೆ ಬಾಡಿವಾರೆಂಟ್ ಕೊಡಿಸಿ ನಾಗಣ್ಣ ಜೈಲಿನಲ್ಲೇ ಇರುವಂತೆ ನೋಡಿಕೊಂಡ. ಆ ಮೂಲಕ ಚಳವಳಿನಿರತ ಕಾರ್ಮಿಕರಿಗೆ ಮಾರ್ಗದರ್ಶನ ಮಾಡಬಲ್ಲ ನಾಯಕರೇ ಇಲ್ಲದಂತೆ ನೋಡಿಕೊಂಡ.

ಆದರೂ ಪೌರ ಕಾರ್ಮಿಕರು ಮಾತ್ರ ಚಳವಳಿ ನಿಲ್ಲಿಸಲಿಲ್ಲ. ಅಮಾಯಕ ಪೌರ ಕಾರ್ಮಿಕರ ಮೇಲೆ ಲಾಠೀ ಚಾರ್ಜ್ ಆದಮೇಲೆ, ಅದನ್ನು ವಿರೋಧಿಸಿ ರಾಜ್ಯದ ಉಳಿದ ಕಡೆಯೂ ಮುಷ್ಕರಗಳು ನಡೆದ ಮೇಲೆ ಹಲವಾರು ಪ್ರಗತಿಪರ ಸಂಘಟನೆಗಳು


ಪ್ರತಿಭಟನೆಕಾರರ ಮೇಲೆ ದೌರ್ಜನ್ಯ.....

ಪೌರಕಾರ್ಮಿಕರ ಪರ ಬೀದಿಗಿಳಿದಿವೆ. ಈಗ ಈ ಚಳವಳಿ ಪ್ರಾರಂಭವಾಗಿ ಹತ್ತು ದಿನ ಕಳೆದು ಇನ್ನೂ ಮುಂದುವರೆಯುತ್ತಲಿದೆ. ಯಾವೊಬ್ಬ ಪೌರಕಾರ್ಮಿಕನೂ ಮಂಡ್ಯ ನಗರದ ಬೀದಿಗುಡಿಸುವ, ಚರಂಡಿ ಸ್ವಚ್ಛಗೊಳಿಸುವ ಕಾರ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ನಿರತರಾಗಿದ್ದಾರೆ. ಪರಿಣಾಮವಾಗಿ, ಮಂಡ್ಯದ ತುಂಬಾ ಕಸಕಡ್ಡಿಗಳು ಎರಚಾಡುತ್ತಿವೆ, ಸಾಂಕ್ರಾಮಿಕ ಕಾಯಿಲೆ ಹಬ್ಬುವ ಭೀತಿ ಎದುರಾಗುತ್ತಿದೆ. ಹೀಗಿದ್ದಾಗ್ಯೂ ನಗರಸಭಾ ಕಮೀಷನರ್ ರಾಮಸ್ವಾಮಿಯಾಗಲೀ, ಶಾಸಕ ಎಂ.ಶ್ರೀನಿವಾಸ್ ಆಗಲೀ ಅತ್ತ ಕಡೆ ಕಣ್ಣೆತ್ತಿ ನೋಡುತ್ತಿಲ್ಲ. ಜೆ.ಡಿ.ಎಸ್. ಕೌನ್ಸಿಲರ್‌ಗಳು ನಾವು ಪೌರಕಾರ್ಮಿಕರ ಪರ ಎಂದು ಬಾಯ್ಮಾತಿನಲ್ಲಿ ಹೇಳಿದರೆ ಹೊರತು ಬೀದಿಗಿಳಿಯಲಿಲ್ಲ.

ಈಗಾಗಲೇ ನೂರಾರು ಕೋಟಿ ರೂಪಾಯಿ ಹಗರಣಗಳನ್ನು ನಡೆಸಿ ಕುಖ್ಯಾತನಾಗಿರುವ ಕಮೀಷನರ್ ರಂಗಸ್ವಾಮಿಗೆ ಖುದ್ದು ನಗರಾಭಿವೃದ್ಧಿ ಕಾರ್ಯದರ್ಶಿ ಜಾವೇದ್ ಅಕ್ತರ್ ಅವರೇ ಅಮಾನತ್ತು ಆದೇಶ ಹೊರಡಿಸಿದ್ದಾರೆ. ಆದರೂ ಅದ್ಯಾವ ಗಿಮಿಕ್‌ನಿಂದಲೊ ಏನೋ ಮಂಡ್ಯ ನಗರಸಭೆಯಲ್ಲಿ ನಿರಾತಂಕವಾಗಿ ಮುಂದುವರಿಯುತ್ತಿದ್ದಾನೆ. ಪೌರಾಡಳಿತ ಸಚಿವ ಬಾಲಚಂದ್ರ ಜಾರಕಿ ಹೊಳಿಯ ಪಿ.ಎ. ಪಿ.ಕುಮಾರ್ ಎಂಬುವವನಿಗೆ ಕಾಲಕಾಲಕ್ಕೆ ಅಮೇಧ್ಯ ತಿನ್ನಿಸುತ್ತಾ ಉಳಿದುಕೊಂಡಿರುವ ರಾಮಸ್ವಾಮಿಯ ವಿರುದ್ಧ ಮಂಡ್ಯದ ಜನತೆ ರೊಚ್ಚಿಗೆದ್ದಿದ್ದಾರೆ.


ರಾಮಸ್ವಾಮಿ

ನಗರಸಭೆಯ ಅಂಗಡಿ ಮಳಿಗೆಗಳಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ಕಡೆಗೊಂದು ದಿನ ರಶೀದಿ ಪುಸ್ತಕವೇ ಕಾಣೆಯಾಗಿದೆಯೆಂದು ಪೊಲೀಸರಿಗೆ ದೂರು ಕೊಟ್ಟು ಲಕ್ಷಾಂತರ ರೂಪಾಯಿ ಗುಳುಂ ಮಾಡಿದ ಶಿವರಾಜ್‌ನಂಥ ಖದೀಮರು ಈಗ ಆಯಕಟ್ಟಿನ ಜಾಗಗಳಲ್ಲಿ ಕುಂತಿದ್ದಾರೆ. ಮೊನ್ನೆಮೊನ್ನೆಯಷ್ಟೆ ಕೊಲೆಯಾದ ರಾಬರಿ ಕಿಟ್ಟಿಯ ಸಹಚರ ಕೌನ್ಸಿಲರ್ ದೊಡ್ಡಿ ಶಂಕ್ರ ಎರಡು ಕೈಯ್ಯಲ್ಲೂ ಉಣ್ಣಲು ಶುರುಮಾಡಿದ್ದಾನೆ. ರೌಡಿ ನಾಗೇಂದ್ರನಿಗೆ ನಗರಸಭೆಯಲ್ಲಿ ನಿತ್ಯ ದಾಸೋಹ ಸಾಂಗವಾಗಿಯೆ ನಡೆದಿದೆ. ರಾತ್ರೋರಾತ್ರಿ ಬಿಲ್‌ಗಳನ್ನು ತಿದ್ದುತ್ತಾ ದಾಖಲೆಗಳನ್ನು ಕೆರೆಯುತ್ತಾ ಕುಂತಿರುವ ರಾಮಸ್ವಾಮಿಯನ್ನು ಸರ್ಕಾರವೇ ವಜಾಮಾಡದಿದ್ದರೆ ಪೌರಕಾರ್ಮಿಕರೆ ರಾಮಸ್ವಾಮಿಯನ್ನು ಶಾಶ್ವತವಾಗಿ ವಜಾಮಾಡಿಯಾರು.

● ವರದಿಗಾರ

ಭಂಡ ಆಯುಕ್ತನು...! ಪುಂಡ ಅಧ್ಯಕ್ಷೆಯು...!

[illegible] ಸೇರಿಕೊಂಡರ ನಗರಸಭೆಯೊಂದು ಯಾವ ರೀತಿ ಅಧ್ವಾನ [illegible]

ಮಂಡ್ಯ ಕಂಟ್ರೋಲಿಗೆ ತಗೋತಾರಂತೆ 'ರವಿ ಹುಡುಗ್ರು'!

ಪಾಪ, ಇವರಿಗೆ ಹೆಸರುಗಿಸರು ಏನಿಲ್ಲ. ಇವರು ಒಟ್ಟಿ 'ರವಿ ಹುಡುಗ್ರು.' ಇವರಿಗೆ ಮಂಡ್ಯದ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿ ಸುಖ್ ಕಿರುಕುಳ ನೀಡ್ತಾ ಇದ್ದಾನಂತೆ. ಅದಕ್ಕೇ [illegible] ರವಿಹುಡುಗ್ರು ಬೆಂಗಳೂರು ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರಿಂದ ಹಿಡಿದು ಮಂಡ್ಯದ ಕಾನ್ಸ್‌ಟೇಬಲ್‌ವರೆಗೂ ಪತ್ರ ಬರೆದು ರೋದಿಸುತ್ತಿದ್ದಾರೆ. ಎಲ್ಲಾ ಪತ್ರಿಕಾಲಯಗಳಿಗೂ ತಮ್ಮ 'ಅಳಲನ್ನು' ಬರೆದು ಕಳಿಸಿದ್ದಾರೆ.

ಅಂದಂಗೆ ಇಲ್ಲಿ [illegible] ರವಿ ಯಾರಪ್ಪ [illegible] ಈ ಹುಡುಗ್ರ ಗುರು ಅಂತೆ. [illegible] ರವಿ [illegible] ಇಲ್ಲಾ [illegible] ಅಂತಾ ನೋಡಿದರೆ ಇವನೊಬ್ಬ ರೌಡಿ. [illegible] ಬರ್ಬರವಾಗಿ ಕೊಲೆಯಾಗಿ [illegible] ಜಡೇಜಾ ರವಿ? ಅವನ ಶಿಷ್ಯ ಮಹಾಶಯರು ಈ ರವಿ ಹುಡುಗ್ರು.

ಮಂಡ್ಯ ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿ ತಂಡ ಸುಮ್‌ಸುಮ್ನೇ ರವಿಹುಡುಗ್ರ ಮೇಲೆ ಕೇಸ್ ಹಾಕ್ತಿದೆಯಂತೆ, ರವಿ ಕೊಲೆ ಮಾಡಿದವ್ರಿಗೆ ಫುಲ್ ಸಪೋರ್ಟು ಮಾಡ್ತಿಯಂತೆ. ರವಿಹುಡುಗ್ರ ಮೇಲೆ ಸುಳ್ಳು ದರೋಡೆ ಕೇಸ್ ಹಾಕ್ತಿದೆಯಂತೆ. ಆದರೆ ಅಪೋಜಿಟ್ ಪಾರ್ಟಿ ಅಶೋಕ್ ಪೈ ಕಡೆಯೋರ್ ಮೇಲೇ ಕೇಸ್ ಹಾಕಿಲ್ಲವಂತೆ. ಅಶೋಕ್ ಪೈ ಚೀರನಹಳ್ಳಿ ಚೇತನ್ ಜೈಲ್ನಲ್ಲಿದ್ದಾಗ ನಾಗಣ್ಣನ ತಮ್ಮ ಮಹೇಶ್, ಗುರುರಾಜ ಕಾಂಟಿನೆಂಟಲ್ ದೇವ್ರುಗೆ ಹೇಳಿ ಜೈಲಿಗೆ ಮೂರು ಹೊತ್ತಿನ ಊಟ ಕಳಿಸಿದ್ದು ಇದೇ ಸರ್ಕಲ್ ಇನ್ಸ್‌ಪೆಕ್ಟರು ಜಯಮಾರುತಿಯಂತೆ. ರವಿ ಹುಡುಗ್ರುಗೆ ಇದು ಶಾನೆ ಬೇಜಾರ ತರಿಸಿಬಿಟ್ಟದೆ. ರೌಡಿ ಕಿಟ್ಟಿಯನ್ನು ಕೊಂದ ಆರೋಪ ಹೊತ್ತಿರುವ ಎಂ.ಡಿ. ಸತೀಶ್ ಮುಂತಾದವರನ್ನು ಕೇಸ್ನಲ್ಲಿ 'ಫಿಟ್ಟು' ಮಾಡದೇ ಇದ್ದಾಗ ರವಿ ಹುಡುಗ್ರುಗೆ ಕೋಪ ಬರದೇ ಇರುತ್ತಾ?

ರವಿ ಹುಡುಗ್ರ ಅಳಲನ್ನು ಅವರ ಮಾತಲ್ಲೇ ಕೇಳಿ:

"ನಮ್ಮ ಗುರು ರವಿ ಕೊಲೆಯಾಯಿತು. ನಾಗಣ್ಣನನ್ನು ಮುಗಿಸಿ ಶಿವ ಜೈಲಿಗೋಗಿ ನಮಗೆ ಯಾರೂ ದಿಕ್ಕಿಲ್ಲದಂತಾಗಿ ಪರದೇಶಿಗಳಂತೆ ಯಾರ ಕಣ್ಣಿಗೂ ಕಾಣದಂತೆ ನಾವು ತಿರುಗಾಡ್ತಾ ಇದ್ದೀವಿ. ನಾವು ಯಾರ ತಂಟೆಗೂ ಹೋಗದೇ ಇದ್ದರೂ ಜಯಮಾರುತಿ ಮಾತ್ರ ಸುಳ್ಳು ಕೇಸ್ನಲ್ಲಿ ಫಿಟ್ ಮಾಡಿ ನಮ್ಮನ್ನು ನೆಮ್ಮದಿಯಾಗಿ ಬದುಕಲು ಬಿಡುತ್ತಿಲ್ಲ, ನಾವೂ ಎಷ್ಟು ಅಂತಾ ಸಹಿಸಿಕೊಳ್ಳುವುದು. ನಾವು ಎರಡು ಸಾರಿ ಜೈಲಿಗೋಗಿ ಶಿಕ್ಷೆ ಅನುಭವಿಸಿ ಬಂದಿದ್ದೇವೆ. ಇನ್ನು ಮುಂದೆ ಜಯಮಾರುತಿ ವಿನಾಕಾರಣ ತೊಂದರೆ ನೀಡಿದರೆ ಸಹಿಸಲ್ಲ, ನಾವು ಫೀಲ್ಡಿಗೆ ಇಳಿಬೇಕಾಗುತ್ತೆ, ರೌಡಿಸಂ ಮಾಡಬೇಕಾಗುತ್ತದೆ, ಮಂಡ್ಯ ಜಿಲ್ಲೆಯನ್ನು ಮತ್ತೆ ನಮ್ಮ ಕಂಟ್ರೋಲಿಗೆ ತೆಗೆದುಕೊಳ್ಳಬೇಕಾಗುತ್ತದೆ...

"....ದಯವಿಟ್ಟು ಜಯಮಾರುತಿಯನ್ನು ಕರೆಸಿ ಬುದ್ಧಿ ಹೇಳಿ ನಮಗೆ ನ್ಯಾಯ ದೊರಕಿಸಿ....." ಹೀಗೆ ಶಂಕರ್ ಬಿದರಿಯವರ ಮೊರೆ ಹೋಗಿದ್ದಾರೆ ಈ ರವಿಹುಡುಗ್ರು! ಆದರೆ ಬಿದರಿಯವರು ಹೇಗೆ ಗುರ್ತಿಸೋದು ಈ ಹೆಸರಿಲ್ಲದ ರವಿಹುಡುಗ್ರನ್ನ? ಜಯಮಾರುತಿ ಹೀಗೆ ಬೇರಾದ ಕ್ರಿಮಿನಲ್‌ಗಳಿಗೆ ಮಾತ್ರ ಊಟ ಕಳಿಸಿ ತಾರತಮ್ಯ ಮಾಡುತ್ತದೆ?

ನೂರು, ಸಾವಿರ ಲೆಕ್ಕದಲ್ಲಿ ಜಯಮಾರುತಿ ಪ್ರಾಮಾಣಿಕ! ಆದರೆ ಲಕ್ಷಗಳ ಲೆಕ್ಕದ ಮಾತು ಬಂದಾಗ ಊಸರವಳ್ಳಿ. ಈತ ಹಿಂದೆ ಜಡೇಜಾ ರವಿ ಗುಂಪನ್ನು ಬೆಂಬಲಿಸಿದ್ದೂ ಇದೆ. ಟೋಟಲಿ ಈತ 'made for money' ಜಯಮಾರುತಿಯಂತಹ ಪೊಲೀಸ್ ಅಧಿಕಾರಿಗಳಿಗೆ ಉನ್ನತಾಧಿಕಾರಿಗಳು ಪಾಠ ಕಲಿಸಬೇಕು. ಆ ಮಾತು ಬೇರೆ. ಆದರೆ ಜಡೇಜಾ ರವಿಯ ಶಿಷ್ಯಂದಿರ ಈ ಮನವಿ ಓದಿದಾಗ ನಗೆ ಬರುತ್ತದಷ್ಟೇ.

'ನಾವು ಪರದೇಶಿಗಳಾಗಿಬಿಟ್ಟ' ಎಂದವರು ಪ್ಲ್ಯಾಪು ಮೊರೆ ಹಾಕುವುದು, ತಮ್ಮ ವಿರೋಧಿಗಳಿಗೆ ಜೈಲಿಗೆ ಊಟ ಕಳಿಸಿದ್ದಕ್ಕೆ ಕರುಬುವುದು ಎಲ್ಲ ಮನರಂಜನೆ ನೀಡಬಲ್ಲವೇ ಹೊರತು ಮಂಡ್ಯ ಜನರಲ್ಲಿ ಈ 'ಮಾಜಿ' ರೌಡಿಗಳ ಬಗ್ಗೆ ಅನುಕಂಪ ಮೂಡಿಸಲಾರವು.


ಅದಿರಲಿ, ಬಿದರಿಯವರು ಇವರ ಮನವಿಗೆ ಸ್ಪಂದಿಸದಿದ್ದರೆ, ಈ ಹುಡುಗ್ರು ಮತ್ತೆ ಫೀಲ್ಡಿಗಿಳಿಯುತ್ತಾರಂತೆ. ಮಂಡ್ಯ ಜಿಲ್ಲೆಯನ್ನು ಮತ್ತೆ ಅವರ ಕಂಟ್ರೋಲಿಗೆ ತಗೋತಾರಂತೆ!!

ಛೇಛೇ ರವಿ ಹುಡುಗ್ರೆ.. ಅಂದ ಹಾಗೆ ಇಷ್ಟೆಲ್ಲ ಬರೆಯುವ ನೀವು ನಿಮ್ಮ ಹೆಸರುಗಳನ್ನೇ ಬರೆದಿಲ್ಲವಲ್ಲ!

Anyhow good luck ರವಿ ಹುಡುಗ್ರೆ ಅಂತ ಈಗ ನಾವು ಹೇಳುವುದಷ್ಟೇ.....

● ಮಲ್ಲಿ


ಇವು ಆತ್ಮಹತ್ಯೆಗಳಲ್ಲ ಸರ್ಕಾರ ಮಾಡುತ್ತಿರುವ ಕೊಲೆಗಳು!





ಆಗ ಗೊಬ್ಬರ ಕೇಳಿದ ಅನ್ನದಾತನಿಗೆ ಗುಂಡೇಟು ನೀಡಿದ ಯಡಿಯೂರಪ್ಪನ ಬಿಜೆಪಿ ಸರ್ಕಾರ ಈಗ ಪ್ರವಾಹದಿಂದ ಮನೆಮಠ, ಬೆಳೆಗಳನ್ನು ಕಳೆದುಕೊಂಡು ಕಂಗಾಲಾಗಿರುವ ಉತ್ತರ ಕರ್ನಾಟಕದ ರೈತರಿಗೆ ಸರಿಯಾದ ಪರಿಹಾರ ಕೊಡದೆ ಅವರನ್ನು ಆತ್ಮಹತ್ಯೆಯ ಕೂಪಕ್ಕೆ ದೂಡುತ್ತಿದೆ. ಸತತ ಐದು ವರ್ಷ ಬರಗಾಲದಿಂದ ಕಂಗೆಟ್ಟು ಸಾಲದ ಶೂಲಕ್ಕೆ ಬಲಿಯಾಗುತ್ತಿದ್ದ ರೈತ ಈ ಬಾರಿ ಅಕಾಲಿಕವಾಗಿ ಎದುರಾದ ಭೀಕರ ಪ್ರವಾಹದಿಂದ ತತ್ತರಿಸಿಹೋಗಿದ್ದಾನೆ. ಕಷ್ಟಪಟ್ಟು ದುಡಿದು ಬೆಳೆಸಿದ ಪೈರು ತನ್ನ ಸಾಲಸೋಲವನ್ನೆಲ್ಲಾ ತೀರಿಸಿ ತನ್ನ ಬದುಕನ್ನು ಹಸನು ಮಾಡುತ್ತದೆ ಎಂದುಕೊಂಡಿದ್ದರೆ. ಬೆಳೆದು ನಿಂತ ಫಸಲೆಲ್ಲಾ ತನ್ನ ಕಣ್ಣೆದುರಿಗೇ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದನ್ನು ಕಣ್ಣಾರೆ ಕಂಡು ಮಮ್ಮಲ ಮರುಗುತ್ತಿದ್ದಾನೆ. ಮಾಡಿದ ಸಾಲ ತೀರಿಸಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಎದುರಾಗಿರುವುದರಿಂದ ಜೀವನ ವಿಡೀ ಸಾಲಗಾರರ ಬಾಧೆಗೆ ಸಿಕ್ಕಿ ನರಳುವುದಕ್ಕಿಂತ ಸಾಯುವುದೇ ಲೇಸೆಂದು ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ.

ಇಂಥ ಸಂದರ್ಭದಲ್ಲಿ ಪ್ರಜೆಗಳ ನೋವಿಗೆ ಮಿಡಿಯುವ ಸರ್ಕಾರವಿದ್ದಿದ್ದರೆ ದಾರುಣ ಪರಿಸ್ಥಿತಿಯಲ್ಲಿ ನಲುಗುತ್ತಿರುವ ಅನ್ನದಾತನಿಗೆ ಆತ್ಮವಿಶ್ವಾಸ ಕೊಟ್ಟು ಆತನನ್ನು ಮೇಲೆತ್ತುತ್ತಿತ್ತು, ಆದರೆ ಯಡಿಯೂರಪ್ಪನಿಗೆ ಈ ನಾಡಿನ ರೈತರ ಬಗ್ಗೆ ಅದೇನು ದ್ವೇಷವೋ ಗೊತ್ತಿಲ್ಲ. ಬೆಂಗಳೂರನ್ನು ಸಿಂಗಾಪೂರ್ ಮಾಡುವುದಕ್ಕೆ ದುಡ್ಡಿದೆ. ರಾಜ್ಯದ ಮಂತ್ರಿಮಹೋದಯರು ಐಶಾರಾಮಿ ಜೀವನ ನಡೆಸುವುದಕ್ಕೆ ದುಡ್ಡಿದೆ. ಕೇವಲ ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಷ್ಟು ದುಡ್ಡಿದೆ. ಆದರೆ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ಕೊಡುವುದಕ್ಕೆ ದುಡ್ಡಿಲ್ಲ. ಇದು ಯಡಿಯೂರಪ್ಪನ ಸರ್ಕಾರ ಆತ್ಮವಿಶ್ವಾಸ ಕಳೆದುಕೊಂಡು ಸಾವಿನಂಚಿನಲ್ಲಿ ಬಂದು ನಿಂತಿರುವ ರೈತರ ನೋವಿಗೆ ಸ್ಪಂದಿಸುತ್ತಿರುವ ರೀತಿ.




ಯಡ್ಯೂರಪ್ಪ

ಸರ್ಕಾರದ ಬಳಿ ಸಾಕಷ್ಟು ದುಡ್ಡಿಲ್ಲ ಎಂಬ ಕಾರಣಕ್ಕೆ ಹತ್ತು ಸಾವಿರ ಕೋಟಿ ರೂಪಾಯಿ ದುಡ್ಡು ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಯಡಿಯೂರಪ್ಪ ಮನವಿ ಸಲ್ಲಿಸಿದರು. ಕೇಂದ್ರ ಸರ್ಕಾರ ತುರ್ತಾಗಿ ಒಂದು ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೂ ಆಯಿತು. ಅಲ್ಲದೇ ಯಡಿಯೂರಪ್ಪ ಮತ್ತಿತರ ಮಂತ್ರಿಮಹೋದಯರು ಬೆಂಗಳೂರಿನ ಬೀದಿಗಳಲ್ಲಿ ಜನರಿಂದ ಹಣ ಸಂಗ್ರಹಿಸಿಕೊಂಡು ಬಂದರು. ಆದರೆ ನೆರೆ ಪರಿಹಾರಕ್ಕಾಗಿ ಸಂಗ್ರಹವಾದ ದುಡ್ಡು ಮಾತ್ರ ಅರ್ಧಕ್ಕರ್ಧ ರಾಜಕಾರಣಿಗಳ, ಅಧಿಕಾರಿಗಳ ಜೇಬು ಸೇರುತ್ತಿದೆಯೇ ಹೊರತು ಕಣ್ಣೀರಿಡುತ್ತಿರುವ ಸಂತ್ರಸ್ತರಿಗೆ ತಲುಪುತ್ತಿಲ್ಲ ಎಂಬುದು ನಂಬಲು ಕಷ್ಟವಾದರೂ ನಂಬಲೇ ಬೇಕಾದ ಸತ್ಯ. ಶಾಸಕರು, ಸಂಸದರು, ಅಧಿಕಾರಿಗಳು 'ಅಲ್ಲಿ ಅಷ್ಟು ಹಂಚಿದ್ದೇವೆ', 'ಇಲ್ಲಿ ಇಷ್ಟು ಹಂಚಿದ್ದೇವೆ', 'ಅಲ್ಲಿ ಸೀರೆ-ಪಂಚೆ ಕೊಟ್ಟಿದ್ದೇವೆ', 'ಇಲ್ಲಿ ಚಾದ್ದರ್-ಕಂಬಳಿ ಕೊಟ್ಟಿದ್ದೇವೆ' ಎಂತೆಲ್ಲಾ ಕೇವಲ ಲೆಕ್ಕಪುಸ್ತಕದಲ್ಲಿ ತೋರಿಸಿ ಪರಿಹಾರಕ್ಕಾಗಿ ಬಂದ ದುಡ್ಡನ್ನು ನೇರವಾಗಿ ಗುಳುಂ ಮಾಡುತ್ತಿದ್ದಾರೆ. ಸಂತ್ರಸ್ತರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿ ತಮ್ಮ ಜೇಬು ತುಂಬಿಸಿಕೊಳ್ಳುತ್ತಿರುವ ಈ ರಾಜಕಾರಣಿಗಳು ಮತ್ತು ಅಧಿಕಾರಿಗಳು ಇಂಥ ಪ್ರವಾಹ ಆಗಾಗ ಬರುತ್ತಿರಲಿ ಎಂದು ಆಶಿಸುತ್ತಿರಬಹುದೇನೋ? ತಮಗೆ ನ್ಯಾಯಯುತವಾಗಿ ಸೇರಬೇಕಾದ ಪರಿಹಾರದ ಹಣವನ್ನು ಅಧಿಕಾರಿಗಳು, ರಾಜಕಾರಣಿಗಳು ನುಂಗುತ್ತಿರುವ ಪರಿಯನ್ನು, ಸಂತ್ರಸ್ತರ ಪರವಾಗಿ ಮಾತನಾಡುತ್ತಲೇ ಈ ಖದೀಮರಿಗೆ ಬೆಂಬಲವಾಗಿ ನಿಂತಿರುವ ಯಡಿಯೂರಪ್ಪನ ಸರ್ಕಾರದ ಸೋಗಲಾಡಿತನವನ್ನೂ ಕಣ್ಣಾರೆ ನೋಡುತ್ತಿರುವ ರೈತರು ಸರ್ಕಾರದ ಮೇಲೆ ಇಟ್ಟಿದ್ದ ಕನಿಷ್ಠ ಭರವಸೆಯನ್ನೂ ಈಗ ಕಳೆದುಕೊಂಡಿದ್ದಾರೆ. ಪರಿಣಾಮವಾಗಿ ಬೇರೆ ದಾರಿ ಕಾಣದೆ ಒಬ್ಬರಾದ ಮೇಲೊಬ್ಬರಂತೆ ಆತ್ಮಹತ್ಯೆಯ ದಾರಿ ಹಿಡಿಯುತ್ತಿದ್ದಾರೆ.

2004-05ರಲ್ಲಿ ಇಂತಹುದೇ ಪರಿಸ್ಥಿತಿ ನಿರ್ಮಾಣವಾಗಿತ್ತು, ಉತ್ತರ ಕರ್ನಾಟಕದ ರೈತರು ಬರಗಾಲದಿಂದ ತತ್ತರಿಸಿದ್ದರು. ಸರ್ಕಾರದಿಂದ ಯಾವುದೇ ಪರಿಹಾರ ಸಿಗದಿದ್ದಾಗ, ಮಾಡಿದ ಸಾಲವನ್ನು ತೀರಿಸುವುದಾದರೂ ಹೇಗೆಂಬ ಚಿಂತೆಗೀಡಾದ ರೈತರು ಬೇರೆ ದಾರಿ ಕಾಣದೆ ಸಾಲು ಸಾಲಾಗಿ ಆತ್ಮಹತ್ಯೆಯ ದಾರಿ ಹಿಡಿದಿದ್ದರು. ಹಾವೇರಿ, ಬೆಳಗಾವಿ ಜಿಲ್ಲೆಗಳಲ್ಲಿ ಸುಮಾರು 50 ಜನರು ಆತ್ಮಹತ್ಯೆಗೆ ಶರಣಾಗಿದ್ದರೆ ಧಾರವಾಡ ಜಿಲ್ಲೆಯೊಂದರಲ್ಲೇ ಸುಮಾರು 75 ಜನ ನೇಣಿಗೆ ಕೊರಳೊಡ್ಡಿದ್ದರು. ಆಗ ಬರಗಾಲ, ರೈತರಿಗೆ ಸಾಲಕೊಟ್ಟ ಮಾರ್ವಾಡಿ ಶೇಟುಗಳು, ಬ್ಯಾಂಕುಗಳು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ರೈತರ ನೋವಿಗೆ ಸ್ಪಂದಿಸದ ಸರ್ಕಾರ ಸೇರಿಕೊಂಡು ನೂರಾರು ರೈತರನ್ನು ಬಲಿತೆಗೆದುಕೊಂಡಿದ್ದರೆ ಈಗ ಪ್ರವಾಹ ಮತ್ತು ನೋವಿಗೆ ಮಿಡಿಯದ ಯಡಿಯೂರಪ್ಪನ ಸಂವೇದನಾರಹಿತ ಸರ್ಕಾರ ಸೇರಿಕೊಂಡು ಅದೇ ರೈತ ಸಮುದಾಯವನ್ನು ಬಲಿತೆಗೆದುಕೊಳ್ಳುತ್ತಿವೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ನಡೆದ ಆತ್ಮಹತ್ಯೆಗಳ ಒಂದೊಂದು ಪ್ರಕರಣವನ್ನು ನೋಡಿದರೂ ಇದು ಸರಳವಾಗಿ ಅರ್ಥವಾಗುತ್ತದೆ.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಕಳಸ ಗ್ರಾಮದ ವಿರುಪಾಕ್ಷಪ್ಪ ತನಗಿದ್ದ ಒಂದು ಎಕರೆ ಜಮೀನಿನಲ್ಲಿ ಕಷ್ಟಪಟ್ಟು ದುಡಿಯುತ್ತಾ ಹೆಂಡತಿ, ತನ್ನಿಬ್ಬರು ಮಕ್ಕಳನ್ನು ಸಾಕುತ್ತಿದ್ದ. ಈ ಬಾರಿ ಮಳೆಯೂ ಚೆನ್ನಾಗಿ ಬಿದ್ದು ಫಸಲೂ ಉತ್ತಮವಾಗಿ ಬರುತ್ತದೆಂಬ ನಂಬಿಕೆಯಿಂದ ಸ್ಥಳೀಯ ಕರ್ನಾಟಕ ವಿಕಾಸ ಬ್ಯಾಂಕಿನಿಂದ 65,000 ರೂಪಾಯಿ ಸಾಲ ತಂದು ಸಾಗುವಳಿಗೆ ನಿಂತಿದ್ದ. ಆತನ ಅದೃಷ್ಟಕ್ಕೆ ಮಳೆ ಚೆನ್ನಾಗಿ ಬಿದ್ದು ಫಸಲು ಉತ್ತಮವಾಗಿ ಬೆಳೆದು ನಿಂತಿತ್ತು, ಆದರೆ, ಕೊನೆ ಗಳಿಗೆಯಲ್ಲಿ ಧೋ... ಎಂದು ಮುಗಿಲೇ ತೂತು ಬಿದ್ದಂತೆ ಸುರಿದ ಭೀಕರ ಮಳೆಯಿಂದಾಗಿ ಬೆಳೆದು ನಿಂತ ಫಸಲೆಲ್ಲಾ ಆತನ ಕಣ್ಣೆದುರಿಗೇ ಕೊಚ್ಚಿ ಹೋಯಿತು. ಅರವತ್ತು ವರ್ಷ ವಯಸ್ಸಿನ ವಿರೂಪಾಕ್ಷಪ್ಪನಿಗೆ ಇದು ಅಂತಿಂಥ ಆಘಾತವಾಗಿರಲಿಲ್ಲ, ಸಾಲ ತೀರಿಸುವುದು ಹೇಗೆ? ಹೆಂಡತಿ-ಮಕ್ಕಳನ್ನು ಸಾಕುವುದು ಹೇಗೆ? ಎಂಬ ಚಿಂತೆಯಲ್ಲಿ ಬಿದ್ದ, ಸರ್ಕಾರ ಪರಿಹಾರ ಕೊಟ್ಟು ತನ್ನನ್ನು ಬದುಕಿಸಬಹುದೆಂದು ಆಶೆಯಿಟ್ಟುಕೊಂಡು ಕೆಲ ದಿನ ಕಳೆದ. ಯಾವಾಗ ಸರ್ಕಾರದಿಂದಾಗಲಿ, ಸ್ಥಳೀಯ ರಾಜಕಾರಣಿಗಳಿಂದಾಗಲಿ, ಅಧಿಕಾರಿಗಳಿಂದಾಗಲಿ ಆತನ ಆರ್ತನಾದಕ್ಕೆ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬರದಿದ್ದಾಗ ಬೇರೆ ದಾರಿ ಕಾಣದೆ ಕ್ರಿಮಿನಾಶಕ ಸೇವಿಸಿ ಲಕ್ಷ್ಮೇಶ್ವರದ ಆಸ್ಪತ್ರೆಯೊಂದರಲ್ಲಿ ಪ್ರಾಣಬಿಟ್ಟ!

ಅದೇ ಕುಂದಗೋಳ ತಾಲ್ಲೂಕಿನ ಪಶುಪತಿಹಾಳ ಗ್ರಾಮದ ಯಲ್ಲಪ್ಪ ಗುಡಿಹಾಳ ಎಂಬ ಸ್ಥಿತಿವಂತ ರೈತನ ಪಾಡು ಕೂಡ ಇದಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ, ಈತ ತನ್ನ 30 ಎಕರೆ ಜಮೀನಿನಲ್ಲಿ ಟ್ರಾಕ್ಟರ್ ಮತ್ತು ನಾಲ್ಕು ಜೋಡಿ ಎತ್ತಿನ ಭರ್ಜರಿ ಒಕ್ಕಲುತನ ಮಾಡಿಕೊಂಡಿದ್ದಾತ. ಈ ಬಾರಿಯ ಒಕ್ಕಲುತನಕ್ಕೆಂದೇ ತನ್ನ ಜಮೀನನ್ನೆಲ್ಲಾ ಅಡವಿಟ್ಟು ಹುಬ್ಬಳ್ಳಿಯ ಕಾರ್ಪೊರೇಷನ್ ಬ್ಯಾಂಕಿನಲ್ಲಿ ಹನ್ನೆರಡು ಲಕ್ಷ ಸಾಲ ಪಡೆದುಕೊಂಡು ಬಂದಿದ್ದ. "ಈ ಸಲ ಮಳೆ ಚೆನ್ನಾಗಿ ಬಿದ್ದು, ಮೆಣಸಿನಕಾಯಿ, ಗೋವಿನಜೋಳ ಸರಿಯಾಗಿ ಕೈಗೆ ಸಿಕ್ಕತೆಂದರೆ ಬ್ಯಾಂಕಿನ ಸಾಲ ಹೊಳ್ಳಿ ತೀರಿಸಿ ಬೇಕೆಂದರೆ ಬ್ಯಾಂಕಿಗೇ ಸಾಲ ಕೊಡ್ತೀನಿ" ಎಂದು ಎದೆಯುಬ್ಬಿಸಿಕೊಂಡು ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದ. ಆದರೆ ಆತನ ಬೆಳೆದು ನಿಂತ ಮೆಣಸಿನಕಾಯಿ ಮತ್ತು ಗೋವಿನ ಜೋಳ ಪ್ರವಾಹದ ನೀರಿನಲ್ಲಿ ಆತನ ಕಣ್ಣೆದುರಿಗೇ ಕೊಚ್ಚಿ ಹೋಯಿತು. ಸರ್ಕಾರ ಸತಾಯಿಸಿ, ಸತಾಯಿಸಿ ಹೆಚ್ಚೆಂದರೆ 50,000 ರೂಪಾಯಿ ಪರಿಹಾರ ಕೊಡಬಹುದೇ ವಿನಃ ತಾನು ಮಾಡಿದ ಹನ್ನೆರಡು ಲಕ್ಷ ಸಾಲವನ್ನಂತೂ ತೀರಿಸಲಾಗುವುದಿಲ್ಲ ಎಂಬುದು ಯಲ್ಲಪ್ಪನಿಗೆ ಮನವರಿಕೆಯಾಗಿ ಹೋಗಿತ್ತು, ಬೇರೆ ದಾರಿ ಕಾಣದೆ ಇದೇ ಅಕ್ಟೋಬರ್ 13ರಂದು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡ!



ಬೊಮ್ಮಾಯಿ



ನಿರಾನಿ



ಸಿ.ಎಂ.ಉದಾಸಿ

ಪಶುಪತಿಹಾಳ ಗ್ರಾಮದ ಯಲ್ಲಪ್ಪ ಸತ್ತ ಮರುದಿನವೇ ಪಕ್ಕದ ಎರೇಬೂದಿಹಾಳ ಗ್ರಾಮದ ಮುಗ್ಧ ರೈತ ನೀಲಪ್ಪ ಮ್ಯಾಗೇರಿ ಕೂಡ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡ. ಈತ ತನ್ನ ಸ್ವಂತ ಮೂರು ಎಕರೆ ಜಮೀನಲ್ಲದೇ ಇನ್ನೊಂದು ಎಕರೆಯನ್ನು ಬೇರೆಯವರಿಂದ ಗುತ್ತಿಗೆ ಪಡೆದು ಬೇಸಾಯ ಮಾಡಿಕೊಂಡಿದ್ದಾತ. ಈ ವರ್ಷದ ವ್ಯವಸಾಯಕ್ಕಾಗಿ ಸಹಕಾರಿ ಬ್ಯಾಂಕಿನಿಂದ ಐವತ್ತು ಸಾವಿರ ರೂಪಾಯಿ ಸಾಲ ತಂದಿದ್ದ. ಅಲ್ಲದೇ, ಸ್ಥಳೀಯ ವ್ಯಾಪಾರಸ್ಥರಿಂದ ಒಂದು ಲಕ್ಷ ರೂಪಾಯಿ ಕೈ ಸಾಲ ತೆಗೆದುಕೊಂಡು ಮೆಣಸಿನಕಾಯಿ, ಈರುಳ್ಳಿ ಬೆಳೆದಿದ್ದ. ಆದರೆ, ಧಾರಾಕಾರವಾಗಿ ಸುರಿದ ಮಳೆಯಲ್ಲಿ ಬೆಳೆದುನಿಂತ ಮೆಣಸಿನಕಾಯಿ, ಈರುಳ್ಳಿ ಕೊಚ್ಚಿಕೊಂಡು ಹೋಯಿತು. ಸರ್ಕಾರ ತನ್ನ ಸಹಾಯಕ್ಕೆ ಬರುವುದಿಲ್ಲ ಎಂಬುದು ಖಾತ್ರಿಯಾಗುತ್ತಿದ್ದಂತೆಯೇ ನೀಲಪ್ಪ ವಿಷ ಕುಡಿದು ಇಹಲೋಕ ತ್ಯಜಿಸಿಬಿಟ್ಟ.

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನಲ್ಲಿ ಒಂದೇ ವಾರದಲ್ಲಿ ಮೂವರು ರೈತರು ಸಾಲದ ಶೂಲ ಹಾಗೂ ಹೃದಯಹೀನ ಸರ್ಕಾರದ ವರ್ತನೆಗಳ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಂಕಾಪುರದ ಶೇಖರಪ್ಪ ನಿಂಗಪ್ಪ ನಿರೊಳ್ಳಿ ತನ್ನ ಐದು ಎಕರೆ ಜಮೀನನ್ನು ಒತ್ತೆಯಿಟ್ಟು ಮೂರು

ನೆರೆಯಿಂದ ಜಲಾವೃತಗೊಂಡಿರುವ ಭೂಮಿ..



ಲಕ್ಷ ಸಾಲ ತೆಗೆದುಕೊಂಡು ಬಂದು ಅದೇ ಜಮೀನಿನಲ್ಲಿ ಸೋಯಾಬಿನ್ ಮತ್ತು ಹತ್ತಿ ಬೆಳೆದಿದ್ದ. ಫಸಲು ಚೆನ್ನಾಗಿ ಬಂದಿದ್ದರಿಂದ ಸಾಲ ತೀರಿಸಿಯೂ ಸಾಕಷ್ಟು ದುಡ್ಡು ಕೈಯಲ್ಲಿ ಉಳಿಯುತ್ತದೆ, ಮುಂದಿನ ವರ್ಷ ಮತ್ತೆ ಸಾಲ ಮಾಡುವ ಅವಶ್ಯಕತೆಯಿಲ್ಲ ಎಂದು ಉತ್ಸಾಹಭರಿತನಾಗಿದ್ದ. ಆದರೆ, ಸೋಯಾಬಿನ್ ಮತ್ತು ಹತ್ತಿ ಮಳೆಯ ಪ್ರವಾಹದಲ್ಲಿ ಹೇಳಹೆಸರಿಲ್ಲದಂತೆ ಕೊಚ್ಚಿ ಹೋಗುವುದರೊಂದಿಗೆ ಆತನಿಗೆ ಸಾವಿನ ಬಾಗಿಲನ್ನು ತೆರೆದವು.

ಶಿಶುನಾಳದ ಹನುಮಂತಪ್ಪ ಕಡಹಳ್ಳಿ ತನ್ನ ಮೂರು ಎಕರೆ ಜಮೀನನ್ನು ಅಡವಿಟ್ಟು ಎರಡು ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಬಂದಿದ್ದ. ತನ್ನ ಜಮೀನಿನಲ್ಲಿ ಬೆಳೆದು ನಿಂತ ಬೆಳೆಯೆಲ್ಲಾ ನೀರಿನಲ್ಲಿ ಕೊಚ್ಚಿಹೋಗಿದ್ದು ಮಾತ್ರವಲ್ಲದೇ ತಾನು ಸಾಕಿದ್ದ 50 ಕುರಿಗಳೂ ಪ್ರವಾಹದಲ್ಲಿ ತೇಲಿಹೋಗಿದ್ದನ್ನು ಕಂಡು ತೀವ್ರವಾಗಿ ಆಘಾತಗೊಂಡ. ಮಾಡಿದ ಸಾಲ ತೀರಿಸುವುದಕ್ಕೆ ಆತನ ಬಳಿ ಏನೂ ಇರಲಿಲ್ಲ, ತೀವ್ರ ಮಾನಸಿಕ ಖಿನ್ನತೆಗೊಳಗಾದ ಹನುಮಂತಪ್ಪ ಚಿಂತೆಯಿಂದಲೇ ಹಾಸಿಗೆ ಹಿಡಿದು ಕೊನೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ, ಅದೇ ರೀತಿ ಚಿಕ್ಕಮುಲ್ಲೂರು ಗ್ರಾಮದ ಈಶ್ವರಗೌಡ ಪಾಟೀಲ ಒಂದೂವರೆ ಲಕ್ಷ ಸಾಲಕ್ಕೆ ಹಾಗೂ ಹಾನಗಲ್ ತಾಲ್ಲೂಕಿನ ಗೆಜ್ಜಿಹಳ್ಳಿ ಗ್ರಾಮದ ಮಹದೇವಪ್ಪ ಕೇವಲ ಮೂವತ್ತು ಸಾವಿರ ರೂಪಾಯಿ ಸಾಲಕ್ಕೆ ಬೆದರಿ ನೇಣಿಗೆ ಕೊರಳೊಡ್ಡಿದ್ದಾರೆ!

ಹುಬ್ಬಳ್ಳಿ ತಾಲ್ಲೂಕಿನ ಮಂಟೂರು ಗ್ರಾಮದ ಸುಣಗಾರ ಬಸಪ್ಪ ತನ್ನ ಹೆಂಡತಿ ಮಕ್ಕಳನ್ನು ದೀಪಾವಳಿ ಹಬ್ಬಕ್ಕೆ ತವರುಮನೆಗೆ ಕಳುಹಿಸಿ ಅಕ್ಟೋಬರ್ 14ರಂದು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೇವಲ ಮೂವತ್ತೈದರ ಹರೆಯದ ಬಸಪ್ಪ ತನ್ನ ನಾಲ್ಕು ಎಕರೆ ಜಮೀನನ್ನು ಅಡವಿಟ್ಟು ಐವತ್ತು ಸಾವಿರ ಸಾಲ ತಂದು ಮೆಣಸಿನಕಾಯಿ, ಕಡ್ಲೆ, ಶೇಂಗಾ ಬೆಳೆದಿದ್ದ, ಮಳೆ ಪ್ರವಾಹದಲ್ಲಿ ಎಲ್ಲವೂ ಕೊಚ್ಚಿ ಹೋಗುವುದರೊಂದಿಗೆ ಬೇರೆ ದಾರಿ ಕಾಣದೇ ನೇಣಿಗೆ ಕೊರಳೊಡ್ಡಿದ. ಹೀಗೆ, ಹುಬ್ಬಳ್ಳಿ, ಧಾರವಾಡಗಳ ಸುತ್ತಮುತ್ತ ಕಳೆದ ಹದಿನೈದು ದಿನಗಳಲ್ಲಿ ಕನಿಷ್ಠ ದಿನಕ್ಕೊಂದರಂತೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಮುತ್ತೆಪ್ಪ ತನ್ನ ಹೊಲದಲ್ಲಿ ಬೆಳೆದುನಿಂತ ಫಸಲನ್ನು ಕಳೆದುಕೊಂಡ. ಹಲವು ವರ್ಷಗಳ ಕಾಲ ಕಷ್ಟಪಟ್ಟು ದುಡಿದು, ಉಳಿತಾಯ ಮಾಡಿ ಕಟ್ಟಿಕೊಂಡಿದ್ದ ಮನೆಯೂ ಕುಸಿದುಬಿತ್ತು, ಕೊಟ್ಟಿಗೆಯಲ್ಲಿ ಕಟ್ಟಿದ್ದ ದನಕರುಗಳೂ ಪ್ರವಾಹಕ್ಕೆ ಸಿಕ್ಕು ಸತ್ತುಹೋದವು. ಇಷ್ಟಲ್ಲದೇ ಬೇಸಾಯಕ್ಕಾಗಿ ಮಾಡಿಕೊಂಡಿದ್ದ ಎರಡು ಲಕ್ಷ ರೂಪಾಯಿ ಸಾಲ ಬೇರೆ ತಲೆ ಮೇಲಿತ್ತು. ಸ್ಥಳೀಯ ರಾಜಕಾರಣಿಗಳು "ನೋಡೋಣ... ನೋಡೋಣ..." ಎನ್ನುತ್ತಾ ಹೋದರೆ ವಿನಃ ಯಾರೂ ನೆರವಿಗೆ ಬರಲಿಲ್ಲ. ಕೊನೆಗೆ ಬೇರೆ ದಾರಿ ಕಾಣದೆ ಆತ್ಮಹತ್ಯೆ ಮಾಡಿಕೊಂಡ. ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ ಜಿಲ್ಲೆಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಈ ನಾಲ್ಕು ಜಿಲ್ಲೆಗಳಲ್ಲಿ ದಿನವೊಂದಕ್ಕೆ ಮೂವರು ರೈತರು ಯಾವ ಭರವಸೆಯೂ ಕಾಣದೆ ನೇಣಿಗೆ ಕೊರಳೊಡ್ಡುತ್ತಿದ್ದಾರೆ.

ಸಾರಾಂಶದಲ್ಲಿ ಹೇಳುವುದಾದರೆ, ಈ ಮೇಲೆ ದಾಖಲಿಸಿರುವ ಆತ್ಮಹತ್ಯೆ ಪ್ರಕರಣಗಳು ಕೇವಲ ಕೆಲವು ಉದಾಹರಣೆಗಳಷ್ಟೆ. ಇಡೀ ಉತ್ತರ ಕರ್ನಾಟಕವನ್ನು ಒಟ್ಟಾರೆಯಾಗಿ ತೆಗೆದುಕೊಳ್ಳುವುದಾದರೆ ದಿನವೊಂದಕ್ಕೆ ನಾಲ್ಕೈದು ಅನ್ನದಾತರು ಯಾವುದೇ ದಾರಿ ಕಾಣದೇ ನೇಣಿಗೆ ಕೊರಳೊಡ್ಡುತ್ತಲೇ ಇದ್ದಾರೆ. ಮೂವತ್ತು, ನಲ್ವತ್ತು ಎಕರೆ ಜಮೀನು ಹೊಂದಿದ ಸ್ಥಿತಿವಂತ ರೈತರು ಹತ್ತು-ಹನ್ನೆರಡು ಲಕ್ಷಗಳಷ್ಟು ಬೃಹತ್ ಸಾಲಮಾಡಿಕೊಂಡು ಈಗ ಅದನ್ನು ಮರುಪಾವತಿ ಮಾಡುವುದಕ್ಕೆ ಯಾವ ದಾರಿ ಕಾಣದೇ ಆತ್ಮಹತ್ಯೆಯ ದಾರಿ ಹಿಡಿದಿದ್ದರೆ ಮತ್ತೆ ಒಂದೆರಡು ಎಕರೆ ಜಮೀನು ಹೊಂದಿರುವ ಸಣ್ಣ ರೈತರು ಮೂವತ್ತು-ನಲ್ವತ್ತು ಸಾವಿರ ಸಾಲ ಮಾಡಿಕೊಂಡು ಅದನ್ನೂ ತೀರಿಸುವುದಕ್ಕೆ ಯಾವುದೇ ಭರವಸೆ ಕಾಣದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸ್ಥಳೀಯ ಎಮ್ಮೆಲ್ಲೆಗಳಿಗೆ, ಎಂಪಿಗಳಿಗೆ, ಅಧಿಕಾರಿಗಳಿಗೆ, ಸರ್ಕಾರಕ್ಕೆ ಇದೆಲ್ಲಾ ಗಮನಕ್ಕೆ ಬಂದಿಲ್ಲ ಎಂದೇನೂ ಇಲ್ಲ, ಅಲ್ಲಿ ಏನು ನಡೆಯುತ್ತಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. 'ಧೈರ್ಯಗೆಡಬೇಡಿ. ನಾವು ನಿಮ್ಮೊಂದಿಗಿದ್ದೇವೆ' ಎಂಬ ಆತ್ಮವಿಶ್ವಾಸ ತುಂಬುವ ಒಂದೇ ಒಂದು ಮಾತನ್ನು ಯಾರೂ ಆಡುತ್ತಿಲ್ಲ. ನಿಜಕ್ಕೂ ರೈತರ ಬವಣೆಯನ್ನು ನಿವಾರಿಸಬೇಕೆಂಬ ಮನಸ್ಸು ಅಧಿಕಾರಿಗಳಿಗೆ, ಎಂಪಿ-ಎಮ್ಮೆಲ್ಲೆಗಳಿಗೆ, ಸರ್ಕಾರಕ್ಕೆ ಇದ್ದಿದ್ದರೆ ಧೈರ್ಯಗುಂದಿದ ರೈತ ಸಮುದಾಯಕ್ಕೆ ಆತ್ಮವಿಶ್ವಾಸ ತುಂಬುತ್ತಿದ್ದರು. ನಿಮ್ಮೆಲ್ಲಾ ಕಷ್ಟಗಳನ್ನು ಬಗೆಹರಿಸುತ್ತೇವೆ ಎಂದು ಭರವಸೆ ಕೊಡುತ್ತಿದ್ದರು. ಕೊಟ್ಟ ಭರವಸೆಯನ್ನು ಈಡೇರಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದರು. ಹಾಗೆ ಮಾಡಿದ್ದರೆ ಇಂಥ ಆತ್ಮಹತ್ಯೆಗಳು ನಿಲ್ಲುತ್ತಿದ್ದವು. ಆದರೆ ನಾಡಿನ ಸಾಮಾನ್ಯ ಜನ ತಮಗೆ ಕಷ್ಟವಿದ್ದರೂ ತಮಗಿಂತಲೂ ಭೀಕರ ಸಂಕಷ್ಟದಲ್ಲಿರುವ ಪ್ರವಾಹಪೀಡಿತ ರೈತರ ಕಣ್ಣೀರು ಒರೆಸುವುದಕ್ಕಾಗಿ ತಮ್ಮ ಕೈಲಾದಷ್ಟು ಹಣ ಸಹಾಯ ಮಾಡಿದರೆ ಈ ಅಧಿಕಾರಿಗಳು, ರಾಜಕಾರಣಿಗಳು ಆ ಹಣವನ್ನು ತಮ್ಮ ಹೊಟ್ಟೆಗಿಳಿಸಿಕೊಂಡು ನೆರೆಪೀಡಿತ ರೈತರ ಹೊಟ್ಟೆ ಮೇಲೆ ಹೊಡೆಯುತ್ತಾರೆಂದರೆ ಆ ರೈತ ಸಮುದಾಯಕ್ಕೆ ಇಂಥ ನೀಚರ ಮೇಲೆ ಭರವಸೆಯಾದರೂ ಹೇಗೆ ಹುಟ್ಟುತ್ತದೆ ಹೇಳಿ?

● ವಿನಯ್ ಕುರುಳಿಕುಪ್ಪಿ

ಲಿಂಗಾಯತ ಜಂಗಮರು ಬೇಡ ಜಂಗಮರಲ್ಲ

ಇದೇ ತಿಂಗಳು 25 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೆಂಗಳೂರಿನ ಕೋಳದಮಠದ ಡಾ. ಶಾಂತವೀರ ಮಹಾಸ್ವಾಮಿಗಳು ಹಾಗೂ ಅಖಿಲ ಭಾರತ ಶಿವಾಚಾರ್ಯ ಸಂಘದ ಅಧ್ಯಕ್ಷರಾದ ಶ್ರೀ ರೇಣುಕ ಶಿವಾಚಾರ್ಯರ ನೇತೃತ್ವದಲ್ಲಿ 'ಬೇಡ ಜಂಗಮರ ಸಂಘಟನಾ ಬೃಹತ್ ಸಮಾವೇಶ' ಒಂದನ್ನು ಕರೆಯಲಾಗಿದೆ. ಈ ಸಮಾವೇಶಕ್ಕೆ ಕನ್ನಡ ನಾಡಿನ ಸಮಸ್ತ ಹರ-ಗುರು ಚರಮೂರ್ತಿ ಮಹಾಸ್ವಾಮಿಗಳನ್ನು ಆಹ್ವಾನಿಸಲಾಗಿದೆ. ಇದಕ್ಕೂ ಪೂರ್ವದಲ್ಲಿ ಅಂದರೆ 24-9-2009 ರ 'ಪ್ರಜಾವಾಣಿ' ಪತ್ರಿಕೆಯಲ್ಲಿ ಬೇಡ ಜಂಗಮರಿಗೆ ಬೆಂಬಲ ವ್ಯಕ್ತಪಡಿಸಿ ಅದೇ ಶಾಂತವೀರ ಮಹಾಸ್ವಾಮಿಗಳು, ಡಾ. ಎಸ್. ಎಂ. ವೃಷಭೇಂದ್ರ ಸ್ವಾಮಿಗಳು ಹಾಗೂ ಡಾ. ಸಾ. ಶಿ ಮರುಳಯ್ಯ ಮುಂತಾದ 15 ಜನರ ಪತ್ರವೊಂದು ವಾಚಕರ ವಾಣಿಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಅವರು "ಇತಿಹಾಸ ಬಲ್ಲ ನಾವುಗಳು ಮನಗಂಡು" ಲಿಂಗಾಯತ ಜಂಗಮರಿಗೆ ಬೇಡಜಂಗಮರಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯ ಸಿಗಬೇಕೆಂದು ಬೆಂಬಲಿಸಿದ್ದಾರೆ. ಆದರೆ ಆಂಥ್ರಾಪಲಾಜಿಕಲ್ ಸರ್ವೆ ಆಫ್ ಇಂಢಿಯಾ ನಡೆಸಿದ 'ಬೇಢಜಂಗಮರ ಬಗ್ಗೆ ಒಂದು ಪುನರಧ್ಯಯನ' ಇವರ ಈ ಮೊಂಡುವಾದಕ್ಕೆ ಈ ರೀತಿ ಹೇಳುತ್ತದೆ.

ಅಂಥ್ರೋಪಲಾಜಿಕಲ್ ಸರ್ವೆ ಆಫ್ ಇಂಡಿಯಾ ನಡೆಸಿದ ಬೇಡಜಂಗಮರ ಬಗ್ಗೆ ಒಂದು ಪುನರಧ್ಯಯನ **People of India** ಶ್ರೇಣಿಯ **National Series Volume II** ದಲ್ಲಿ ಪ್ರಕಟಿಸಿದ **The Scheduled castes** ಗ್ರಂಥದ ಪುರವಣಿಯ ಪುಟ **1366, 1367, 1368** ಗಳಲ್ಲಿ ಪ್ರಕಟವಾದ ಲೇಖನದ ಯಥಾವತ್ ಕನ್ನಡ ಅನುವಾದ)

(ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಿದ ಸೌಲಭ್ಯಗಳನ್ನು ತಾವು ಕಬಳಿಸಲು ಲಿಂಗಾಯತರಲ್ಲಿಯೇ ಮೇಲ್ವರ್ಗಕ್ಕೆ ಸೇರಿದ ಜಂಗಮರು ತಮಗೆ ತಾವೇ ಬೇಡ ಜಂಗಮರೆಂದು ಸಾಧುಣಿಕೆ ಮಾಡುತ್ತಿರುವರೆಂಬ ದೂರಿನ ಹಿನ್ನೆಲೆಯಲ್ಲಿ ಬೇಡ ಜಂಗಮರ ಬಗ್ಗೆ ಇತ್ತೀಚೆಗೊಂದು ಅಧ್ಯಯನ ನಡೆಸಲಾಯಿತು.)

'ಬೇಡ ಎಂಬ ಶಬ್ದವು 'ವೇಧ'ದಿಂದ ನಿಷ್ಪನ್ನವಾಗಿದ್ದು ಹಾಗೆಂದರೆ ಇರಿ, ಭೇದಿಸು ಅಥವಾ ಬಲೆಹಾಕು ಎಂದಾಗುತ್ತದೆ. ಬೇಡ/ಬುಡುಗ ಜಂಗಮ ಎಂಬ ಜನಾಂಗ ಮೂಲತಃ ಆಂಧ್ರ ಪ್ರದೇಶಕ್ಕೆ ಸೇರಿದ್ದಾಗಿದ್ದು, ಬೇಟೆಯಾಡುವ ಹಾಗೂ ಬಲೆ ಹಾಕಿ ಹಕ್ಕಿಹಿಡಿಯುವ ಸಮುದಾಯಕ್ಕೆ ಸೇರಿದವರು. ಅಲ್ಲಿ ಅವರನ್ನು ಬುಡುಗ ಜಂಗಮರೆಂದು ಕರೆಯಲಾಗುತ್ತದೆ. ಆಂಧ್ರ ಪ್ರದೇಶದ ಕರಾವಳಿ, ರಾಯಲಸೀಮೆ ಹಾಗೂ ತೆಲಂಗಾಣಾ ಈ ಮೂರು ಪ್ರದೇಶಗಳಲ್ಲಿ ಈ ಬೇಡ ಜಂಗಮರು ಹಂಚಿಹೋಗಿದ್ದಾರೆ. ಅವರನ್ನು ಬೇಡಜಂಗಮ, ಬುಡುಗ ಜಂಗಮರೆಂದು ಘೋಷಿಸಲಾಗಿದೆ. 1981ರ ಜನಗಣತಿಯ ಪ್ರಕಾರ ಆಂಧ್ರ ಪ್ರದೇಶದಲ್ಲಿ ಅವರ ಜನಸಂಖ್ಯೆ 12,024 ರಷ್ಟಿತ್ತು, ಅವರು ತಮ್ಮ ತಮ್ಮೊಳಗೆ ಹಾಗೂ ಅನ್ಯತರ ಸಮುದಾಯಗಳೊಂದಿಗೆ ವ್ಯವಹರಿಸಲು ತೆಲುಗು ಭಾಷೆ ಹಾಗೂ ತೆಲುಗು ಲಿಪಿಯನ್ನು ಬಳಸುತ್ತಾರೆ. ಬೇಡಜಂಗಮರು ಮಾಂಸಾಹಾರಿಗಳು. ಅವರ ಮುಖ್ಯ ಆಹಾರ ಅನ್ನವಲ್ಲದೆ ಅವರು ಮದ್ಯವನ್ನು ಸೇವಿಸುತ್ತಾರೆ. ಅವರಿಗೆ ಗಂಧಮ್, ಭೂತಾ, ತೂರಪತಿ, ಪಸ್ತಮವಲ್ಲು, ಕಲ್ಲೆಮವಲ್ಲು, ಮುಗ್ಗೊಲ್ಲು, ಚಿರಾಪಾಟಿ, ಬೈಲುಪದೊಲ್ಲು ಮುಂತಾದ ಅಡ್ಡ ಹೆಸರುಗಳಿವೆ. ಈ ಅಡ್ಡ ಹೆಸರುಗಳೇ ಅವರ ವೈವಾಹಿಕ ಸಂಬಂಧಗಳನ್ನು ನಿಯಂತ್ರಿಸುತ್ತವೆ.



ಲಿಂಗಾಯತ ಜಂಗಮ....


ಬೇಡಜಂಗಮರಲ್ಲಿ ಸ್ವಗೋತ್ರ ಪದ್ಧತಿಯಿದೆಯಲ್ಲದೆ ಅವರು ಅಡ್ಡ ಹೆಸರಿನ ನಿಯಮವನ್ನು (ಇಂತಿಪೆರು) ಪಾಲಿಸುತ್ತಾರೆ. ಅವರಲ್ಲಿ ಅನ್ಯಗೋತ್ರ ಪದ್ಧತಿ, ತೆರೆವು ಪದ್ಧತಿ (ಓಲಿ)ಯೂ ಆಚರಣೆಯಲ್ಲಿವೆ. ಬೇಡಜಂಗಮರ ಹೆಣ್ಣು ಮಕ್ಕಳು ತಮ್ಮ ಮನೆಗೆಲಸವಲ್ಲದೆ ತಮ್ಮ ಗಂಡಸರ ಸಾಂಪ್ರದಾಯಕ ಕಣಿ ಹೇಳುವ ಭಿಕ್ಷೆ ಬೇಡುವ ವೃತ್ತಿಗಳಲ್ಲಿ ಸಹಾಯ ಮಾಡುತ್ತಾರಲ್ಲದೆ ಹೊಲಗಳಲ್ಲಿ ಹತ್ತಿ ಬಿಡಿಸುವ ದಿನಗೂಲಿಗಳಾಗಿಯೂ ದುಡಿಯುತ್ತಾರೆ. ಇದಲ್ಲದೆ ಸಿಂಧಿಚಾಪೆಗಳನ್ನು ಹೆಣೆಯುವ ಮುಂತಾದ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳುತ್ತಾರೆ. ಸಮಾಜದ ಹಿರಿಯ (ಕುಲಪೆದ್ದ) ರಿಂದ ನಿರ್ಧಾರಿತವಾದ ಶುಭದಿನದಂದು ಅವರ ವಿವಾಹಗಳು ನೆರವೇರುತ್ತವೆ.

ಮೂಲತಃ ಬೇಡಜಂಗಮರು ಭೂಹೀನರು. ಚಿಕ್ಕಮಕ್ಕಳು ತಮ್ಮ ಪಾಲಕರ ಭಿಕ್ಷಾ ವೃತ್ತಿಯಲ್ಲಿ ಹಾಗೂ ಚಾಪೆ ಹೆಣೆಯುವ ಕಸಬುಗಳಲ್ಲಿ ಸಹಾಯ ಮಾಡುತ್ತವೆ. ಇತ್ತೀಚೆಗೆ ಅನಿಶ್ಚಿತ ದಿನಗೂಲಿಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ. ಬೇಡ ಜಂಗಮರು ಹಿಂದೂಗಳಾಗಿದ್ದು, 'ಪೆದ್ದ ಗುಸ್ಸಾಯಿ' ಅವರ ಕುಲದೇವರು 'ಪೆರಂತಲು' ಅವರ ಕುಲದೇವತೆಯಾಗಿದ್ದಾಳೆ. ಪ್ರತಿಯೊಂದು ಕುಟುಂಬದಲ್ಲೂ ಪೂಜೆಗೆಂದು ಹುಳಿಮಜ್ಜಿಗೆ (ಪುಳಿನೀಲ್ಲಾ ಕುಂಡ) ಗಡಿಗೆಯನ್ನು ಇಟ್ಟುಕೊಳ್ಳುವ ಸಾಂಪ್ರದಾಯಿಕ ವಾಡಿಕೆಯಿದೆ. ಇನ್ನುಳಿದ ಸಮಾಜಗಳೊಂದಿಗೆ ಸಾಂಪ್ರದಾಯಿಕ ಹಾಗೂ ಆಧುನಿಕ ಸಂಬಂಧಗಳಿವೆ. 1981 ರ ಖಾನೆಸುಮಾರಿ ಪ್ರಕಾರ ಅವರಲ್ಲಿ ಸಾಕ್ಷರತಾ ಪ್ರಮಾಣ ನೂರಕ್ಕೆ 18.54 ರಷ್ಟಿತ್ತು, ಸಾಮಾನ್ಯವಾಗಿ ಅವರು ದೇಶಿಯ ವೈದ್ಯಕೀಯದ ಮೇಲೆ ಅವಲಂಬಿತವಾಗಿದ್ದರೂ ಆಧುನಿಕ ಚಿಕಿತ್ಸೆಯನ್ನೂ ಪಡೆಯುತ್ತಾರೆ. ಮೂರು ಮಕ್ಕಳನ್ನು ಪಡೆಯಲು ಅವರು ಇಷ್ಟಪಡುತ್ತಾರೆ. ಕುಟುಂಬ ಯೋಜನೆಯ ಬಗ್ಗೆ ಅವರು ವಿಶ್ವಾಸವುಳ್ಳವರಾಗಿದ್ದಾರೆ.

ಕರ್ನಾಟಕದಲ್ಲಿ ಈ ಅಲೆಮಾರಿ ಬುಡಗ ಅಥವಾ ಬೇಡ ಜಂಗಮರು ಬೀದರ್, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲೀಗ ವಾಸವಾಗಿದ್ದಾರೆ. 1981 ರ ಜನಗಣತಿಯ ಪ್ರಕಾರ ಅವರ ಜನಸಂಖ್ಯೆ 3035 ರಷ್ಟಿತ್ತು. ಇವರು ಕೆಲವು ಹೊಲೆಯ ಹಾಗೂ ಮಾದಿಗ ಜನಾಂಗಗಳ ಸಾಂಪ್ರದಾಯಿಕ ಪೂಜಾರಿಗಳಂತೆ ಕರ್ತವ್ಯ ನಿರ್ವಹಿಸುತ್ತಾರಲ್ಲದೆ ಧಾರ್ಮಿಕ ತಿರುಕರಾಗಿ, ದಿನಗೂಲಿಗಳಾಗಿಯೂ ಬದುಕುತ್ತಿದ್ದಾರೆ. 1981 ರ ಖಾನೆಸುಮಾರಿಯ ಪ್ರಕಾರ ಅವರಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡಾ 27.61 ರಷ್ಟಿತ್ತು, ಕರ್ನಾಟಕದಲ್ಲಿ ಸಂಖ್ಯಾಮಾನದಿಂದ ಪ್ರಬಲವಾದ ಲಿಂಗಾಯತ ಜಂಗಮ ಸಮುದಾಯಕ್ಕಿಂತ ಈ ಬೇಡ ಜಂಗಮರು ಭಿನ್ನವಾಗಿದ್ದಾರೆ.

ಮಹಾರಾಷ್ಟ್ರದಲ್ಲಿ ಈ ಬೇಡ ಜಂಗಮ, ಬುಡುಗ ಜಂಗಮರನ್ನು ಪರಿಶಿಷ್ಟ ಜಾತಿ ಎಂದು ಘೋಷಿಸಲಾಗಿದೆ. ದಕ್ಷಿಣ ಮಹಾರಾಷ್ಟ್ರದಲ್ಲಿ ಇವರು ಕಂಡುಬರುವುದಿಲ್ಲ. ಆದರೆ ಔರಂಗಾಬಾದ್ ಜಿಲ್ಲೆಯಲ್ಲಿ ಮಾತ್ರ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಇವರು ವಾಸಿಸುತ್ತಿರುವುದಾಗಿ ಅಧಿಕೃತವಾದ ವರದಿಯಿದೆ. ಕೆಲವು (ಲಿಂಗಾಯತ) ಜಂಗಮ ವ್ಯಕ್ತಿಗಳು ಇವರಿಗಿದ್ದ ಪರಿಶಿಷ್ಟ ಜಾತಿಯ ಸವಲತ್ತುಗಳನ್ನು ಕಬಳಿಸಲು ಬೇಡ, ಬುಡುಗ ಮತ್ತು ಮಾಲ ಜಂಗಮ ಪ್ರಮಾಣಪತ್ರಗಳನ್ನು ದೊರಕಿಸಿಕೊಂಡದ್ದಾಗಿ ಅಧಿಕೃತವಾಗಿ ಒಪ್ಪಿಕೊಳ್ಳಲಾಗಿದೆ.

1931 ರಲ್ಲಿ ಪ್ರಕಟಿಸಲಾದ ನಿಮ್ನ ವರ್ಗ/ಬಾಹ್ಯ ಜಾತಿಗಳ ಪಟ್ಟಿಯಲ್ಲಿ ಈ ಬೇಡ/ಬುಡುಗ ಜಂಗಮರನ್ನು ಸೇರಿಸಿರಲಿಲ್ಲವೆಂಬ ಮಾತನ್ನಲ್ಲಿ ಉಲ್ಲೇಖಿಸಬೇಕು. ಬೇಡ/ಬುಡಗ ಜಂಗಮ ಪದದ ಉಪಯೋಗದ ಬದಲಾಗಿ ಹಿಂದಿನ ಮಧ್ಯಪ್ರಾಂತಗಳ ಭಂಡಾರ ಜಿಲ್ಲೆ ಹಾಗೂ (ಈಗ ಮಹಾರಾಷ್ಟ್ರದಲ್ಲಿರುವ) ಬೇರೆ ಜಿಲ್ಲೆಯಲ್ಲಿಯ ಜಂಗಮರನ್ನು ನಿಮ್ನ ವರ್ಗದ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಮಹಾರಾಷ್ಟ್ರದಲ್ಲೀಗ ಜಂಗಮ ಸಮುದಾಯವನ್ನು ಒ.ಬಿ.ಸಿ (ಇತರ ಹಿಂದುಳಿದ ಪಂಗಡ) ಯೊಳಗೆ ಸೇರಿಸಲಾಗಿದೆ. 1950 ರ ಪೂರ್ವದಲ್ಲಿ ಹೈದರಾಬಾದ್ ಪ್ರದೇಶದಲ್ಲಿ (ಅಂದರೆ ಹಿಂದಿನ ನಿಜಾಮನ ಆಳ್ವಿಕೆಗೊಳಪಟ್ಟ ಪ್ರದೇಶದಲ್ಲಿ) ಬೇಡ/ಬುಡಗ ಜಂಗಮರನ್ನು ಪರಿಶಿಷ್ಟ ಜಾತಿಯೆಂದು ಪರಿಗಣಿಸಲಾಗಿತ್ತು. ಮತ್ತು ... ಚಂದ್ರಾಪೂರ ಜಿಲ್ಲೆಯ ರಾಜೂರ ತಾಲೂಕುಗಳಲ್ಲಿ ಬೇಡ ಜಂಗಮ/ಬುಡಗ ಜಂಗಮರನ್ನು ಪರಿಶಿಷ್ಟ ಜಾತಿ ಎಂದು ಘೋಷಿಸಲಾಗಿತ್ತು.



ಬೇಡ ಜಂಗಮ....

1961 ರ ಜನಗಣತಿಯಲ್ಲಿ ಕೇವಲ 16 ಜನಸಂಖ್ಯೆಯನ್ನು ಹೊಂದಿದ ಈ ಬೇಡ/ಬುಡಗ ಜಂಗಮ ಜನಾಂಗ 1971 ರಲ್ಲಿ 455 ರಷ್ಟಿದ್ದರೆ, 1981 ರ ಜನಗಣತಿಯಲ್ಲಿ ಒಮ್ಮಿಂದೊಮ್ಮೆಲೇ 27994 ರಷ್ಟು ಏರಿದ್ದು ಕಂಡುಬಂದಿತ್ತು, 1971 ಹಾಗೂ 1981ರ ನಡುವಿನ ಅವಧಿಯ ಜನಗಣತಿಯಲ್ಲಿ ಕಂಡುಬಂದ ಈ ದಿಢೀರ್ ಜನಸಂಖ್ಯಾ ಏರಿಕೆಯ ಪ್ರಮಾಣ ಆ ಜಿಲ್ಲೆಗಳ ಪ್ರಕೃತಿ ಸಹಜವಾದ ಹೆಚ್ಚಳಕ್ಕನುಗುಣವಾಗಿಲ್ಲವೆಂದು ಹೇಳಬಹುದು. 1971 ರಿಂದ 1981 ಈ ಮಧ್ಯೆ ಈ ಜನಾಂಗದ ಬಗೆಗೆ ಕ್ಷೇತ್ರ ನಿರ್ಬಂಧವನ್ನು ಸಹ ತೆಗೆದು ಹಾಕಲಾಗಿತ್ತು.

ವೀರಶೈವ/ಲಿಂಗಾಯತ ಜಂಗಮ ಪಂಗಡದ ಸಮುದಾಯ ಹೆಚ್ಚಿನ ಪ್ರಮಾಣದಲ್ಲಿ ಈ ಬೇಡ ಜಂಗಮ ಹಾಗೂ ಮಾಲ ಜಂಗಮ ವರ್ಗದಲ್ಲಿ ನುಸುಳಿದ್ದಾರೆ. ಬೇಡ ಜಂಗಮ/ಮಾಲ ಜಂಗಮರಿಗಿರುವ ಅಸ್ಪೃಶ್ಯತೆಯ ಕಳಂಕ ಈ ಲಿಂಗಾಯತ ಜಂಗಮರಿಗಿಲ್ಲ, ಈ ಜಂಗಮರು ಸಸ್ಯಾಹಾರಿಗಳು. ಇವರು ಕೆಲವು ಜನಾಂಗದವರನ್ನು ಅಸ್ಪೃಶ್ಯರೆಂದು ಪರಿಗಣಿಸಿ ಜಾತಿಭೇದವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಆದಾಗ್ಯೂ ಅಸ್ಪೃಶ್ಯರಿಗೆ ಮೀಸಲಾಗಿಟ್ಟ ಸವಲತ್ತುಗಳನ್ನು ತಾವು ಹೊಡೆಯಲು ತಮ್ಮನ್ನು ತಾವು ಬೇಡಜಂಗಮರೆಂದು ಸಾಧಿಸುತ್ತಾರೆ. ಇದೊಂದು ವ್ಯಂಗ್ಯವೇ ಸೈ. ಜಂಗಮ ಶಬ್ದದ ಪೂರ್ವಕ್ಕೆ ಜೋಡಿಸಿದ ಬೇಡ ಎಂಬ ಕನ್ನಡ ಪ್ರತ್ಯಯಕ್ಕೆ 'ಬೇಡ' ಎಂದರೆ 'ಬೇಡು' ಎನ್ನುವ ಅರ್ಥ ಹೊರಡುತ್ತದೆ ಎಂದು ಸಾಧಿಸಿ 'ಭಿಕ್ಷೆ' ಬೇಡುವುದು ಅನಾದಿಕಾಲದಿಂದ ಬಂದ ಸಂಪ್ರದಾಯ ತಮ್ಮದೆನ್ನುತ್ತಾರೆ. ಕನ್ನಡ ಭಾಷೆಯ ಸಾಂಪ್ರದಾಯಿಕ ಅರ್ಥದಲ್ಲಿ ಬೇಡ ಎಂದರೆ ಬೇಟೆಯಾಡುವವ ಎಂದಾಗುತ್ತದೆ. ಅಥವಾ 'ಅವಶ್ಯವಿಲ್ಲ' ಎಂದಾಗುತ್ತದೆ. ಜಂಗಮ ಶಬ್ದದ ಪೂರ್ವ ಪ್ರತ್ಯಯ 'ಬೇಡ' ಎನ್ನುವುದಕ್ಕೆ 'ಬೇಡು' ಎಂದು ಅರ್ಥ ಹಚ್ಚುವುದು ಕನ್ನಡ ಭಾಷೆಯ ಶಬ್ದಾರ್ಥ ಸಂಪ್ರದಾಯಕ್ಕೆ ವಿರುದ್ಧವಾದ ಸಾಹಸ ಎಂದು ಹೇಳಬಹುದು."


ನಿಜವಾದ ಬೇಡ ಜಂಗಮರಿಗೆ ಈ ಆಮಂತ್ರಣ ಪತ್ರಿಕೆ ಹೋಗಲು ಸಾಧ್ಯವಿಲ್ಲ. ಅಕಸ್ಮಾತ್ತಾಗಿ ನಿಜವಾದ ಬೇಡಜಂಗಮರು ಈ ಅಧಿವೇಶನದಲ್ಲಿ ಭಾಗವಹಿಸಬಹುದೋ ಇಲ್ಲವೋ? ಆ ಸಂಘಟಕರೇ ಹೇಳಬೇಕು.

ಮೀಸಲಾತಿಯಿಂದಾದ ಈ ದುರಂತಕ್ಕೆ ಉತ್ತರವನ್ನು ಯಾರು ಹೇಳಬೇಕು? ಇಂಥ ಹುಚ್ಚಾಚಾರವನ್ನು ನಿಲ್ಲಿಸಬೇಕೆಂದು 'ಬೇಡಜಂಗಮರ ಸಂಘಟನಾ ಬೃಹತ್ ಸಮಾವೇಶ'ದ ಸಂಘಟಕರಿಗೆ ನಾನು ಪ್ರಾರ್ಥಿಸುತ್ತೇನೆ.

● ಸಿದ್ಧಲಿಂಗ ದೇಸಾಯಿ

▶▶ 2

...ಗಳನ್ನು ಜಾರಿ ಮಾಡಬೇಕೆಂಬ ಬಗ್ಗೆಯೂ ಸಮಗ್ರ ಯೋಜನೆಯನ್ನೂ ರೂಪಿಸಿಲ್ಲ, ಇತ್ತೀಚೆಗಷ್ಟೆ ಶ್ರೀಮಂತ ದೇಶಗಳಲ್ಲಿ ಬಯೋ ಟೆಕ್ನಾಲಜಿಯನ್ನು ಪರಿಚಯಿಸುವ ಮುನ್ನ ಬಯೋ ಸೇಫ್ಟಿ (ಜೀವ ಸಂರಕ್ಷಕ) ಕ್ರಮಗಳನ್ನು ಜಾರಿ ಮಾಡಬೇಕೆಂಬ ನೀತಿಯನ್ನು ಕಡ್ಡಾಯವಾಗಿ ಅನುಸರಿಸಲಾಗುತ್ತಿದೆ. ಪಶ್ಚಿಮದ ದೇಶಗಳಲ್ಲಿ ಬಲವಾದ ಗ್ರಾಹಕರ ರಕ್ಷಣಾ ಚಳವಳಿಗಳು ಇರುವುದರಿಂದ ಅಲ್ಲೆಲ್ಲಾ ಕಂಪನಿಗಳಿಗೆ ಈ ಬಗೆಯಲ್ಲಿ ಬೇಕಾಬಿಟ್ಟ ಪರವಾನಗಿ ಸಿಗುವುದಿಲ್ಲ, ಆದ್ದರಿಂದಲೇ ಮಾನ್ಸಾಂಟೊನಂಥ ವಿದೇಶದ ಕಂಪನಿಗಳು ಭಾರತದ ಮಹಿಕೋನಂಥ ದೇಶಿ ಕಂಪನಿಯ ಜೊತೆ ಕೈಗೂಡಿಸಿ ಇಲ್ಲಿನ ದಲ್ಲಾಳಿಗಳ ದೇಶದ್ರೋಹಿತನವನ್ನು ಬಳಸಿಕೊಂಡು ಇಲ್ಲಿ ... ಪ್ರಯೋಗಗಳನ್ನೂ ಮತ್ತು ಮಾರಾಟವನ್ನೂ ಮಾಡುತ್ತಿವೆ. ಉದಾಹರಣೆಗೆ ಬಿಟಿ ಬದನೆಗೆ ಮುನ್ನ ಬಿಟಿ ಹತ್ತಿಯ ವಾಣಿಜ್ಯ ಉತ್ಪಾದನೆಗೆ ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು, ಆದರೆ ಈವರೆಗೂ ಬಿಟಿ ಹತ್ತಿ ಬೆಳೆದಾಗ ಯಾವ್ಯಾವ ಅನಿರೀಕ್ಷಿತ ಪರಿಣಾಮಗಳು ಉಂಟಾಗಿರಬಹುದೆಂಬ ಅಧ್ಯಯನವನ್ನು ಮಾಡಲು ಸರ್ಕಾರದ ಬಳಿ ಯಾವುದೇ ಸಿದ್ಧತೆಯೇ ಇಲ್ಲ, ಕೆಲವು ಸ್ವತಂತ್ರ ಅಧ್ಯಯನಗಳ ಪ್ರಕಾರ ಬಿಟಿ ಹತ್ತಿ ಬೆಳೆದ ರೈತರಿಗೆ ತೀವ್ರತರವಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿವೆ. ಬಿಟಿ ಹೊಲದಲ್ಲೂ, ಬಿಟಿ ಬೀಜ ಬಳಸದ ಅಕ್ಕಪಕ್ಕದ ಹೊಲದಲ್ಲೂ ಇಳುವರಿ ... ಕೀಟ ಮತ್ತು ರೋಗಗಳ ಬಾಧೆಯನ್ನು ... ಬಿಟಿ ಹತ್ತಿ ಹಾಕಿದ ಹೊಲಕ್ಕೂ, ನಾಟಿ



ಹತ್ತಿ ಹಾಕಿದ ಹೊಲಕ್ಕೂ, ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ.


ಇದು ಬಿಟಿ ಹತ್ತಿಯ ಕಥೆ. ಹತ್ತಿ ತಿನ್ನುವ ಪದಾರ್ಥವಲ್ಲ, ಬದನೆ ತಿನ್ನುವ ಪದಾರ್ಥ. ಕಳೆದ 4000 ವರ್ಷಗಳಿಂದಲೂ ಭಾರತದಲ್ಲಿ ಬದನೆಯ ಬಳಕೆಯಿದೆ ಎಂದು ಹೇಳಲಾಗುತ್ತದೆ. ದೇಶದ 5.5 ಲಕ್ಷ ಹೆಕ್ಟೇರಿನಲ್ಲಿ 10 ಲಕ್ಷ ಮೆಟ್ರಿಕ್ ಟನ್ನಿನಷ್ಟು ಬದನೆಯನ್ನು ಬೆಳೆಯಲಾಗುತ್ತಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ದೇಶದ ಎಲ್ಲಾ ಜನರು ತಿನ್ನುವ ಸೆಕ್ಯುಲರ್ ತರಕಾರಿ ಬದನೆ! ದೇಶದ ಇಷ್ಟೊಂದು ಜನ ಆಹಾರಕ್ಕಾಗಿ ಅವಲಂಬಿಸುವ ಬದನೆಯ ಮೇಲೂ ಬಿಟಿ ಪ್ರಯೋಗಕ್ಕೆ ಅವಕಾಶ ಕೊಡುವ ಮೊದಲು ಸರ್ಕಾರ ಅದರಿಂದಾಗಬಹುದಾದ ಅಡ್ಡ ಪರಿಣಾಮಗಳನ್ನು ತಡೆಗಟ್ಟಲು ಯಾವ ರೀತಿಯಲ್ಲಿ ಸಜ್ಜಾಗಿತ್ತು? ಯಾವುದೇ ಬಿಟಿ ಬೀಜಗಳು ವಾಣಿಜ್ಯ ಉತ್ಪಾದನೆಯ ಹಂತಕ್ಕೆ ತಲುಪುವ ಮುನ್ನ ಹಲವಾರು ಗಂಭೀರವಾದ ಪ್ರಯೋಗಗಳಲ್ಲಿ ಹಾನಿಕರವಲ್ಲವೆಂದು ರುಜುವಾತಾಗಬೇಕು.

ಉದಾಹರಣೆಗೆ ಈ ಹೈಬ್ರೀಡ್ ಬೀಜಗಳನ್ನು ಬಯಲಿನಲ್ಲಿ ಬೆಳೆಯುವ ಪ್ರಯೋಗ ಮಾಡುವ ಮೊದಲೇ ಪರಾಗ ಪ್ರಸರಣ ಅಧ್ಯಯನ, ಪ್ರೋಟೀನ್ ಅಧ್ಯಯನ, ವಾತಾವರಣ ಹೊಂದಾಣಿಕಾ ಪರೀಕ್ಷೆ, ಮಣ್ಣು ವಿಶ್ಲೇಷಣೆ, ಪರ್ಯಾಯ ಪದ್ಧತಿಗಳ ಪರೀಕ್ಷೆಯಂಥ ಪ್ರಮುಖ ಅಧ್ಯಯನಗಳಲ್ಲಿ ಅವು ಪಾಸಾಗಬೇಕು ಮತ್ತು ಈ ಪರೀಕ್ಷೆಗಳು ನಿಷ್ಪಕ್ಷಪಾತವಾಗಿ ನಡೆಯಬೇಕೆಂದರೆ ಅವನ್ನು ಸರ್ಕಾರವೇ ನಡೆಸಬೇಕಲ್ಲವೇ? ಆದರೆ ಸರ್ಕಾರದ ದಲ್ಲಾಳಿತನವೆಷ್ಟಿದೆಯೆಂದರೆ ಯಾವ ಮಹಿಕೋ ಕಂಪನಿ ಬಿಟಿ ಬದನೆ ಬೆಳೆಯಲು ಪರವಾನಗಿ ಕೇಳಿತ್ತೋ ಅದೇ ಕಂಪನಿಗೇ ಅದು ಮೇಲೆ ಹೇಳಿದ ಪ್ರಮುಖ ಪ್ರಯೋಗಗಳನ್ನು ನಡೆಸಿ ಫಲಿತಾಂಶಗಳನ್ನು ವರದಿ ಮಾಡಲು ನಿರ್ದೇಶಿಸಿತ್ತು! ಬಿಟಿ ಬದನೆಯ ವಾಣಿಜ್ಯ ಬೆಳೆಗೆ ಪರವಾನಗಿ ನೀಡಲು ನಡೆಯಬೇಕಿದ್ದ 20ಕ್ಕೂ ಹೆಚ್ಚು ಪ್ರಯೋಗಗಳಲ್ಲಿ ನಾಲ್ಕನ್ನು ಮಾತ್ರವೇ ಸರ್ಕಾರಿ ಪ್ರಯೋಗಾಲಯಗಳು ಮಾಡಿದ್ದವು. ಮಿಕ್ಕದ್ದೆಲ್ಲಾ ಮಹಿಕೋ ಕಂಪನಿಯೇ ಮಾಡಿ ತನ್ನ "ನಿಷ್ಪಕ್ಷಪಾತ" ವರದಿಯನ್ನು ಸರ್ಕಾರಕ್ಕೆ ನೀಡಿ ಪರವಾನಗಿ ಪಡೆದುಕೊಂಡಿದೆ. ಒಂದು ಆಹಾರ ಪದಾರ್ಥವಾದ ಬದನೆಯ ಬಿಟಿ ಬೆಳೆಗೆ ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ಆರೋಗ್ಯ ಇಲಾಖೆಯಾಗಲೀ ಕೃಷಿ ಇಲಾಖೆಯಾಗಲೀ ಭಾಗವಹಿಸೇ ಇರಲಿಲ್ಲ. ಸರ್ಕಾರದ ಕಡೆಯಿಂದ ಬಯೋ ಟೆಕ್ನಾಲಜಿ ಇಲಾಖೆ ಇದರ ಸಂಪೂರ್ಣ ಉಸ್ತುವಾರಿ ನೋಡಿಕೊಂಡರೆ ಆದಷ್ಟು ಬೇಗನೇ ಅದಕ್ಕೆ ಪರವಾನಗಿ ಕೊಡಬೇಕೆಂದು USAID ನಂಥ ಸಂಸ್ಥೆಗಳು ಮತ್ತು ಖಾಸಗೀ ಬಯೋ ಟೆಕ್ ಕಂಪನಿಗಳು ತೀವ್ರವಾದ ಒತ್ತಡ ಹಾಕಿದ್ದವು. ಈಗ ಅಂತಿಮ ಪರವಾನಗಿಗಾಗಿ ಅದನ್ನು ಪರಿಸರ ಮಂತ್ರಿಯ ಕಚೇರಿಗೆ ಸಾಗುಹಾಕಲಾಗಿದೆ. ಪರಿಸರ ಮಂತ್ರಿ ಜೈರಾಂ ರಮೇಶ್ ತಾನು ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮುನ್ನ ಸಾಕಷ್ಟು ಯೋಚಿಸುವುದಾಗಿ ಹೇಳಿದ್ದರೂ ಯಾವ ಕಾರಣಕ್ಕೂ ಪರಿಸರವಾದಿಗಳ ಒತ್ತಡಕ್ಕೆ ಮಣಿಯುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾನೆ. ಇವನ ಬೆಂಬಲಕ್ಕೆ ಎಂ.ಎಸ್. ಸ್ವಾಮಿನಾಥನ್ ತರಹದ ರೈತ ವಿರೋಧಿ ಕೃಷಿ ವಿಜ್ಞಾನಿಗಳು ಇದ್ದೇ ಇದ್ದಾರೆ.

ಹೀಗಾಗಿ ಬಿಟಿ ಬದನೆಯಿಂದ ಆಗುವ ಪರಿಣಾಮಗಳನ್ನು ತಡೆಗಟ್ಟಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೆಯೇ ಸರ್ಕಾರ ನಮ್ಮ ತಟ್ಟೆಯಲ್ಲಿ ಬದನೆ ಬಜ್ಜಿ ಬಡಿಸುತ್ತಿದೆ. ಏನನ್ನು ತಿನ್ನಬೇಕು ಏನನ್ನು ತಿನ್ನಬಾರದೆಂಬುದು ಸಹ ಈ ದೇಶದ ಜನರ ಹಕ್ಕು. ಆದರೆ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಸರ್ಕಾರ ರೈತಾಪಿಯ ಮತ್ತು ಜನತೆಯ ಬದುಕನ್ನೇ ... ಮಾಡುತ್ತಿದೆ. ಹೀಗಾಗಿ ರಾಜಕಾಂತಿಕ ಕಾರಣಕ್ಕಾಗಿ ಅಲ್ಲ ಬಾಳಿ ಬದುಕುವ ಹಕ್ಕಿಗಾಗಿಯೇ ಸರ್ಕಾರದ ಈ ಜನದ್ರೋಹಿ ನೀತಿಯನ್ನು ಸಾರಾಸಗಟಾಗಿ ವಿರೋಧಿಸಬೇಕಿದೆ ●

ಚರಿತ್ರೆ ಮತ್ತು ನಿಜಸ್ವಾತಂತ್ರ್ಯ

ಪುಸ್ತಕ ವಿಮರ್ಶೆ



ಮುಂಡರಗಿ
ಬ್ರಿಟಿಷ್ ವಿರೋಧಿ ಹೋರಾಟ
ಲೇ : ಹು.ಬಾ.ವಡ್ಡಟ್ಟಿ

ಇಂದು ನಮ್ಮ ಮುಂದಿರುವ ಚರಿತೆಯ ಪುಟಗಳನ್ನು ನೋಡಿದರೆ, ಇವು ಯಾರದೋ ಪರ ವಕಾಲತ್ತು ವಹಿಸಿಕೊಂಡು ಬರೆದ ಕೃತ್ರಿಮ ದಾಖಲೆಗಳಂತಿವೆ ಎಂಬುದು ಗೋಚರ ಸತ್ಯ. ಈ ರೀತಿಯ ಪೂರ್ವಾಗ್ರಹಪೀಡಿತ ಮತ್ತು ಸ್ವಜನನಿಷ್ಠ ಚರಿತೆಗಳೇ ಇಂದಿನ ಬಹುತೇಕ ಗೊಂದಲಗಳಿಗೆ ಕಾರಣವಾಗಿವೆ. ರಾಜಕೀಯ ಸ್ವಾರ್ಥಕ್ಕಾಗಿ ತಮಗೆ ತಕ್ಕಂತೆ ಇತಿಹಾಸವನ್ನು ತಿರುಚುವ ಮತ್ತು ಇದೇ ಸತ್ಯ ಎಂಬ ಭ್ರಮೆಯನ್ನು ಹುಟ್ಟುಹಾಕಿ, ಚರಿತ್ರೆಯ ಕುರಿತು ಮುಗ್ಧ ಕುತೂಹಲ, ಅಪಾರ ಆಸಕ್ತಿಯನ್ನಿಟ್ಟುಕೊಂಡ ಯುವ ಪೀಳಿಗೆಯನ್ನು ತಪ್ಪು ಹಾದಿಗೆ ಎಳೆಯಲಾಗುತ್ತಿದೆ. ಅಪರೂಪಕ್ಕಾದರೂ ನೈಜಸತ್ಯಗಳನ್ನು ಪ್ರಾಮಾಣಿಕವಾಗಿ ಕಟ್ಟಿಕೊಡುವ ಪ್ರಯತ್ನಗಳು ನಡೆಯುತ್ತಿವೆ. ವಸ್ತುನಿಷ್ಠ ಇತಿಹಾಸದ ದಾಖಲೆ ಇಂದಿನ ತುರ್ತು. ಈ ಪ್ರಯತ್ನದ ಭಾಗವಾಗಿ ಹು.ಬಾ ವಡ್ಡಟ್ಟಿಯವರು ಮುಂಡರಗಿ ಬ್ರಿಟಿಷ್ ವಿರೋಧಿ ಹೋರಾಟ ಕೃತಿಯ ಮೂಲಕ ಇತಿಹಾಸದ ಕರಾಳ ಸತ್ಯಗಳನ್ನು ಹೆಕ್ಕಿ ತೆಗೆಯುವ, ಶೋಷಣೆಯ ಆಳ ಮತ್ತು ಆಕೃತಿ ಎಂತಹದು ಎಂಬುದನ್ನು ತೋರಿಸುವ, ತನ್ಮೂಲಕ ಇಂದು ನಾವು ಬದುಕುತ್ತಿರುವ ಸ್ವಾತಂತ್ರ್ಯವೆಂಬ ಭ್ರಮೆಯ ಪೊರೆ ಕಳಚಿ ನಿಜ ಸ್ವಾತಂತ್ರ್ಯದ ಅಗತ್ಯತೆಯನ್ನು ಮನಗಾಣಿಸಿ, ಬದುಕಿನಲ್ಲಿ ಬದ್ಧತೆಯಿಂದ ನಡೆದುಕೊಳ್ಳಬೇಕಿರುವ ಜರೂರತ್ತನ್ನು ಪ್ರತಿಪಾದಿಸಿದ್ದಾರೆ.

ದೇಶವ್ಯಾಪಿಯಾದ ರಾಷ್ಟ್ರೀಯ ಹೋರಾಟಗಳ ಸ್ವರೂಪ ತುಂಬ ಸಂಕೀರ್ಣವಾದದ್ದು. ಈ ದೇಶದ ಇತಿಹಾಸವೆಂದರೆ ಮುಂಚೂಣಿಯಲ್ಲಿದ್ದುಕೊಂಡು ರಕ್ಷಣಾತ್ಮಕವಾಗಿ ವರ್ತಿಸಿದ ಹೋರಾಟದ ನಾಯಕತ್ವ ವಹಿಸಿಕೊಂಡವರ ಇತಿಹಾಸವಾಗಿಬಿಟ್ಟಿದೆ. ದೇಶದ ಹಳ್ಳಿಹಳ್ಳಿಗಳಲ್ಲಿ ಗುಲಾಮಗಿರಿಯ ವಿರುದ್ಧ ನಡೆದ ಪ್ರತಿರೋಧದ ಸ್ವರೂಪ, ತಾಕತ್ತು, ಬಲಿದಾನ ಎಂತಹದ್ದಾಗಿತ್ತೆಂಬುದು ಅವಗಣನೆಗೆ ಗುರಿಯಾಗಿದೆ. ಈ ಕೃತಿಯಲ್ಲಿ ಬರುವ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಅಧಿಕಾರಶಾಹಿ ಪ್ರಭುತ್ವದ ವಿರುದ್ಧ ಯಾವ ರೀತಿಯಾಗಿ ಸೆಣಸಬೇಕು, ಪ್ರಬಲ ಪ್ರತಿಸ್ಪರ್ಧಿಯೆದುರು ಅತ್ಯಂತ ಕಡಿಮೆ ಜನವಾದರೂ ಹೇಗೆ ಕೆಚ್ಚಿನಿಂದಲೇ ಗೆಲ್ಲಬಹುದು ಎಂಬುದಕ್ಕೆ ನೈಜ ಉದಾಹರಣೆಗಳಾಗಿದ್ದಾರೆ. ಕೊರ್ಲಹಳ್ಳಿಯ ಭರಮಾ, ಲಚುಮಯ್ಯ, ಹಮೀದ ಸಾಹೇಬ, ಸಿಂಗಟಾಲೂರಿನ ಚೆನ್ನ, ಹೆಸರೂರಿನ ಹೆರೆಪ್ಪಾ ಮುಂತಾದ ಸಾವಿರಾರು ಸ್ಥಳೀಯ ಸಾಮಾನ್ಯ ಜನ ಸ್ವಾತಂತ್ರ್ಯಕ್ಕೋಸ್ಕರ ಸಂಘಟಿತ ಹೋರಾಟ ಕಟ್ಟಿ ಏಕಕಾಲಕ್ಕೆ ಬ್ರಿಟಿಷರ ಗುಂಡಿಗೆ ಬಲಿದಾನವಾದ ದಾರುಣ ಸತ್ಯಗಳು ಯಾಕೆ ನಮ್ಮ ಚರಿತ್ರೆಯ ಮುಖ್ಯಧಾರೆಯಲ್ಲಿ ದಾಖಲಾಗಲಿಲ್ಲ ಎಂಬ ಪ್ರಶ್ನೆಯನ್ನು ಈ ಕೃತಿ ಹುಟ್ಟುಹಾಕುತ್ತದೆ.

ಭೌಗೋಳಿಕ ಸಂಪನ್ಮೂಲಗಳಿರುವ ಕಾರಣಕ್ಕೆ ಪ್ರಾದೇಶಿಕ ಪ್ರಾಮುಖ್ಯತೆ ಪಡೆದುಕೊಂಡ ಮುಂಡರಗಿ ಮತ್ತು ಸುತ್ತಲಿನ ಪ್ರದೇಶ ಬ್ರಿಟಿಷರನ್ನು ಆಕರ್ಷಿಸಿದ ಬಗೆಯನ್ನು ನಿಖರ ಮಾಹಿತಿ ಮತ್ತು ವೈಜ್ಞಾನಿಕ ವಿವರಗಳ ಮೂಲಕ ದಾಖಲಿಸಿರುವುದು ಒಂದು ನವೀನ ಪ್ರಯತ್ನ. ಆದರೆ ಈ ಭೌಗೋಳಿಕ ವಿವರ ಪ್ರಾರಂಭದಲ್ಲೇ ಅಗತ್ಯಕ್ಕಿಂತ ಹೆಚ್ಚಾದ ಕಾರಣಕ್ಕೆ ಕುತೂಹಲದ ಓದಿಗೆ ನೀರಸತೆ ತರುತ್ತದೆ.



ಈ ಕೃತಿಯ ವಿಶಿಷ್ಟತೆಯೆಂದರೆ ಇತಿಹಾಸದ ವಿವಿಧ ಮುಖಗಳನ್ನು ಸಮಾಜೋಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನವನ್ನಿಟ್ಟುಕೊಂಡು ದಾಖಲಿಸುವ ಪ್ರಯತ್ನ ಮಾಡಿರುವುದು. ಎಲ್ಲ ಕಾಲಕ್ಕೂ ರೈತರೇ ಹೆಚ್ಚು ಶೋಷಣೆಗೊಳಗಾಗುವವರು. ಈ ಕೃತಿಯಲ್ಲಿ ಚರ್ಚಿಸಲಾಗಿರುವ! ಬೆಳೆಗೆ ಮುಂಚೆಯೆ ತೆರಿಗೆ ಕಟ್ಟಬೇಕಿರುವ ಅನಿವಾರ್ಯತೆ' ದಲ್ಲಾಳಿಗಳ ಕ್ರೂರ ಕೈಚಳಕ ಮತ್ತು ಬೆನ್ನ ಮೇಲೆ ಕಲ್ಲು ಹೊರೆಸಿ ನಿಲ್ಲಿಸಿ ಶಿಕ್ಷಿಸುವ ಪ್ರಭುತ್ವದ ಹಿಂಸೆ ಮನವನ್ನು ಒಂದುಕ್ಷಣ ಕದಲಿಸಿ ಭೋಗಜಗತ್ತಿನ ವಾರಸುದಾರರಾದ ನಮಗೆಲ್ಲಾ ಮತ್ತೊಮ್ಮೆ ಸ್ವವಿಮರ್ಶಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮನಗಾಣಿಸುತ್ತದೆ.

ಮುಂಡರಗಿ ಭೀಮರಾಯ, ಹಮ್ಮಿಗಿ ಕೆಂಚನಗೌಡ, ನರಗುಂದದ ಬಾಬಾಸಾಹೇಬ, ಡಂಬಳದ ತಿರಮಲ ಶ್ರೀನಿವಾಸ ವೆಂಕಟಾದ್ರಿ ದೇಸಾಯಿ ಮತ್ತವರ ಅನೇಕ ಸಹಹೋರಾಟಗಾರರ ಹೋರಾಟದ ಚಲನೆ, ಪ್ರತಿಕ್ಷಣದ ನಡೆಯ ರೀತಿ, ಎದುರಿಸಿದ ಅವಘಡಗಳನ್ನು ನೈಜವಾಗಿ ದಾಖಲಿಸುವ ಕಾರ್ಯ ಸುತ್ತ್ಯಾರ್ಹವಾದರೂ ಇದನ್ನು ಇನ್ನೂ ಹೆಚ್ಚು ವಿಸ್ತಾರವಾಗಿ ಕಟ್ಟಿಕೊಡುವ ಅಗತ್ಯವಿತ್ತೇನೋ? ಎನಿಸುತ್ತದೆ.

ಮೈಲಾರ ಮಹಾದೇವ ಮತ್ತವರ ತಂಡ ಕಪ್ಪತ್ತಗುಡ್ಡದಲ್ಲಿ ಭೂಗತರಾಗಿದ್ದಾಗ ಅವರಿಗೆ ಇಲ್ಲಿನ ಸಾಮಾನ್ಯ ಲಂಬಾಣಿ ಜನ ಹೇಗೆ ಸಹಕರಿಸಿದರು ಮತ್ತು ಆ ಕಾರಣಕ್ಕೆ ಎಂತಹ ಚಿತ್ರಹಿಂಸೆಗೆ ಒಳಗಾದರು ಎಂಬ ನಿಜ ಇತಿಹಾಸ ನಾವು ಓದುತ್ತಿರುವ ಇಂದಿನ ಇತಿಹಾಸದಿಂದ ದೂರವೇ ಉಳಿದಿರುವುದು ಶೋಚನೀಯ.

ನಮ್ಮ ಪ್ರತಿಹಳ್ಳಿಯ ಪ್ರತಿಮನೆಯ ತ್ಯಾಗಬಲಿದಾನದ ಮಹಾನ್ ಚೇತನಗಳು ಬಯಸಿದ್ದು ನಾವು ಭಾವಿಸಿರುವ ಈ ಸ್ವಾತಂತ್ರ್ಯವಲ್ಲ, ಅದು ಸರ್ವಸಮಾನತೆಯ ಸಹಬಾಳ್ವೆಯ ಸೌಹಾರ್ದದ ಸ್ವಾತಂತ್ರ್ಯ ಎಂಬ ನಿಜವನ್ನು ಅರಿಯಲು ಪ್ರೇರೇಪಿಸುವ ಸ್ಥಳೀಯ ಇತಿಹಾಸದ ಒಳಹೊಕ್ಕು ವೈಜ್ಞಾನಿಕ ದೃಷ್ಟಿಕೋನ ಅಂತರ್ಗತವಾಗಿಸಿಕೊಂಡ ಸಂಶೋಧನಾತ್ಮಕ ಪ್ರಯತ್ನಗಳು ಇನ್ನೂ ಹೆಚ್ಚು ನಡೆಯಬೇಕಿರುವ ಅಗತ್ಯ ಈ ಕೃತಿಯಿಂದ ಸಾಬೀತಾಗುತ್ತದೆ. ಹು.ಬಾ. ವಡ್ಡಟ್ಟಿಯವರ ಬರಹದ ರೀತಿ ಇನ್ನೂ ಹೆಚ್ಚು ಭಾಷೆಯೊಂದಿಗಿನ ತದಾತ್ಮವನ್ನು ಅಪೇಕ್ಷಿಸುತ್ತದೆ. ಕೃತಿಯಲ್ಲಿನ ಎರಡನೇ ಅಧ್ಯಾಯದ ಕೆಲವು ಪುಟಗಳಲ್ಲಿ 'ಸಾಕಿಯವ Making History' ಪೂರ್ಣವೆನ್ನುವಷ್ಟು ಆವರಿಸಿಕೊಂಡಿದೆ. ದೀರ್ಘವೆನಿಸುವ ಅರ್ಥತಪ್ಪಿದ ವಾಕ್ಯಗಳು, ಅಕ್ಷರ ತಪ್ಪುಗಳು, ರಿಪೀಟೆಡ್ ಎನಿಸುವ ಹೇಳಿಕೆಗಳು ಇದ್ದೇ ಇವೆ. ಹು.ಬಾ.ರವರು ಮುಂದಿನ ಪ್ರಯತ್ನಗಳಲ್ಲಿ ಇವುಗಳ ಕಡೆ ಗಮನಹರಿಸಬಹುದು. ವರ್ತಮಾನದ ಪ್ರಭುತ್ವ ತಂದೊಡ್ಡಿರುವ ಅವಘಡಗಳಿಗೆ ಪ್ರತಿಯಾಗಿ ಪ್ರತಿರೋಧದ ಧ್ವನಿ ಹುಟ್ಟುಹಾಕುವ ಸ್ಥಳೀಯ ಚರಿತ್ರೆಯ ಕೃತಿಗಳಂತೂ ಇಂದಿನ ಅಗತ್ಯ ಎಂದಷ್ಟೇ ಹೇಳಬಹುದು. ವ್ಯಕ್ತಿಶ್ರೇಷ್ಠತೆಯಾಚೆಗಿನ ಸಾಮಾನ್ಯಜನರ ಧೋರಣೆ ಪ್ರಧಾನವಾದ ಇತಿಹಾಸವನ್ನು ಮತ್ತೆಮತ್ತೆ ಮರು ದಾಖಲಿಸಬೇಕಿದೆ.

● ವೀರಣ್ಣ ಮಡಿವಾಳ

ಉಪವಾಸದ ಕನಸು



ಹೊಗೆಯಾಡದ ಕೆಂಡವಿದೆ
ನನ್ನೊಳಗೆ
ಉಣದೆ ಮಲಗಿದ್ದಾಗ
ಸುಲ್ಪ ಉರಿದಂತೆನಿಸುತ್ತದೆ; ಉರಿ
ಜ್ವಾಲೆಯಾಗದೆ ಉಳಿಯಿತು
ಅದಕ್ಕೇ ಇರಬೇಕು
ಹಿರೀಕರಾದಿಯಾಗಿ ನಾವೆಲ್ಲ
ಉಪವಾಸ ಮಲಗುವುದೇ ಹೆಚ್ಚು!

ಕೆಂಡಕ್ಕೊಂದಿಷ್ಟು ಚುರುಕು ಮುಟ್ಟಿದರೆ
ಬಿಸಿ ಬಿಸಿ ಮಾತಾಡುತ್ತೇವೆ
ಬೆಳ್ಳಿಯಿಂದ ಖೈರ್ಲಾಂಜಿ
ಬದನವಾಳು ಕಂಬಾಲಪಲ್ಲಿಯೆಲ್ಲ ನೆನಪಾಗಿ
ನಿಗಿ ನಿಗಿಯಾಗಿ ಬಿಡುತ್ತೇವೆ
ಕ್ರಮೇಣ
ಉಪವಾಸ ಮಲಗಿ ಬಿಡುತ್ತೇವೆ.

ನಿಗಿ ನಿಗಿ ಕೆಂಡವೊಂದು
ನನ್ನಪ್ಪನ ಕನಸು ಕೆದಕಿದಾಗ
'ಬಾಬಾ ಸಾಹೇಬರು ಕೈ ತೋರಿ ನಿಂತಿದ್ದರಂತೆ'
ಬೆಳಕಾಗುತ್ತಲೆ ಅಪ್ಪ
ನನ್ನ ರಟ್ಟೆ ಹಿಡಿದು
ಶಾಲೆ ಹುಡುಕಿಬಿಟ್ಟ!

ಈಗೀಗ,
ನನ್ನ ಕೆಂಡದ ಹೊಳಪಲ್ಲಿ
ಜೀವದ ಬೆಲೆ ರಕ್ತದ ಮೌಲ್ಯ
ತೂಗಲ್ಪಡುತ್ತದೆ; ಬೆವರಿಗೂ ಮೆರುಗು
ಅಪ್ಪನ ಧಣಿಗೆ ಮಾತ್ರ ಬೆರಗು?
ಪ್ರಭುತ್ವದ ಹೆಗಲ ಮೇಲೆ
ಆಡಿಸುತ್ತಾ ಕೈಯ
ಶಾಲೆಯನ್ನೇ ಖರೀದಿಸಿಬಿಟ್ಟ!!
ಕೆಂಡದ ಹೊಳಪಿಗೆ ಸಾಣೆ ಹಿಡಿದಂತಾಗಿ
ಉಪವಾಸದ ರಾತ್ರಿಗಳು
ದಟ್ಟವಾಗುತ್ತವೆ; ಕನಸುಗಳು
ಹೆಪ್ಪುಗಟ್ಟುತ್ತವೆ.

ಕೆಂಡದ ಹೊಸ ಹೊಳಪು
ನನ್ನ ಕನಸನ್ನೂ ಕೆದಕುತ್ತದೆ;
ಪೂನಾದಲ್ಲಿ ಬಾಬಾ ಸಾಹೇಬರು
ಮತ್ತು ಮಹಾತ್ಮ
ಮತ್ತು ಗಾಂಧಿಯ ಹಟಕ್ಕೆ
ಎಚ್ಚರವಾಗುತ್ತದೆ

ಎಳೆ ಬಿಸಿಲಲ್ಲಿ ಅನಿಸುತ್ತದೆ;
ಮಹಾತ್ಮನ ಕನಸಂತೆ
ಇಂಡಿಯಾ ಬ್ರಿಟಿಷರಿಂದ
ಬಿಡುಗಡೆಯಾಗಿದೆ; ಮಹಾ ಮಾನವತಾವಾದಿ
ಊಹಿಸಿದ ವಾಸ್ತವದಲ್ಲಿ
ಭಾರತ ಸಿಕ್ಕು ನರಳುತ್ತಿದೆ; ನರಳಿಸುತ್ತಿದ್ದಾರೆ!

ಉಪವಾಸದ ಕನಸು ಉರಿ ಉರಿ!!



ಸಂತೋಷ ಗುಡ್ಡಿಯಂಗಡಿ
ಸಂಜನಗೂಡು


ಬಿಟ್ಟರೂ ಬಿಡದ ನಾಯಿ ಪ್ರೀತಿ!

ಕುಮಾರ್ ಬುರಡಿಕಟ್ಟಿಯವರ 'ಹೀಗೂ ಉಂಟೆ' ಈ ವಾರದ ಬರಹ ಓದಿದಾಗ ನನಗೊಂದು ನೆನಪಾದ ಘಟನೆ.

1989-90ರಲ್ಲಿ ನಾವು ನಮ್ಮ ಮನೆಯಲ್ಲಿ ಒಂದು ನಾಯಿಯನ್ನು ಸಾಕಿದ್ದೆವು. (ಗುಬ್ಬಿ ತಾಲ್ಲೂಕು ಮೂಗನಾಯಕ ಕೋಟೆ ಎಂಬ ಊರು). ಚಿಕ್ಕ ಮರಿಯಾಗಿದ್ದಾಗಿನಿಂದಲೂ ಅದನ್ನು ಚೆನ್ನಾಗಿ ಬೆಳೆಸಿದ್ದೆವು. ಹೊಲಗದ್ದೆ, ತೋಟದ ಕಡೆ ಹೊರಟರೆ ಯಾವಾಗಲೂ ಜೊತೆಯಲ್ಲಿ ಬರುತ್ತಿತ್ತು. ಅತ್ಯಂತ ನಂಬುಗೆಯ ಪ್ರಾಣಿ ಅದಾಗಿತ್ತು. ಹೆಸರು ಕರಿಯ ಎಂದು.

ಕ್ರಮೇಣ ಇದು ನಮ್ಮ ಮನೆಗೆ ಬರುವವರೆಲ್ಲರ ಮೇಲೆ ಜೋರಾಗಿ ಬೊಗಳುತ್ತಾ ಕಚ್ಚುವಂತೆ ಹೋಗುತ್ತಾ ಅವರನ್ನು ಗಾಬರಿಪಡಿಸುತ್ತಿತ್ತು. ಹಾಗೆಯೇ ಕೆಲವರನ್ನು ಕಚ್ಚಿ ಗಾಯ ಮಾಡಿ ಅವರಿಂದ ನಾವು ಬೈಸಿಕೊಳ್ಳುವಂತೆ ಮಾಡಿತ್ತು. ಆಮೇಲೆ ಅದನ್ನು ಕಟ್ಟಿಹಾಕಲು ಪ್ರಾರಂಭಿಸಿದೆವು. ಆಗ ಅದರ ಬೊಗಳುವಿಕೆ ಜೋರಾಗಿ ನಮಗಂತೂ ಬೇಜಾರಾಗಿ ಹೋಯ್ತು. ಎಲ್ಲಿಯಾದರೂ ಹೋಗಲಿ ಎಂದು ಬಿಟ್ಟುಬಿಟ್ಟೆವು. ಅದರ ಹೋಗುವ ಮನಸ್ಸು ಬಳಿ ಇರುತ್ತಿತ್ತು. ಇದ್ದಕ್ಕಿದ್ದ ಹಾಗೆ ಯಾರನ್ನಾದರೂ ಕಚ್ಚಿ ಮತ್ತೆ ನಮ್ಮನ್ನು ಪೇಚಿಗೀಡುಮಾಡುತ್ತಿತ್ತು.

ಕಡೆಗೆ ಇದನ್ನು ಎಲ್ಲಿಯಾದರೂ ತೆಗೆದುಕೊಂಡು ಹೋಗಿ ಬಿಟ್ಟುಬಿಡಲು ನಿರ್ಧರಿಸಿ 12 ಕಿ.ಮೀ. ದೂರದಲ್ಲಿರುವ ನಮ್ಮ ನೆಂಟರ ತೋಟದ ಮನೆ ಕಾಯಲು ಹಾಕಬಹುದೆಂದು ನಿರ್ಧರಿಸಿದೆವು. ನಾಯಿಯನ್ನು ಅದನ್ನು 2-3 ಜನ ಭದ್ರವಾಗಿ ಹಿಡಿದು ನಾಲ್ಕು ಕಾಲುಗಳನ್ನು ಕಟ್ಟಿ (ಅದು ಜೋರಾಗಿ ಬೊಗಳುತ್ತಿದ್ದರೂ) ಒಂದು ಬಿದಿರಿನ ಮಂಕರಿಯಲ್ಲಿ ಮತ್ತೆ ಹಗ್ಗದಿಂದ ಕಟ್ಟಿ ಅದನ್ನು ಒಂದು ಸೈಕಲ್ಲಿನ ಹಿಂಭಾಗದ ಕ್ಯಾರಿಯರ್‌ಗೆ ಕಟ್ಟಿ ಸೈಕಲ್ಲಿನಲ್ಲೇ ತೆಗೆದುಕೊಂಡು ಹೋಗಲು ಒಬ್ಬನ ಕೈಲಿ ಕಳುಹಿಸಿದೆವು. ಸದ್ಯ ಹೋಯ್ತಲ್ಲ ಎಂದು ನೆಮ್ಮದಿಯಾದೆವು. ಮತ್ತು ತಮ್ಮ ತಮ್ಮ ಕೆಲಸಗಳಿಗೆ ಹೊರಟೆವು.



ಸಂಜೆ 6 ಗಂಟೆಗೆ ಸುಮಾರಿಗೆ ಮನೆಗೆ ಬಂದು ನೋಡಿದರೆ ಆ ನಾಯಿ ನಮ್ಮ ತಾಯಿಯ ಕಾಲು ನೆಕ್ಕುತ್ತಾ ಮೂಸುತ್ತಾ ಬಾಲ ಅಲ್ಲಾಡಿಸುತ್ತಾ ಬೆಚ್ಚನೆ [illegible] ಇದೆ!. ನಾವು [illegible] ಕಳುಹಿಸಿದ ನಂತರ ಆತ ಸೈಕಲ್ [illegible] 12 ಕಿ.ಮೀ. ದೂರದ ತೋಟದ [illegible] ಆ ನಾಯಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚುತ್ತಿದ್ದಂತೆ ಅದು ತಪ್ಪಿಸಿಕೊಂಡು ಓಡಲು ಶುರುಮಾಡಿ [illegible] ಓಡಿಹೋಯಿತು ಎಂದು ಈತ ಸುಮ್ಮನಾದನಂತೆ. ಆದರೆ ಇದು ಎಲ್ಲೆಲ್ಲಿಯೋ ಸುತ್ತಿ [illegible] ಕೆಸರು ಮಾಡಿಕೊಂಡು ಮತ್ತೆ ನಮ್ಮ ಮನೆಗೆ, ಓಡಿಬಂದಿದೆ. ಅಲ್ಲಿದ್ದವರಿಗೆಲ್ಲ ಆಶ್ಚರ್ಯ. ಈ [illegible] ಹೇಗೆ ಹುಡುಕಿಕೊಂಡು ಬಂತು ಅಂತ.

ಆಗ ನಮ್ಮ ತಾಯಿ ನಾಯಿಯನ್ನು ಚೆನ್ನಾಗಿ ನೀರಿನಿಂದ ತೊಳೆದು ಸ್ನಾನ ಮಾಡಿಸಿ [illegible] ನಾಯಿಯ ಜೊತೆ ಕಳುಹಿಸಿದಾತನೂ ವಾಪಸ್ ಬಂದಾಗ ಅವನಿಗೂ ಆಶ್ಚರ್ಯ ಹೇಗೆ ವಾಪಸ್ ಬಂತು ಅಂತ.

-ಎಂ. ಸದಾಶಿವ, ತುಮಕೂರು

ಸರಕಾರದಲ್ಲಿ ದುಡ್ಡಿದ್ರೆ ಎಡೂರಪ್ಪ್ಯಾಕೆ ಡಿಲ್ಲಿಗೋದನೂ!

ಉಗ್ರಿ ಇದ್ದಕ್ಕಿದ್ದಂತೆ ನಗಾಡಿ.

"ನೋಡು ಎಡೂರಪ್ಪನ ಪ್ಲ್ಯಾನ್ಯಂಗದೆ. ಆಗಲೆ ...ಸುಗುತ್ತಾ ಅವುನೆ" ಎಂದ.

"ಎಲ್ಲಿ ನುಸುಗುತ್ತಾ ಇದ್ದನ್ನ?" ಎಂದ ಕಾಳಮಾವ.

"ಹ್ವಳಬಂದು ಕೊಚಗಂಡೋಗಿರೊ ಏರಿಯಾದಲ್ಲಿ ...ನೆ ಕಟಗಳೋರಿಗೆ ನಾಲ್ಕು ಪರಸೆಂಟಲ್ಲಿ ಬಡ್ಡಿತಗಂಡು

...ಯ ಯ ಲು ಸೀ ಮೆ

ಕಟ್ಟೆಪುರಾಣ

▶▶ಬಿ. ಚಂದ್ರೇಗೌಡ

...ದ ಕೊಡಿ ಅಂತ ಬ್ಯಾಂಕಿನೋರಿಗೆ ಹೇಳ್ತನಂತೆ. ಇದು ...ದುಗಳೊ ಪ್ಲ್ಯಾನಲವೆ."

"ಅದ್ಯಂಗೇ ಅಂತ?" ಎಂದ ಸೀರ.

"ಮನಿಲ್ದೋರ್ನ ಬ್ಯಾಂಕಿನೋರನು ತಗಲಾಕಬುಟ್ಟು ...ಮ ಸರಕತ್ತನೆ. ಆಗ ಬ್ಯಾಂಕಿನೋರು ಸಾಲಗಾರ್ರು ...ನ್ಯಾಡ್ತರೆ."

"ಆಸ್ರಯದ ಮನೆನಾರ ಕಟ್ಟಿಕೊಡಬವುದಿತ್ತು ಕಂಡ್ಯ" ...ದಳು ಜುಮ್ಮಿ.

"ಆಸ್ರಯದ ಸ್ಕೀಮನೆ ಬ್ಯಾಗಲಾಕ್ಯವೆ. ಇನ್ನೆಲ್ಲಿ ...ಕೊಟ್ತದೆ. ಆಶ್ರಯದ ಮನೆಕತೆ ಎಸ್ಸೆಂ ಕೃಷ್ಣನ ಕಾಲಕೆ ...ಗುದೋಗ್ಯದೆ. ಆಗ ಏನಿಲ್ಲಾ ಅಂದ್ರು ಐದಾರು ಲಕ್ಷ ...ರಿ ಕಟ್ಟಿಕೊಟ್ರು. ಪ್ರಚಾರ ಸಿಗಲಿಲ್ಲ ಅವುಕೆ."

"ಆಸ್ರಯ ಬಂಗಾರಪ್ಪುಂದು" ಎಂದ ಸೀರ.

"ಬಂಗಾರಪ್ಪಂದೆ ಸರಿ. ಅವುನು ಅದ ಸರಿಯಾಗಿ ...ಪಲಿಲ್ಲ" ಎಂದ ಉಗ್ರಿ.

"ಈಗೇನವುನ ಸುದ್ದಿನೇ ಇಲವಲ್ಲಾ?"

"ಅವುನಾಡಿದಾಟದಿಂದ ಕಿಸಗಂಡು ಬಿದ್ದು ...ರಯಿಸಿಗತ್ತಾ ಇರಬವುದು."

"ಅವುನೇನು ಒಸಿ ಮ್ಯರದನೆ. ಮ್ಯರದೆ ಉಂಟಗಂಡಾ ...ಗೆ. ಅವುನೇನಾರ ಸರಿಯಾದ ರಾಜಕಾರಣನೆ ಮಾಡಿದ್ರೆ ...ತ್ತು ಇಂತ ಸ್ಥಿತಿ ಬತ್ತಿರಲಿಲ್ಲ."

"ಅವುನಿಗೆ ಸರಿಕಂಡದ್ದ ಮಾಡಿದ ಬುಡು" ಎಂದ ...ಮಾವ.

"ಅವುನ ಕೇಳಿದ್ರೆ ಅಂಗೆ ಅಂತನೆ ಕಣಮಾವ. ...ವುದ್ಕು ನನ್ನ ಪ್ರಕಾರ ಅಂತನೆ. ಅವುನ ಪ್ರಕಾರನೆ ...ದಿ ಅಪ್ಪ ಮಕ್ಕಳು ಯಲ್ಲ ಸೋತು ಕುಂತವುರೆ. ...ದಿದ್ದುನ್ನೊ ಮಾರಾಯ ಅಂತ ಅವುನ್ನೊಡೆ ಹೇಳಿರದು."

"ತಿರಗ ಬತ್ತನೆ ತಗೊ" ಎಂದ ಸೀರ.

"ತಿರಗ ಬರೊ ಕಾಲ ಹೋಯ್ತು ಕಣ ಮಾವ ..ಹಿಂದೆ ಮುಲುಕಿ ಬಿದ್ದೋರ್ಯಲ್ಲ ಯಂಗೋ ಮ್ಯಾಕತ್ತಿ ...ದೇ ಬುಡೋರು. ಆದ್ರೆ ಈಗ ಅಂಗೆ ಬರಕ್ಕೆ ಸಾಧ್ಯವೇಯಿಲ್ಲ, ಕಾಲ ತೀರ ಅಂಗೆ ಬದ್ಲಾಗ್ಯದೆ."

"ಅವುನು ಯಲಕ್ಷನ್ನಿಗೆ ನಿಂತಿದ್ದೆ ಅಲ್ಲ ಕಂಡ್ಯ. ಮಗನ್ನ ನಿಲ್ಲಿಸಿ ಹಿಂದ ಸರಕಬೇಕಾಗಿತ್ತು, ಮಗ ಸೋತ್ರ ಬ್ಯಲಿರದು. ಈಗಿನ ಅವುಮಾನ ಆಯ್ತಿರಲಿಲ್ಲ."

"ವಯಿಸಾದೋರಿಗೆ ಯಾವನು ಬುದ್ದಿ ಹೇಳ್ತನೇಳು. ಆ ಜಾರ್ಜ್ ಫರ್ನಾಂಡಿಸ್ ಮಾತಾಡಕ್ಕೂ ಆಯ್ತಿರಲಿಲ್ಲ, ನ್ಯಡಿಯಕ್ಕೂ ಆಯ್ತಿರಲಿಲ್ಲ, ಆದ್ರು ನಿಂತು ಸೋತ. ಯಾರೇಳಿದ್ರೂ ಕೇಳಲಿಲ್ಲ, ಅದರಲ್ಲೂ ಸೋಷಲಿಸ್ಟರು ಯಾರ ಮಾತ್ನೂ ಕೇಳದಿಲ್ಲ, ಅಂಗಾಗಿ ಯಲ್ಲ ಹಾಳಾಗೋದ್ರು."

"ಸೋಸಿಲಿಟ್ರು ಈಗ್ಯಾರಿದ್ದರೂ?"

"ಯಾರೂ ಇಲ್ಲ, ಯಲ್ಲ ಸಿಕ್ಕಸಿಕ್ಕದ ಪಾರ್ಟಿವಳಿಕೆ ನುಗ್ಗಿ ಕರಿಗೋದ್ರು. ಯಾವ ಪಾರ್ಟಿಗಾರ ಹೋಗ್ಲಿ, ಕೆಲುವುರು ಬಿಜೆಪಿಗೆ ಸಪೋರ್ಟು ಮಾಡಿದ್ರಲ್ಲ ಹೇಳು."

"ಅಂತಾ ದ್ಯಾವೇಗೌಡ್ರೆ ಬಿಜೆಪಿಗೆ ಸಪೋರ್ಟು ಮಾಡಿದ ಮ್ಯಾಲೆ ಇನ್ನಾರು ಮಾಡಿದ್ರೆ ಏನೊ?" ಎಂದು ವಾಟಿಸ್ಸೆ ಬಂದ.

"ಅವುರೆಲ್ಲ ಸಪೋರ್ಟು ಮಾಡಿದ್ರೂ ಮಗ ಮಾಡಿದ್ದ ಕ್ಯಲಸ ನೋಡಿ ಇಪ್ಪತ್ತು ತಿಂಗಳು ಸಯಿಸಿಗಂಡು ಆಮ್ಯಾಲೆ ಬಿಜೆಪಿಗೆ ಸಪೋರ್ಟು ಮಾಡಲಿಲ್ಲ."

"ಮಾಡ್ಲಿಲ್ಲ ಸರಿ ಕಣೊ ಉಗ್ರಿ, ಆದ್ರಿವತ್ತು ಅವುರಿಂದ್ಲೆ ತಾನೆ ಇದ್ಯಲ್ಲ."

"ಅದ್ನೆ ಏಟು ಸತಿ ಮಾತಾಡ್ತಿರ್ಲ" ಎಂದ ಕಾಳಮಾವ.

"ಕೆಲುವು ಮ್ಯಾಟ್ರು ಅಂಗೆ ದ್ವಡಪ್ಪ. ನೀನು ಯಾವುದೇ ವಿಷಯ ಮಾತಾಡಿದ್ರೂ ಬಂದು ಸೇರಿಕತ್ತವೆ. ಏನು ಮಾಡಕ್ಯಾಗದಿಲ್ಲ. ಇವತ್ತು ಕರ್ನಾಟಕದ ಜನ ತೊಂದರೆ ಪಡ್ತಾಯಿದ್ರೆ ಅದಕ್ಕೆ ಮೂಲ ಕಾರಣ ಇವರೆ ಅಲವೆ."

"ನೀನೇಳದು ಯಂಗಾಯ್ತು ಅಂದ್ರೆ, ಪ್ರವಾಹ ಬಂದಿದ್ದೂ ಇವುರಿಂದ್ಲೆಯಾ ಅನ್ನಂಗಾಯ್ತು."

"ಪ್ರವಾಹ ರಾಜಕಾರಣಿಗಳು ತಂದಿದ್ದಲ್ಲ ದ್ವಡಪ್ಪ. ಆದ್ರೆ ಪ್ರವಾಹ ಬಂದಾಗ ವಳ್ಳೆ ಸರಕಾರ ಇರಬೇಕು. ಅದಿಲ್ಲ ಅಂದಾಗ ಅದನ್ನ ಯಾರು ತಂದು ಮಡಗಿದ್ರು ಅವುರನ್ನ ಬೈತಿವಿ."

"ಬೋದ್ರೇನು ಬತ್ತ?"

"ನಮಿಗೆ ಕ್ಯಲಸಿನ್ನೇನು ಹೇಳು. ಅವುರಿವುರ ಬೈಯ್ಯದೆ ಕ್ಯಲಸ. ಕಾಂಗ್ರೆಸ್ಸಿನೋರು, ದಳದೋರು ಬಾಯಿಬುಟ್ರೆ ಬಿಜೆಪಿ ಬೈತರಲ್ಲ, ಅಂಗೆ ನಾವು ಬೈತಾಯಿರತಿವಿ. ಆದ್ರೆ ಎಡೂರಪ್ಪ ಕೇರ್ ಮಾಡ್ತಯಿಲ್ಲ."

"ಅದ್ಕೆ ಇವುರನ್ಯಲ್ಲ ಬುಟ್ಟು ಡೆಲಿಗೋದನೇನೊ?"

"ಇವುರನ್ಯಲ್ಲ ಬುಟ್ಟು ಹೋಗಲಿಲ್ಲ ಕಣೊ. ಇವುರೇ ಹೋಗಲಿಲ್ಲ, ಇವುರು ಕೇಳದು ಒಂಥರಾ ಸರಿಯಾಗ್ಯದೆ ಕಣೊ ಉಗ್ರಿ."

"ಯಂಗೆ ಸರಿಯಾಗ್ಯದೊ?"


"ಯಂಗೇ ಅಂದ್ರೆ, ಜನ ಕೊಟ್ಟರೊ ದುಡ್ಡು ಸರಕಾರದ ದುಡ್ಡ ಮೊದ್ಲು ಸರಿಯಾಗಿ ಕರಚು ಮಾಡು. ಆಮ್ಯಾಲೆ ಕೇಳು. ಇನ್ನು ದವಡೆ ತುಂಬ ತುಂಬಿಕಂಡು ತಿಂತಾಯಿದ್ದಿ, ಆಗ್ಲೆ ಕೈಯಾಕದ್ರೆ ಏನೇಳಬೇಕು ಅಂತ ಕುಂತವುರೆ."

"ಸರಕಾರದಲ್ಲೆಲ್ಲಿ ದುಡ್ಡಿದ್ದತೊ? ಅಲ್ಲಿ ಒಂದು ಪೈಸನೂ ಇರಂಗೆ ಕಾಣ್ತಯಿಲ್ಲ, ಅದ್ಕೆ ಪ್ರಧಾನಿತಕ್ಕೆ ಹೋಗ್ಯವುನೆ. ಅವುನ ಜ್ವತೆ ನಾವು ಹೋದ್ರೆ ಪ್ರಧಾನಿ ಕೇಳಿದೋಟು ದುಡ್ಡು ಕೊಟ್ಬೇಬುಟ್ರೆ ಗತಿಯೇನು ಅಂತ ಇವುರ್ಯಾರೂ ಹೋಗಿಲ್ಲ, ಆದ್ರು ಪ್ರಧಾನಿ ಕೊಡ್ತಿನಿ ಅಂದನಂತೆ."

"ಇನ್ನೇನಂದನೂ? ಕೊಡದಿಲ್ಲ ಅಂದನೆ? ಆಯ್ತು ಕೊಡ್ತಿನಿ ಅಂದು ಕಳಿಸಿರತನೆ. ಆಮ್ಯಾಲೆ ಆಸ್ಕರ್ ಫರ್ನಾಂಡಿಸ್, ಮೊಯ್ಲಿ ಇವುರ್ಯಲ್ಲ ಸೇರಿಕಂಡು ಕೊಡದೊ ಬ್ಯಾಡವೊ ಅಂತ ಹೇಳ್ತರೆ. ಅಂತೂ ಪರಿಯಾರ ಕೇಳಿ ಈ ಜಗಳದಲ್ಲೂ ರಾಜಕೀಯ ಮಾಡಿಕಂಡು ಕುಂತವೆ."

"ದ್ಯಾವೇಗೌಡ ಮನಸು ಮಾಡಿದ್ರೆ ಕೊಡಸಬಲ್ಲ" ಎಂದ ಕಾಳಮಾವ.

"ಮಾಜಿ ಪ್ರಧಾನಿ ಮಾತಿಗೆ ಹಾಲಿ ಪ್ರಧಾನಿ ಬ್ಯಲೆ ಕೊಡ್ತನೆ? ಆದ್ರು ದ್ಯಾವೇಗೌಡ್ರು ಕಾಲ ನೋಡಿ ಕಾಗದ ಬರಿತರೆ."



"ಊ ಕಣೊ ಉಗ್ರಿ, ದ್ಯಾವೇಗೌಡ್ರು ಕಾಗದ ಬರಿಯಕ್ಕೂ ಕಾಲ ನೋಡ್ತರೆ ಅನ್ನದು ನಿಜ. ಅದರಲ್ಲೂ ಧೋಸರು ಹೇಳಿದಂಗೆ, ಕಾಲ ಧಿಕ್ಕು ಗಳಿಗೆನ್ಯಲ್ಲ ನೋಡಿ ಬರುಸ್ತರೆ. ಆದ್ರೆ ಕಾಲ ನೋಡೋರು, ಗಳಿಗೆ ನೋಡರು, ಹವಮಾನ ಹೇಳೋರು, ಪ್ರವಾಹದ ಟೈಮಲ್ಲಿ ಏನು ಮಾಡತಿದ್ರು ಅಂತ."

"ನನಿಗೂ ಅದೇ ಯೋಚನೆ ಕಣೊ ವಾಟಿಸ್ಸೆ. ಊರಿಗೂರೆ ಕೊಚಗಂಡೊಗದಕಿಂತ ಮುದ್ಲು ಹವಾಮಾನದೋರು ಏನು ಮಾಡ್ತಾಯಿದ್ರು ಅಂತ. ಆ ನನಮಕ್ಕಳು ಕನಿಷ್ಠ ಸರಕಾರಕ್ಕಾದ್ರು ಎಚ್ಚರಿಕೆ ಕೊಟ್ಟಿದ್ರೆ ಅವುರಾದ್ರೂ ಗಂಜಿ ಕೇಂದ್ರನಾರ ರಡಿ ಮಾಡಬವುದಿತ್ತು."

"ಸರಕಾರಕ್ಕೆ ಅವುರು ಹವಮಾನದ ರಿಪೋರ್ಟ್ ಕೊಟ್ಟಿರತರೆ ಕಣೊ. ಆದ್ರೆ ಸರಕಾರದೋರು ಸುತ್ತೂರ ಮಠದಲ್ಲಿ ಸೇರಿಕೊಂಡು ಕರ್ನಾಟಕವ ಯಂಗೆ ಮುಂದಾ ವೋಚಬೇಕು ಅಂತ ಮೋದಿ ಕೈಲಿ ಬುದ್ದಿ ಹೇಳಿಸಿಗತ್ತಾಯಿದ್ರು. ಚಾಡಿಮಾತ ಕೇಳುವಾಗ ಬ್ಯಾರೆ ಮಾತು ಕೇಳದಿಲವಂತೆ. ಅಷ್ಟರಲ್ಲಿ ಮಳೆ ಬತ್ರ ಪ್ರವಾಹನು ಬಂತೂ. ಅದ ನೋಡಿಕಂಡು ಹವಾಮಾನದೋರು ಸುಮ್ಮನಾದ್ರು ಅತ್ತಗೆ. ಮದ್ಲೆ ಅವುರು ಯಂಥಾ ಟೇಮಲ್ಲು ಹಗುರದಿಂದ ಸಾಧಾರಣ ಮಳೆಯಾಗುವ ಸಂಭವಯಿದೆ, ಒಳನಾಡಲ್ಲಿ ಒಣ ಹವೆ ಇದೆ ಅಂತ ಹೇಳಿಹೇಳಿ ಅದ್ನ ಬಾಯಿಪಾಠ ಮಾಡಿಕಂಡವುರೆ. ಅಂತ ಜನಕೆ ನಿಜವಾದ ಹವಾಮಾನ ಯಂಗೆ ಗೊತ್ತಾಯ್ತದೊ. ಅಂತೂ ಅವುರಿಗೂ ಅವುಮಾನಾಯ್ತು."


"ಅವುರಿಗವು ಯಾನಾಯ್ತು ಅಂತ ಏನಂತಿ. ಅದವುರಿಗೆ ಏನೂ ಅನ್ನಸದೇಯಿದ್ರೆ?"

"ಆದೇ ಕಣೊ ಉಗ್ರಿ ಆಗಿರದು. ಜನ ಮದ್ಲು ಮರಿಯಾದಿಗೆ ಅಂಜತಿದ್ರು, ಮಾನಕ್ಕೆ ಅಂಜತಿದ್ರು. ಆದ್ರಿವತ್ತು ಏನಾಗ್ಯದೆ ನೋಡು. ಸರಕಾರ ಕೊಡ್ತಾಯಿರೋ ಪರಿಯಾರವ ತೋಳು ಬಲಯಿರೋರು ಯರಡು ಮೂರು ಸತಿ ಈಸ್ಕಂಡು ತಿಂತಾಯಿದ್ದರಂತೆ. ಇನ್ನು ಕೆಲವರಿಗೆ ಚೆಕ್ ಕೊಟ್ರೆ ಅದ ಕ್ಯಾಶ್ ಮಾಡಿಸಿಗಳಕ್ಯಾಗದೆ ಮಾರಿಕತ್ತಾಯಿದ್ದರಂತೆ. ಪ್ರವಾಹದ ಜೊತೆಗೆ ಇವು ಬ್ಯಾರೆಯಾ. ನಾವು ಯಾವು ಯಾವುಕ್ಕೆ ಲ್ವಚಗರಿಯನ ಹೇಳು."

"ಅವ್ಯಲ್ಲ ಯಲ್ಲಾ ಕಾಲ್ದಲ್ಲೂ ಇದ್ದವೆಯಾ ಕಣೊ. ಮದ್ಲಿಗೆ ಕಾಂಗ್ರೆಸ್ ಸರಕಾರ ಆಶ್ರಯದ ಮನೆ ಕೊಡ್ತಲ್ಲಾ ಆಗ ಯಲ್ಲಾ ಇದ್ದೊರೆಯಾ ಕ್ವಟಗೆ ಕಟ್ಟಿಸಿಗಂಡ್ರು. ಇನ್ನ ಅಧಿಕಾರಿಗಳು ಕೊಡುವಾಗ್ಲೆ ಮೂರುಸಾವುರ ಹಿಡಕಂಡು ಕೊಡತಿದ್ರು. ಇನ್ನ ಸೌಚಾಲಯಗಳಂತೂ ಯಲ್ಲಾ ಊರಲ್ಲೂ ಬೇಕಾದೊಟವೆ ಅಂತ ಸರಕಾರದ ದಾಖಲೆಲೆ ಅದೆ. ಹೋಗಿ ಹುಡುಕಿದ್ರೆ ಒಂದೂ ಇಲ್ಲ, ಅಂಗೆ ಯಡೂರಪ್ಪನ ಬರ ಪರಿಯಾರದ ಕತೆ. ಇವತ್ತು ಗೊತ್ತಾಗದಿಲ್ಲ ಮುಂದೆ ಗೊತ್ತಾಯ್ತದೆ."

"ಮುಂದ್ಯಾಕೊ ಉಗ್ರೀ, ಈಗ್ಲೆ ಗೊತ್ತಾಯ್ತಾ ಅದಲ್ಲೊ. ಮಠ ಮಾನ್ಯಗಳು ಮನೆ ಕಟ್ಟಿಸಿ ಕೊಡ್ತಿವಿ ಅಂದಾಗ್ಲೆ ಹೋಗಿ ಎಲ್ಲ ಕಟ್ಟತಿರಿ, ಎಷ್ಟು ಕಟ್ಟತಿರಿ ಅಂತ ಕೇಳಬೇಕು. ಆ ರೆಡ್ಡಿಗಳ ನೀವೇನು ಮಾಡ್ತಿರಿ ಅಂತ ಕೇಳಬೇಕು. ಅಧಿಕಾರಿಗಳ ನಿಮಗೇನುಬೇಕು, ಅನುಭವ ಇದ್ದತ್ತೇ, ಇರೋರ ವರ್ಗ ಮಾಡಿ ಅಂತ ಕೇಳಬೇಕು. ಅದನ್ಯಲ್ಲ ಬುಟ್ಟು ಮೂರು ಜನ ವಿಲೇಜ್ ಅಕೌಟೆಂಟ್ ಸಸ್‌ಪೆಂಡ್ ಮಾಡಿ ಮನಮೋಹನಸಿಂಗನತ್ರಕ್ಹೋದ ಅಂದ್ರೆ ಎಡೂರಪ್ಪನ ಕ್ಯಾಪಾಸಿಟಿ ಅಲ್ಲೆ ಗೊತ್ತಾಯ್ತದಪ್ಪ." ●

...ನಾಯಕರೊಬ್ಬರ ಮಾತು



...ಮೊನ್ನೆ ಬಿಜೆಪಿಗಳ ಒಂದು ಪ್ರತಿಭಟನೆ ಇತ್ತು. ಅದು ಯಡಿಯೂರಪ್ಪ, ಅನಂತರಾಮು ...ಂತಾದವರು ತಮ್ಮ ಬಿಜೆಪಿ ಕಾರ್ಯಕರ್ತರೊಂದಿಗೆ ಬೆಂಗಳೂರು ದೂರದರ್ಶನದೆದುರು ...ಸಿದ ಪ್ರದರ್ಶನ ಮತ್ತು ಪ್ರತಿಭಟನೆ. ನಾನು ಅಲ್ಲಿಯ ಕೆಲವರು ನೌಕರರನ್ನು ಸಂಪರ್ಕಿಸಿ ...ದ್ದೇನು ಅಂದೆ; ಇದಾದ ಮೇಲೆ ದೂರದರ್ಶನ ಡೈರೆಕ್ಟರ್ ಅನೀಸ್ ಉಲ್ ಹಕ್ ಅವರಿಗೆ ...ಬಂದು ರಜಾ ತೆಗೆದುಕೊಂಡಿದ್ದರು.

...ದೂರದರ್ಶನ ಎಷ್ಟು ಕೆಟ್ಟಿದೆ ಎಂಬುದು ಎಲ್ಲರಿಗೂ ಗೊತ್ತು. ಇಲ್ಲಿ ದೊರೆಯುವ ...ಸರ್ ಮತ್ತು ಹಣಕ್ಕಾಗಿ ಜನ ಮುಗಿಬೀಳುತ್ತಾರೆ; ಇಲ್ಲಿ ಕಾಣಿಸಿಕೊಳ್ಳುವುದೇ ನಮ್ಮಂಥವರಿಗೆ ...ಸೋಚವಾಗುತ್ತದೆ. ರಾಜಕೀಯ ಪಕ್ಷಗಳಂತೂ ದೂರದರ್ಶನದ ಕೃಪೆಗಾಗಿ ಹಾತೊರೆಯುತ್ತವೆ. ...ಅದ್ಭುತ ಕಾರ್ಯಗಳು, ಸಾಹಸಗಳು ದೂರದರ್ಶನದಲ್ಲಿ ಬರಬೇಕೆಂದು ತವಕಿಸುತ್ತವೆ.

"ಬಿಜೆಪಿಯವರು ಏಕೆ ಪ್ರತಿಭಟಿಸಿದರು?" ಅಂದೆ.


"ಅವರ ಏಕತಾ ಯಾತ್ರೆ ಬಗ್ಗೆ ದೂರದರ್ಶನ ವರದಿ ಮಾಡಿಲ್ಲವಂತೆ. ಅದಕ್ಕೇ ನೂರಾರು ...ರನ್ನು ಕರೆತಂದು ಪ್ರತಿಭಟಿಸಿದರು. ಹೇಗೆ ಪ್ರತಿಭಟಿಸಿದರು ಗೊತ್ತೆ? ಯಡಿಯೂರಪ್ಪ ತಾವೊಬ್ಬ ...ರುಕ ಎಂಬುದನ್ನು ಮರೆತಂತಿತ್ತು. ಅನೀಸ್ ಉಲ್ ಹಕ್ ಮುಸ್ಲಿಮರು. ಕಾಂಗ್ರೆ ಈಗ ...ರ್ನಾಟಕದಲ್ಲಿ ಅಧಿಕಾರದಲ್ಲಿದೆ. ಯಡಿಯೂರಪ್ಪ ಹಕ್‌ಗೆ ಹೇಳಿದರು, "ನಿಮ್ಮನ್ನು ಯಾಕೆ ಇಲ್ಲಿ ...ದು ಹಾಕಿದ್ದಾರೆ ಅಂತ ನನಗೆ ಗೊತ್ತಿಲ್ಲವಾ? ನೀವು ಕಾಂಗ್ರೆಸ್ ಏಜಂಟು. ಸಾಬಿಯೊಬ್ಬನನ್ನು ಇಲ್ಲಿ ...ನಮಗೆ ತೊಂದರೆ ಕೊಡಬೇಕೆಂದು ಮಾಡಿದ್ದಾರೆ. ನಿಮ್ಮ ಮತ್ತು ಕಾಂಗ್ರೆಸ ಕುತಂತ್ರ ನಡೆಯೋಲ್ಲ" ...ಹಕ್ ಹೇಳಿದರು. "ನೀವು ದೂರದರ್ಶನದ ಡೈರೆಕ್ಟರ್ ಹತ್ರ ಮಾತಾಡ್ತಿದೀರೋ, ಒಬ್ಬ ಮುಸ್ಲಿಂ ...ಮಾತಾಡ್ತಿದೀರೋ ತೀರ್ಮಾನಿಸಿಕೊಳ್ಳಿ, ನನ್ನ ಜಾತಿ ಪ್ರಸ್ತಾಪಿಸಿ ಮಾತಾಡೋದಾದ್ರೆ ಮನೆಗೆ ಬನ್ನಿ, ಕಾಫಿ ಕೊಡ್ತೇನೆ. ಖಾಸಗಿ ವಿಷಯವಾದ್ದರಿಂದ ಖಾಸಗಿಯಾಗಿ ಮಾತಾಡೋಣ. ನಾನೊಬ್ಬ ಅಧಿಕಾರಿ. ಆಳುವ ಪಕ್ಷದ ನಿರ್ದೇಶಕನದಂತೆ ಕೆಲಸ ಮಾಡೋದು ನನ್ನ ಕರ್ತವ್ಯ. ಈಗ ನೀವು ಪ್ರತಿಭಟಿಸ್ತಿರೋ ವಿಷಯದಲ್ಲಿ ಯಾವ ಸರ್ಕಾರವೂ ನನಗೆ ಸೂಚನೆ ಕೊಟ್ಟಿಲ್ಲ, ಅಕಸ್ಮಾತ್ ಒಂದು ಸುದ್ದಿ ದೂರದರ್ಶನದಲ್ಲಿ ಬರಬಹುದು, ಬಾರದೆಯೂ ಇರಬಹುದು. ಈ ಬಗ್ಗೆ ವಿವರಣೆ ಕೇಳಿದರೆ ಕೊಡಬಲ್ಲೆ..."

"ಅದೆಲ್ಲ ಇರಲಿ! ನಿನ್ನ ತಲೆಹರಟೆ ಬೇಕಿಲ್ಲ! ವಸ್ತುನಿಷ್ಠವಾಗಿ ಕೆಲಸ ಮಾಡೋದು ನಿನ್ನ ಕರ್ತವ್ಯ!"

"ಕರ್ತವ್ಯದ ಬಗ್ಗೆ ಹೇಳ್ತಿದೀರಿ. ನಾನೂ ಸ್ವಲ್ಪ ಹೇಳೋದಿದೆ, ದಯವಿಟ್ಟು ಕೇಳಿ. ಶ್ರೀನಗರದ ದೂರದರ್ಶನದ ಡೈರೆಕ್ಟರ್ ಅವರ ಕೊಲೆಯಾದೊಡನೆ ನನ್ನನ್ನ ಆ ಸ್ಥಾನಕ್ಕೆ ಹಾಕಿದ್ರು. ದೊಡ್ಡ ದೊಡ್ಡ ಮಾತು ಸುಲಭ. ಆದರೆ ಅಲ್ಲಿಗೆ ಹೋಗಲು ಯಾರೂ ಇಷ್ಟಪಡದಿದ್ದಾಗ ನನ್ನನ್ನು ನೇಮಿಸಿದರು. ನಾನು ಹೋದೆ. ಪಂಜಾಬ್, ಕಾಶ್ಮೀರದ ಸ್ಟೇಷನ್‌ಗಳೆಲ್ಲ ಕೆಲಸ ಮಾಡದೆ ಇದ್ದಾಗ ನಾನು ನನ್ನ ಕರ್ತವ್ಯ ನಿರ್ವಹಿಸಿದೆ. ನನ್ನ ದೇಶದ ಧ್ವನಿ ಅಡಗದಂತೆ ನೋಡಿಕೊಂಡೆ.... ಹೆಚ್ಚು ಮಾತಾಡುತ್ತಿರುವುದಕ್ಕೆ ಕ್ಷಮಿಸಿ" ಅಂದರು ಹಕ್.

ಈ ದುರಂತಮಯ ಕಾಲದಲ್ಲಿ ಒಬ್ಬ ತನ್ನ ಅಂತಃಸಾಕ್ಷಿಗೆ, ತನ್ನ ಕರ್ತವ್ಯಕ್ಕೆ ಬದ್ಧನಾಗಿ ಕೆಲಸ ಮಾಡುವುದು ಎಷ್ಟು ಕಷ್ಟ ಎಂಬುದನ್ನು ವಿವರಿಸಬೇಕಾಗಿಲ್ಲ. ಯಡಿಯೂರಪ್ಪ ಮತ್ತು ಹಕ್ ಮಾತಾಡಿದ್ದು ಹೀಗೇ ಇತ್ತೋ, ಇನ್ನೇನಾದರೂ ಇತ್ತೋ ತಿಳಿಯುತ್ತಿಲ್ಲ. ಆದರೆ ಯಡಿಯೂರಪ್ಪನಂಥವರಿಗೆ ಅರ್ಥವಾಗಲೇ ಬೇಕಾದ ಕೆಲವು ವಿಷಯಗಳಿವೆ. ಒಂದು ರಾಜಕೀಯ ಪಕ್ಷದ ನಾಯಕನಾದವರಿಗೆ ಈ ದೇಶದ ಜನರೆಲ್ಲ ಒಂದೇ ಎಂಬ ತಿಳುವಳಿಕೆ, ವಿಷಯ ಕೇಳುವ ಸಹನೆ, ವಿವರಿಸುವ ಜಾಣತನ, ನೀಚತನ ಕಾರಿಕೊಳ್ಳದಿರುವ ವಿವೇಕ ಬೇಕು. ನಾಯಕರಾದವರು ಲಂಗುಲಗಾಮಿಲ್ಲದೆ ವರ್ತಿಸತೊಡಗಿದೊಡನೆ ಅವರ ಅನುಯಾಯಿಗಳು ಇನ್ನೂ ಕೆಳಮಟ್ಟಕ್ಕೆ ಹೋಗುತ್ತಾರೆ. ಮಾತು, ಚರ್ಚೆ ಅಸಾಧ್ಯವಾಗುತ್ತದೆ.

—ಜನವರಿ 5, 1992




ಡ್ರಾಯಿಂಗೇ ಇಲ್ದಿದ್ರೆ ಹೆಂಗೆ.....

ಪಠ್ಯಪುಸ್ತಕಗಳ ಸಂಗಡ ಹಗಲೂರಾತ್ರಿ ಬಡಿದಾಡುವವರಿಗೆ ಇದು ಅಭ್ಯಾಸ ಆಗಿರುತ್ತೆ. ಅವುಗಳ ತಯಾರಿಗೆ ಅಂತ ಒಂದು ಸಮಿತಿ ನೇಮಕ ಆಗುತ್ತೆ. ಜ್ಞಾನ ಗಂಗೆಯನ್ನು ಹರಿಸುವ ಮಹತ್ಕಾರ್ಯ ಇದಾದುದರಿಂದ ಭಾರೀಭಾರಿ ಹೆಸರುಗಳು ಅಲ್ಲಿರುತ್ತೆ. ಜ್ಞಾನಭಾರದಿಂದ ಕುಸಿಯುವಂತಿರುತ್ತದೆ ಈ ಪಠ್ಯಪುಸ್ತಕ ಸಂಪಾದಕ ಮಂಡಳಿ ಅನ್ನೋದು. ಸಮಿತಿ ಅಂತ ಇದ್ದ ಮೇಲೆ ಅಧ್ಯಕ್ಷರು ಅಂತ ಒಬ್ಬರು ಇರಬೇಕು. ಜಗದ್ಗುರುಗಳ ತರಹಾನೆ ಜಗತ್ಪ್ರಸಿದ್ಧ ಪುರುಷನ ಹೆಸರು ರಾರಾಜಿಸುತ್ತೆ.

ಸಂಪಾದಕ ಮಂಡಳಿ ರಚನೆ ಆಯಿತು. ಕೆಲಸ ಪ್ರಾರಂಭಿಸಬೇಕು. ಅಧ್ಯಕ್ಷರಿಗೆ ಅನ್ಯ ಕೆಲಸದ ಭಾರದ

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಒತ್ತಡ. ತೂಕದ ಹೆಸರುಗಳಿಗೂ ತಡೆದುಕೊಳ್ಳಲಾಗದ ಅನ್ಯ ಕಾರ್ಯ ಭಾರ! ಕಾರ್ಯ ನಿಲ್ಲಿಸುವಂತಿಲ್ಲ, ಆದಕ್ಕೇನು ಮಾಡ್ತಾರೆ ಅಂದರೆ ಇನ್ನೂ ಪ್ರಕಾಶಮಾನಕ್ಕೆ ಬರದ ಆದರೆ ಅತಿ ಮೇಧಾವಿತನ ಇರುವ ಎಳೆಯ ಸದಸ್ಯನಾದರೂ ಅಪ್ಪಿತಪ್ಪಿ ಸಮಿತಿಯ ಬಳಗಕ್ಕೆ ತೂರಿಕೊಂಡಿದ್ದರೆ ಅದಕ್ಕೆ ಏನೇನೋ ಆಮಿಷ ಒಡ್ಡುತ್ತಾರೆ. ಆದಕ್ಕೂ ತಾನು ಮುಂದೆ ಇಂತಹ ಗಣ್ಯ ವ್ಯಕ್ತಿಗಳ ಸಾಲಿನಲ್ಲಿ ಮೆರೆಯಬೇಕಾದರೆ ಹಿರಿಯರ ಕೃಪಾಶೀರ್ವಾದವಿರಬೇಕು ಎಂದು ಹೊರೆ ಹೊರುವ ಕತ್ತೆಯಾಗಲು ಮುಂದೆ ಬರುತ್ತೆ. ಇಂತಹ ಕತ್ತೆ ಯಾವುದೂ ಇಲ್ಲದೆ, ಸಮಿತಿಯಲ್ಲಿರುವವರೆಲ್ಲರೂ ಪೂರ್ವನಿಯೋಜಿತ ಅನ್ಯ ಕಾರ್ಯದ ಒತ್ತಡ ಬಾಧಿಸುವವರೇ ಆಗಿದ್ದರೆ, ತಮ್ಮ ಘನವಾದ ವ್ಯಕ್ತಿತ್ವಕ್ಕೆ ಮಾರುಹೋಗಿರುವ ಮೇಧಾವಿಗೆ ಈ ಪವಿತ್ರ ಕಾರ್ಯವನ್ನು ವರ್ಗಾಯಿಸುತ್ತಾರೆ. ಗೌರವಾನ್ವಿತ ಸದಸ್ಯರು ಯಾರಿಗೋ ಒಬ್ಬರಿಗೆ ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಬಿಟ್ಟಿದ್ದೇವಲ್ಲ ಎಂದು ಸುಮ್ಮನೆ ಕೂರುವುದಿಲ್ಲ. ಸಮಿತಿ ಸಭೆ ಕಾಲಕಾಲಕ್ಕೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಅನ್ಯ ಕಾರ್ಯಭಾರದಿಂದ ತತ್ತರಿಸುತ್ತಿರುವ ಎಲ್ಲರೂ ಸಭೆಗೆ ಹಾಜರಾಗುತ್ತಾರೆ. ತಮಗೆ ಸಲ್ಲಬೇಕಾದ ಮರ್ಯಾದೆಯನ್ನು ಪಡೆದು ಸಂತುಷ್ಟರಾಗುತ್ತಾರೆ!

ಎಳೆ ನಿಂಬೆ ಪಠ್ಯಪುಸ್ತಕ ರಚಿಸುತ್ತೆ. ಹಸ್ತ ಪ್ರತಿ ಒದಲು ಅಧ್ಯಕ್ಷರಿಗೆ ಅನ್ಯ ಕಾರ್ಯಗೌರವ! ಹಾಗೆಯೇ ಮುದ್ರಣಕ್ಕೆ ಸಾಗಹಾಕಬಹುದು. ಆದರೆ ಪಠ್ಯಪುಸ್ತಕ ಅಂದಮೇಲೆ ಪ್ರಸ್ತಾವನೆ ಅಂತ ಒಂದು ಗೀಚಬೇಕಲ್ಲ, ಅದನ್ನು ಬರೆಯಲೂ ಪುರುಸೊತ್ತಿಲ್ಲ. (ಪುಸ್ತಕದ ಒಳಗೇನಿದೆ ಎಂಬುದರ ಪರಿಚಯವೇ ಇಲ್ಲವಲ್ಲ!) ಪ್ರಸ್ತಾವನೆನೂ ಎಳೆಯ ನಿಂಬೆಯ ಪಾಲಿಗೆ ಬಂದ ಪಂಚಾಮೃತ! ಅದನ್ನು ಕೃತಜ್ಞತೆಯಿಂದ ಅದು ಸ್ವೀಕರಿಸುತ್ತದೆ. ಆದರೆ ಒಂದು. ಪ್ರಸ್ತಾವನೆಯ ಕೆಳಗಿನ ಹೆಸರು ಮಾತ್ರ ಜಗತ್ಪ್ರಸಿದ್ಧ ಅಧ್ಯಕ್ಷರದ್ದು! ಅಂತೂಇಂತೂ ಯಾರಿಂದಲೋ ರಚಿಸಿದ ಪಠ್ಯಪುಸ್ತಕ ಇನ್ನಾರದೋ ಹೆಸರಲ್ಲಿ ಲೋಕಾರ್ಪಣೆಯಾಗುತ್ತೆ.


ಪಠ್ಯಪುಸ್ತಕಗಳ ವೈಶಿಷ್ಟ್ಯವೆಂದರೆ ನಿಜವಾದ ಕರ್ತೃವಿನ ಹೆಸರು ಎಲ್ಲಿಯೂ ಪ್ರಸ್ತಾಪವಾಗುವುದಿಲ್ಲ, ಅಧ್ಯಾಪಕರು ಜಗತ್‌ಪ್ರಸಿದ್ಧ ಅಧ್ಯಕ್ಷರ ಹೆಸರನ್ನೇ ಪಠಿಸುತ್ತಾರೆ. ವಿದ್ಯಾರ್ಥಿಗಳಿಗಾದರೋ ಪಠ್ಯಪುಸ್ತಕ ರಚನಾಕಾರನ ಹೆಸರಂತಿರಲಿ, ಅದರ ಹೆಸರು ಉಚ್ಚರಿಸಲೂ ಎಂತಹದ್ದೋ ಸೋಮಾರಿತನ. ಅವರು ಅದು (ಪಠ್ಯ ಪುಸ್ತಕ ಸಮಿತಿಯ ಅಧ್ಯಕ್ಷರ ಹೆಸರನ್ನು ಸೂಚಿಸಿ) ಐತಾ' ಎಂದೇ ಕರೆಯುವರು! ಯಾರೂ ಗುಟ್ಟನ್ನು ಹೊರಬಿಡುವುದಿಲ್ಲ. ಸಂಪಾದಕ ಮಂಡಳಿ ಸರಿಯೇ ಸರಿ. ಅಜ್ಞಾತ ಕರ್ತೃವೂ ಅಜ್ಞಾತವಾಗೇ ಉಳಿಯುತ್ತಾನೆ. ಘನವಂತ ವಿದ್ವಾಂಸರಿಂದ ಪಠ್ಯಪುಸ್ತಕ ರಚಿಸಿ ವಿದ್ಯಾರ್ಥಿಗಳ ಜ್ಞಾನದ ಹಸಿವು ಹಿಂಗಿಸಲು ಸಫಲವಾದೆವು ಎಂದು ಸರ್ಕಾರಕ್ಕೂ ಒಂದು ರೀತಿಯ ಸಂತೃಪ್ತಿ. ವಿದ್ಯಾರ್ಥಿಗಳು ಆಹಾ ಎಂತೆಂತಹ ಮಹಾನುಭಾವರಿಂದ ರಚಿಸಿದ ಕೃತಿಯಿಂದ ಕಲಿಯುತ್ತಿದ್ದೇವಲ್ಲ ಎಂದು ಸಂಭ್ರಮಿಸಿದರೆ ಅಧ್ಯಾಪಕರಿಗೆ ಇಂತಹ ಮಹಾನ್ ವಿದ್ವಾಂಸರಿಂದ ರೂಪುಗೊಂಡ ಪಠ್ಯ ಬೋಧಿಸುವುದೇ ತಮ್ಮ ಪುಣ್ಯ ಎಂಬ ಧನ್ಯತಾಭಾವನೆ!

ಆದರೆ ಕೆಲವು ಸಲ ಯಡವಟ್ಟಾಗಿ ಬಿಡುತ್ತೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆಗಿರುವುದೂ ಅದೇ. ಅಲ್ಲಿ ಏನಾಗಿತ್ತಪ್ಪ ಅಂದರೆ....

ಹಳೆಕಾಲದ ನನ್ನಂತಹ ಮೇಷ್ಟ್ರುಗಳಿಗೆ ಡ್ರಾಯಿಂಗ್ ಅಂದರೆ ಡ್ರಾಯಿಂಗ್ ಶೀಟಿನ ಮೇಲೆ ಚಿತ್ರ ಬಿಡಿಸುವುದು. ಕೈಯೂ ಪಳಗುತ್ತೆ, ಮೆದುಳಿಗೂ ಕಸರತ್ತು, ಅವೆರಡರ ಹೊಂದಾಣಿಕೆಗೂ ಸಹಕಾರಿ ಎಂಬ ಭಾವನೆ. ಆದರೆ ಕಂಪ್ಯೂಟರ್ ಬಂದಮೇಲೆ ಓಬೀರಾಯನ ಕಾಲದ ಟಿ-ಸ್ಕ್ವೇರು, ಡ್ರಾಯಿಂಗ್ ಬೋರ್ಡು ಇಂತಹವುಗಳನ್ನೆಲ್ಲ ಬಳಸುವುದು ಆಧುನಿಕ ತಾಂತ್ರಿಕ ಶಿಕ್ಷಣಕ್ಕೆ ಎಸಗುವ ಅಪಮಾನ ಅಂತ ಕೆಲವರಿಗೆ ಅನ್ನಿಸಿತು. ಚೋಟಾಮೋಟಾಗಳಿಗೆ ಹಾಗನ್ನಿಸಿದ್ದರೆ ಯಾವ ಬದಲಾವಣೆಯೂ ಆಗ್ತಿರಲಿಲ್ಲ. ಆದರೆ ದೊಡ್ಡವರು ಅನ್ನಿಸಿಕೊಂಡವರ ತಲೆಗೆ ಹೊಕ್ಕಿದ್ದರಿಂದ ಬದಲಾವಣೆ ಅನಿವಾರ್ಯ ಆಯ್ತು. ನಿಮ್ಮ ಡ್ರಾಯಿಂಗ್ ಬೋರ್ಡು, ಟಿ-ಸ್ಕ್ವೇರುಗಳನ್ನೆಲ್ಲ ಚರಂಡಿಗೆ ಎಸೀರಿ. ಕಂಪ್ಯೂಟರ್‌ನಲ್ಲೇ ಡ್ರಾಯಿಂಗ್ ಶಿಕ್ಷಣ ನೀಡ್ತೀವಿ' ಅಂತ ಸಾರಿದರು.

ಹೊಸ ಮಾದರಿಯ ಶಿಕ್ಷಣ ನೀಡಲು ಪಠ್ಯಪುಸ್ತಕ ಬೇಕಲ್ಲ ಎಂದು ಅಂದಿನ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಅವರನ್ನೂ ಸೇರಿದಂತೆ ಒಂಬತ್ತು ತಜ್ಞರ ಸಮಿತಿ ನೇಮಕ ಆಯ್ತು. ಪುಸ್ತಕದ ರಚನೆಯೂ ಆಯ್ತು. ವಿಶ್ವವಿದ್ಯಾನಿಲಯವೇ ಪ್ರಕಟಿಸಿತು.

ವರ್ಷಗಳುರುಳಿದವು. ವಿಶ್ವವಿದ್ಯಾನಿಲಯವೇನು ಅಕ್ಷಯ ಪಾತ್ರೆಯೇ, ಬೇಕು ಅಂದಾಗ ಪುಸ್ತಕಗಳನ್ನು ಕೊಡೋಕೆ ಪ್ರತಿಗಳು ಮುಗಿದುಹೋದವು. ಮುಂದೇನು ಎಂಬ ಪ್ರಶ್ನೆ ಕಾಡಲಿಲ್ಲ. ಮರು ಮುದ್ರಣ ಮಾಡಿಸಿದರು. ಎಲ್ಲ ಕಡೆಗೂ ಹಂಚಿಸಿದರು. ಸಮಸ್ಯೆ ಪ್ರಾರಂಭ ಆದದ್ದು ಇಲ್ಲಿಂದ.



ಏನಾಗಿತ್ತು ಅಂದರೆ ಮರು ಮುದ್ರಣ ಆಗುವಷ್ಟರಲ್ಲಿ ಕುಲಪತಿಗಳ ಬದಲಾವಣೆ ಆಗಿತ್ತು. ಬಲವೀರ ರೆಡ್ಡಿ ಬದಲಿಗೆ ಖಿಂಚಾ ಬಂದಿದ್ದರು. ಅದಕ್ಕೇನಂತೆ ಅನ್ನೋ ಹಾಗಿಲ್ಲ.. ಖಿಂಚಾ ಸಾಹೇಬರು ಏನು ಮಾಡಿದ್ದರು.. ಅವರೂ ಹಲವಾರು ಪಠ್ಯ ಪುಸ್ತಕ ಸಂಪಾದಕೀಯ ಮಂಡಳಿಲಿ ಇದ್ದವರೇ ಅಂತ ಕಾಣುತ್ತೆ. ಅದರ ಅನುಭವ ಇತ್ತಲ್ಲ. ಈ ರೆಡ್ಡಿ ಅನ್ನೋನು ಪದನಿಮಿತ್ತ ಅಧ್ಯಕ್ಷನಾಗಿದ್ದ ಅಂತಾವ ಅವರ ಹೆಸರಿನ ಜಾಗದಲ್ಲಿ ತಮ್ಮ ಹೆಸರು ವಿಜೃಂಭಿಸುವಂತೆ ನೋಡಿಕೊಂಡರು. ಪ್ರಸ್ತಾವನೆಯನ್ನು ಪಠ್ಯಪುಸ್ತಕ ಸಮಿತಿಯ ಭವ್ಯ ಪರಂಪರೆಯಂತೆ ಅವರ ಹೆಸರಿನಲ್ಲಿ ಇನ್ನಾರಾದರೂ ಬರೆದರೋ ಅಥವಾ ಅವರೇ ಬರೆದರೋ ತಿಳಿದಿಲ್ಲ, ಅಂತೂ ಅದೂ ಅವರ ಹೆಸರಿನಲ್ಲಿ ಪ್ರಕಟ ಆಯ್ತು.

ರೆಡ್ಡಿ ಇದ್ದರಲ್ಲ ಅವರಿಗೆ ಏನೋ ಅಚಾತುರ್ಯ ನಡೆದುಹೋಗಿದೆ ಅಂತಾನೋ ಇಲ್ಲ ಪ್ರಜ್ಞಾವಂತ ತಂತ್ರಜ್ಞಾನಿ ಎನಿಸಿಕೊಂಡಿದ್ದರೂ ಹಾಳಾದ್ದಕ್ಕೆ ಪ್ರಚಾರದ ಗೀಳು ಹೀಗೆ ಮಾಡಿಸಿದೆ ಅಂತಾನೋ ಅನ್ನಿಸಲಿಲ್ಲ. ಪರಂತು 'ಕೃತಿಚೌರ್ಯ'ದ ರಾಕ್ಷಸೀರೂಪವಾಗಿಬೇಕೆಂದೇ ಮಾಡಿರುವ ಅವಮಾನ ಕೃತ್ಯವಾಗಿ ಗೋಚರಿಸಿತು. ಸಂಬಂಧಿಸಿದವರೆಲ್ಲರಿಗೂ ಈ ಕುರಿತು ದೂರು ನೀಡಿದರು.

ಖಿಂಚಾ ಸಾಹೇಬರು ಚುರುಕಾದರು. ವಿವಿಧೆಡೆಗೆ ವಿತರಣೆ ಆಗಿದ್ದ ಪ್ರತಿಗಳನ್ನು ಹಿಂಪಡೆದರು. ಬಡಪಾಯಿ ರಿಜಿಸ್ಟ್ರಾರ್‌ನ ಹಿಡಕೊಂಡರು. ಸಂಪಾದಕ ಮಂಡಳಿ ಸದಸ್ಯರ ಸಭೆ ಕರೆಸಿದರು. ಮಾಜಿ ಅಧ್ಯಕ್ಷರನ್ನು ಕರೆದಿಲ್ಲವೆಂದು ಪ್ರತ್ಯೇಕ ಹೇಳಬೇಕಿಲ್ಲವಷ್ಟೇ. ಸಭೆಯಲ್ಲಿ ಏನು ನಡೆಯಿತೋ ತಿಳಿದುಬಂದಿಲ್ಲ, ವದಂತಿಗಳ ಪ್ರಕಾರ ರಿಜಿಸ್ಟ್ರಾರ್ ಈ ರೀತಿ ಪ್ರಸ್ತಾವನೆ ಸಲ್ಲಿಸಿದರಂತೆ:

"ಅವೆರಡೂ ಬೆದೆಗೆ ಬಂದ ಗೂಳಿಗಳು. ಕಿತ್ತಾಡ್ತವೆ. ಹಾಳಾಗೋರು ನಾವು. ವಿದ್ಯಾರ್ಥಿಗಳು ಪಠ್ಯಪುಸ್ತಕ ಇಲ್ಲದೆ ಪರದಾಡ್ತವೆ. ಆದುದರಿಂದ...ಪಠ್ಯಪುಸ್ತಕ ರಚಿಸಿದೋರು ನಾವು. ಉಪಕುಲಪತಿಗಳಿಗೂ ಇದಕ್ಕೂ ಸಂಬಂಧ ಇಲ್ಲ, ಅವರು ಕೇವಲ ಪದ ನಿಮಿತ್ತ ಅಧ್ಯಕ್ಷರಾಗಿದ್ದರು.... ಅಂತ ಬರೆದು ಕೊಡಿ" ಅಂದರು.

ಮಂಡಳಿ ಸದಸ್ಯರ ಪರಿಸ್ಥಿತಿ ನೋಡಿ. ಈ ಕಡೆ ಹಾಲಿ ಉಪಕುಲಪತಿ, ಆ ಕಡೆ ಮಾಜಿ ಉಪಕುಲಪತಿ. ಅದೂ ಅಲ್ಲದೆ ಹಾಳಾದ ಬಲವೀರ ರೆಡ್ಡಿ ಅನ್ನೋನು ಇಂಜಿನಿಯರಿಂಗ್ ಡ್ರಾಯಿಂಗ್‌ನಲ್ಲಿ ಮೇಧಾವಿ ಬೇರೆ ಅಂತೆ. ಇದರಲ್ಲಾದರೂ ನಿಜ ಹೇಳೋಣ ಅಂತ 'ಸಾಧ್ಯವಿಲ್ಲ' ಅಂದರಂತೆ!

ಈ ಬಲವೀರ ರೆಡ್ಡಿ ನ್ಯಾಯಾಲಯಕ್ಕೇ ಹೋಗ್ತೀನಿ. ಮಾನನಷ್ಟ ಮೊಕದ್ದಮೇನೆ ಹೂಡ್ತೀನಿ ಅಂತ ಅವ್ರಂತೆ. ವಿಶ್ವವಿದ್ಯಾಲಯ ಕ್ಷಮಾಪಣೆ ಕೋರ್ತೀವಿ ಅಂದ್ರೂ ಬ್ಯಾಡಾ ಅಂತ ಕುಂತವ್ರಂತೆ.

ಇಡೀ ವ್ಯವಹಾರದಲ್ಲಿ ತಮ್ಮದಲ್ಲದ ತಪ್ಪಿಗಾಗಿ ಪಠ್ಯಪುಸ್ತಕಗಳೂ ಇಲ್ಲದೆ ಅಭ್ಯಸಿಸ ಬೇಕಾದ ಅನಿವಾರ್ಯತೆ ವಿದ್ಯಾರ್ಥಿಗಳ ಎದುರು ಇದೆ ಅಂತ ಪೋಷಕರು ಗೋಳಾಡ್ತಿದಾರೆ.

ಇದಕ್ಕೆ ನನ್ನ ಒಂದು ಸಲಹೆ ಅಂದರೆ... ಇಂಜಿನಿಯರಿಂಗ್ ಡ್ರಾಯಿಂಗೇ ಇಲ್ದಂಗೆ ಮಾಡಿದ್ರೆ ಹೆಂಗೆ ಅಂತ.... ●

ಮಂತ್ರಾಲಯದ ಬೃಂದಾವನದಲ್ಲಿ ಲೀನವಾದ ಚೆಡ್ಡಿ ಸರ್ಕಾರ

ಹೊಗಳಿಕೆ ತೆಗಳಿಕೆ

ಈ ಮೂಲಕ ತಮ್ಮ ಅವಗಾಹನೆಗೆ ತರುವುದೇನೆಂದರೆ ಜುಲೈ 15, 2009ರ ಸಂಚಿಕೆಯಲ್ಲಿ ತಾವು ಡಾ. ಲಕ್ಷ್ಮೀಪತಿ ಸಿ.ಜಿ.ಯವರ ಲೇಖನ 'ಹುಚ್ಚನ ಅಂತರಾಳ' ಪ್ರಕಟಿಸಿದ್ದಿರಿ. ಈ ಲೇಖನ ನಮ್ಮಲ್ಲೊಂದು ಆಸ್ಫೋಟವನ್ನೇ ಹುಟ್ಟುಹಾಕಿತ್ತು. ಮೈಕಲ್ ಜಾಕ್ಸನ್‌ನ ಅಪಾರವಾದ ಜೀವಪರ ಕಾಳಜಿ ಮತ್ತು ಅನನ್ಯವಾದ ಬುದ್ಧಿಮತ್ತೆ ನಮ್ಮನ್ನು ಮತ್ತೆ ಮತ್ತೆ ಚಿಂತಿಸುವಂತೆ ಮಾಡಿದುವು. ನಮಗೆ ಇದರಿಂದ ದೊರೆತ ಅನುಭವ ವಿಶಿಷ್ಟವಾದದ್ದು. ಈ ಅನುಭವವನ್ನು ನಮ್ಮ ಇತರ ಸಹಜೀವಿಗಳಿಗೂ ಮುಟ್ಟಿಸಲು ಬೇರೊಂದು ಮಾಧ್ಯಮ ಹುಡುಕುವ ಪ್ರಯತ್ನ ಮಾಡಿದೆವು. ಪರಿಣಾಮ ಮೈಕೆಲ್ ಜಾಕ್ಸನ್‌ನ ಭಾಷಣಕ್ಕೆ ಅಕ್ಷರದ ರೂಪದ ಬದಲಾಗಿ ಧ್ವನಿಯ ರೂಪವನ್ನು ನೀಡಿ, ನಮ್ಮ ಬಹಳಷ್ಟು ಬಂಧುಗಳಿಗೆ ತಲುಪಿಸಿದೆವು. ಪ್ರತಿಕ್ರಿಯೆ ನಮ್ಮನ್ನು ದಂಗುಬಡಿಸುವಷ್ಟು ಅರ್ಥಪೂರ್ಣ ಮತ್ತು ತೀವ್ರವಾಗಿದ್ದವು. ಬಹಳಷ್ಟು ಜನ ಗೆಳೆಯರು ಜಾಕ್ಸನ್‌ನ ಅಂತರಾಳ ಅರ್ಥಮಾಡಿಕೊಂಡು ನಮಗೆ ಅಪಾರವಾದ ಪ್ರೀತಿಯನ್ನು ವ್ಯಕ್ತಪಡಿಸಿದರು ಇದೆಲ್ಲ ಸಾಧ್ಯವಾದದ್ದು ನಿಮ್ಮ ಪತ್ರಿಕೆಯಿಂದ. ಈ ಪ್ರಯತ್ನಕ್ಕೆ ಪ್ರೇರಣೆ ನೀಡಿದ ಪತ್ರಿಕೆಗೂ ತಮಗೂ ಹೃದಯಪೂರ್ಣ ಕೃತಜ್ಞತೆಗಳು.

(* ಬಹಳಷ್ಟು ಜನರಿಗೆ ತಲುಪಿಸಲು ಸಾಧ್ಯವಾದದ್ದು ಮೊಬೈಲ್‌ನ ಬ್ಲೂಟೂತ್ ಮೂಲಕ)

-ವೀರಣ್ಣ ಮಡಿವಾಳರ ಮತ್ತು ವಿಜಯ ಅಮೃತರಾಜ

ಯಡ್ಡಿ ಮತ್ತು ಅವರ ಚೆಡ್ಡಿ ಪಟಾಲಂನ ಇತ್ತೀಚಿನ ವರಸೆಗಳನ್ನು ನೋಡಿದರೆ ಇವರು ಇನ್ನೂ ನಾಲ್ಕು ವರ್ಷಗಳಲ್ಲಿ ಏನೇನು ಅವಾಂತರ ಮಾಡಬಹುದೆಂದು ಆತಂಕವಾಗುತ್ತದೆ.

1983ರಲ್ಲಿ ಮೌಲ್ಯಾಧಾರಿತ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆ ಮಾಡಿದ ಮಹಾನ್ ಕಾರ್ಯವೆಂದರೆ ಈ ಚೆಡ್ಡಿಗಳಿಗೆ ನಾಗರಿಕ ಮುಖವಾಡ ತೊಡಿಸಿದ್ದು ಯಾಕೆಂದರೆ ಅಲ್ಲಿಯವರೆಗೆ ಇವು ಎಲ್ಲ ರಾಜಕೀಯ ಪಕ್ಷಗಳಿಗೆ ಅಸ್ಪೃಶ್ಯರಾಗಿದ್ದವು.

ಧೃತರಾಷ್ಟ್ರ ದೇವೇಗೌಡ ಮತ್ತು ಐಲುಪೈಲು ಬಂಗಾರಿಗಳ ಸ್ವಾರ್ಥ, ದುರಾಶೆಯಿಂದಾಗಿ ದಡ್ಡ ಶಿಖಾಮಣಿ ಯಡ್ಡಿ ಕರ್ನಾಟಕದ ಅತ್ಯುನ್ನತ ಅಧಿಕಾರ ಪಡೆಯುವಂತಾಯ್ತು. ಇವರಿಗೆ ಈ ನೆಲದ ಇತಿಹಾಸ, ಸಂಸ್ಕೃತಿಯ ಗಂಧಗಾಳಿಯೂ ಗೊತ್ತಿಲ್ಲ. ಕರಾವಳಿ, ಮಲೆನಾಡನ್ನು ಕುಲಗೆಡಿಸಿ ಚೆಡ್ಡಿಗಳು ಬೆಂಗಳೂರಿನಲ್ಲಿ 'ಅಟಲ್ ಸಾರಿಗೆ'ಯೆಂಬ ಬಸ್ಸುಗಳಿಗೆ ತಮ್ಮ ಬ್ರ್ಯಾಂಡ್ ಕೇಸರಿ ಬಣ್ಣವನ್ನು ಬಳಿಯುವಷ್ಟರವರೆಗೆ ನಿರ್ಲಜ್ಜರಾಗಿದ್ದಾರೆ.

ಕರ್ನಾಟಕದ ಅನೇಕರು ಮಂತ್ರಾಲಯದ ಭಕ್ತರೆನ್ನುವುದನ್ನು ಬಿಟ್ಟರೆ, ಅದಕ್ಕೂ ನಮಗೂ ಯಾವ ಸಂಬಂಧವೂ ಇಲ್ಲ. ತುಂಗಾಭದ್ರಾ ಏರುತ್ತಿದ್ದಂತೆ ಹೆಲಿಕಾಪ್ಟರನ್ನು ಕಳಿಸಿ ಅಂಜುಬುರುಕ ಸ್ವಾಮಿಯನ್ನು ಕರೆತಂದದ್ದಲ್ಲದೇ 10 ಕೋಟಿ ರೂ.ಗಳನ್ನು ತುರ್ತು ಸಹಾಯವೆಂದು ನೀಡಿತ್ತು ಯಡ್ಡಿ ಸರ್ಕಾರ ಇಂದಿನ ಸುದ್ದಿಯ (15-10-2009)ಪ್ರಕಾರ, ಮಂತ್ರಾಲಯದಲ್ಲಿನ ಹಾನಿ 40 ಕೋಟಿಯೆಂದು ಅಂದಾಜಿಸಲಾಗಿದ್ದು, ಅದನ್ನು ಆಂಧ್ರದೊಂದಿಗೆ ಕರ್ನಾಟಕ ಸರ್ಕಾರ ಭರಿಸಲಿದೆ. ನಮ್ಮ ಹಳ್ಳಿಗಳಲ್ಲಿ ರಸ್ತೆಗಳು ದನಕರುಗಳು ಕೊಚ್ಚಿಹೋಗಿ ಗಂಜಿಗೂ ಗತಿ ಇಲ್ಲದಿರುವಾಗ ಯಡ್ಡಿಯ ಈ ಬೇಜವಾಬ್ದಾರಿ ಕೆಲಸಕ್ಕೆ ಎಲ್ಲರೂ ಥೂ ಎಂದು ಉಗಿಯಬೇಕು.

ಮಂತ್ರಾಲಯದಲ್ಲಿ 40 ಕೋಟಿ ನಷ್ಟವಾಗುವುದೇನಿತ್ತು ಅಂತ ಆ ರಾಘವೇಂದ್ರ ಯತಿಗಳೇ ಹೇಳಬೇಕು

-ಪ್ರಕಾಶ್ ಬಿಸ್ಲಾಗರ, ಬೆಂಗಳೂರು

'ಲಂಕೇಶ್' ತುಂಬಾ ಪ್ರಸ್ತುತವಾಗಿ ಜನದನಿಗೆ ಸ್ಪಂದಿಸುತ್ತಿರುವುದನ್ನು ತಪ್ಪದೆ ಗಮನಿಸುತಿದ್ದೇನೆ. 'ಲಂಕೇಶ್ ಬಳಗ'ದ ಟೀಮ್ ಸ್ಪಿರಿಟ್‌ಗಾಗಿ ನಮನಗಳು.

ಈ ವಾರ ಡಾ.ವಸು ಬಗ್ಗೆ ಬರೆದಿರುವುದು ಸಂತೋಷದ ಸಂಗತಿ. ಆಕೆ ನನ್ನ ಕಾಲೇಜು ದಿನಗಳ ಚರ್ಚಾ ಸ್ಪರ್ಧೆಯ ಸಹಪಾಠಿ! ಸುಸ್ಪಷ್ಟ ಮಾತುಗಾರ್ತಿ. ಚರಿತ್ರೆಯನ್ನು ಪೂರ್ವಾಗ್ರಹವಿಲ್ಲದೇ, ವಸ್ತುನಿಷ್ಠವಾಗಿ, ನಿಷ್ಪಕ್ಷಪಾತವಾಗಿ ನೋಡುವ ಇಂಥ ಇತಿಹಾಸ ಪ್ರಾಧ್ಯಾಪಕರ ಸಂತತಿ ಸಾವಿರವಾಗಲಿ.

-ಜ್ಯೋತಿ ಗುರುಪ್ರಸಾದ್, ಕಾರ್ಕಳ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)



ಕನ್ನಡ ಚಿತ್ರರಂಗದ ನಾಯಕಿಯರು ಬ್ಯೂಟಿಫುಲ್ ಮಾತ್ರವಲ್ಲ, ಬೋಲ್ಡಾಗಿಯೂ ಇದ್ದಾರೆ ಎಂಬುದು ಇತ್ತೀಚೆಗೆ ಸಾಬೀತಾಗಿದೆ. ಅದನ್ನು ಮೊದಲು ತೋರಿಸಿಕೊಟ್ಟಿದ್ದು ಪೂಜಾ ಗಾಂಧಿ. ಆಕೆ ಮೊನ್ನೆ 'ಹುಚ್ಚ' ಚಿತ್ರದಲ್ಲಿ ಬೋಲ್ಡ್ ಆಗಿ ಸಿಗರೇಟ್ ಸೇದಿದ್ದಳು. ಇದೀಗ 'ಬೆಂಗಳೂರ್ಡ್' ಎಂಬ ಇಂಗ್ಲಿಷ್ ಚಿತ್ರದಲ್ಲಿ ಕನ್ನಡದ ಹುಡುಗಿ ಮೇಘನಾ ಸಿಗರೇಟ್ ಸೇದುವ ಪಾತ್ರದಲ್ಲಿ ಕಾಣಿಸಿಕೊಂಡು ಅವುಗಳ ಸ್ಟಿಲ್ಸ್‌ಗಳನ್ನು ಪತ್ರಿಕೆಗಳಿಗೆ ನೀಡಿದ್ದಾರೆ.

ಇವತ್ತು ಬಾಲಿವುಡ್‌ನ ನಾಯಕ ನಾಯಕಿಯರು ಸಿಗರೇಟ್ ಸೇದುವುದು ಆರೋಗ್ಯಕ್ಕೆ ಅಪಾಯಕಾರಿ ಎಂಬ ಸಂದೇಶಕ್ಕೆ ಬೆಂಬಲ ನೀಡುತ್ತಾ ಸಿಗರೇಟ್ ಸೇದುವ ದೃಶ್ಯಗಳನ್ನು ಅವಾಯ್ಡ್ ಮಾಡುತ್ತಿದ್ದಾರೆ. ಆದರೆ ಅದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ನಮ್ಮ ಕನ್ನಡದ ಹುಡುಗೀರು ಧೂಮಪಾನ ಮಾಡುವ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾ 'ದಮ್ ಮಾರೋ ದಮ್' ಎನ್ನುತ್ತಿದ್ದಾರೆ.

'ದಮ್' ಅಂದ್ರೆ ಇದೇನಾ?

'ಬೆಂಗಳೂರ್ಡ್' news



ರಘು ದೀಕ್ಷಿತ್ ತನ್ನ ಮೊದಲ ಸಂಗೀತ ನಿರ್ದೇಶನದ ಚಿತ್ರ 'ಸೈಕೋ'ದಿಂದ ಒಮ್ಮೆಲೇ ಜನಪ್ರಿಯತೆ ಗಳಿಸಿದ್ದು ನಿಮಗೆ ಗೊತ್ತೇ ಇದೆ. ಈಗ ಅವರ ಸಹೋದರ ವಾಸು ದೀಕ್ಷಿತ್ ಕೂಡಾ ಅಣ್ಣನ ದಾರಿಯಲ್ಲೇ ನಡೆದು ಸಂಗೀತ ನಿರ್ದೇಶನದತ್ತ ತಮ್ಮ ಮನಸ್ಸನ್ನು ಹೊರಳಿಸಿದ್ದಾರೆ. ಇವರು ಸಂಗೀತ ನಿರ್ದೇಶನ ಮಾಡಿರುವುದು 'ಬೆಂಗಳೂರ್ಡ್' ಎಂಬ ಇಂಗ್ಲಿಷ್ ಚಿತ್ರಕ್ಕೆ. ಈ ಚಿತ್ರದಲ್ಲಿ ಒಂದು ಕನ್ನಡ ಹಾಡನ್ನೂ ಇವರು ಹಾಡಿದ್ದು ಅದು ಕೂಡಾ ಶಿವನನ್ನು ಧ್ಯಾನಿಸುವ ಹಾಡಾಗಿದೆ. ರಘು ದೀಕ್ಷಿತ್ ಹಾಡಿರುವ 'ನಿನ್ನಾ ಪೂಜೆಗೆ ಬಂದೇ ಮಾದೇಶ್ವರಾ...' ಕೂಡ ದಿನಬೆಳಗಾಗುವುದರೊಳಗೆ ಕರ್ನಾಟಕದ ಮನೆಮಾತಾಗಿತ್ತು, ಈಗ ಆತನ ಸಹೋದರ ಮತ್ತೆ ಅದೇರೀತಿ ಶಿವನ ಹಾಡಿನ ಮೋಡಿ ಮಾಡುತ್ತಾನೋ ನೋಡಬೇಕು. ವಾಸು ದೀಕ್ಷಿತ್ ಈಗಾಗಲೇ ರಾಕ್-ಬ್ಯಾಂಡ್‌ವಲಯದಲ್ಲಿ ಜನಪ್ರಿಯ ಹಾಡುಗಾರ. ಇಂಗ್ಲಿಷ್‌ನಲ್ಲಿ ಹಾಡು ಆರಂಭಿಸಿ, ದಿಢೀರನೆ ಕನ್ನಡಕ್ಕೆ ಜಂಪ್ ಮಾಡಿ ಪ್ರೇಕ್ಷಕರು ಕುಣಿದು ಕುಪ್ಪಳಿಸುವಂತೆ ಮಾಡುವುದು ಈತನ ಸ್ಪೆಷಾಲಿಟಿ. ಅದೇನೆ ಇರಲಿ, ಕನ್ನಡ ಚಿತ್ರರಂಗದಲ್ಲಿ ಇದೇ ಮೊದಲ ಬಾರಿಗೆ ಸಹೋದರರಿಬ್ಬರು ಸಂಗೀತ ನಿರ್ದೇಶಕರಾಗಿ ಮಿಂಚುತ್ತಿದ್ದಾರೆ.



ಗೆಲುವಿನ ನಿರೀಕ್ಷೆಯಲ್ಲಿ ಗಣೇಶ

ಇಡೀ ಚಿತ್ರರಂಗ ಈಗ ಗೋಲ್ಡನ್ ಸ್ಟಾರ್ ಗಣೇಶ್‌ನತ್ತ ಕುತೂಹಲದಿಂದ ನೋಡುತ್ತಿದೆ. ಯಾಕೆಂದರೆ ಈ ವರ್ಷ ಅತಿರಥ ಮಹಾರಥರ ಚಿತ್ರಗಳೆಲ್ಲಾ ತರಗೆಲೆಯಂತೆ ಉರುಳುತ್ತಿರುವಾಗ ಈ ಹುಡುಗ ಮತ್ತೊಮ್ಮೆ 'ಮುಂಗಾರು ಮಳೆ'ಯ ತರಹ ಮ್ಯಾಜಿಕ್ ಮಾಡಿ ಚಿತ್ರರಂಗದಲ್ಲಿ ಚೇತೋಹಾರಿ ವಾತಾವರಣ ಸೃಷ್ಟಿಸಿಯಾನೇ ಎಂಬುದೇ ಗಾಂಧಿನಗರದವರ ಕುತೂಹಲವಾಗಿದೆ.

ಆದರೆ ಕನ್ನಡ ಚಿತ್ರರಂಗದ ದಿಗಂತದಲ್ಲಿ ದಿಢೀರನೆ ಸ್ಟಾರ್ ಆಗಿ ಕಾಣಿಸಿಕೊಂಡ ಗಣೇಶನ ವೃತ್ತಿಜೀವನವೂ ಈಗ ಕವಲುದಾರಿಯಲ್ಲಿದೆ. ಆತ ನಟಿಸಿದ್ದ ಮೂರು ಸೂಪರ್‌ಹಿಟ್ ಚಿತ್ರಗಳು ನೆಲಕ್ಕಪ್ಪಳಿಸಿದ ನಂತರ ಗಣೇಶ್‌ಗೆ ಜ್ಞಾನೋದಯವಾಯಿತು. ಹಾಗಾಗಿ ಆತ ಪಾತ್ರಗಳ ಆಯ್ಕೆ, ನಿರ್ದೇಶಕರ ಆಯ್ಕೆ, ಕಾಲ್‌ಶೀಟ್ ಬಟವಾಡೆ ಬಗ್ಗೆ ತಲೆಕೆಡಿಸಿಕೊಳ್ಳಲಾರಂಭಿಸಿದರು. ಇದರ ಫಲ ಎಂಬಂತೆಯೇ ಈಗ ಗಣೇಶ್ ಅಷ್ಟು ಸುಲಭವಾಗಿ ಎಲ್ಲರ ಕೈಗೆ ಸಿಗುತ್ತಿಲ್ಲ. ಈ ಮಧ್ಯೆ ದುಬಾರಿ ನಟ ಎಂಬ ಆರೋಪಕ್ಕೂ ಗಣೇಶ್ ಒಳಗಾದರು. ಈ ಎಲ್ಲ ಕಾರಣಗಳಿಂದಾಗಿ 2009ರಲ್ಲಿ ಈತನ ಒಂದೇ ಒಂದು ಚಿತ್ರ ಇನ್ನೂ ತೆರೆಕಂಡಿಲ್ಲ.

ಉಪ್ಪಿಯ 'ರಜನಿ' ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ. ವಿಷ್ಣು ನಟಿಸಿದ 'ಬಳ್ಳಾರಿ ನಾಗ' ಬಳ್ಳಾರಿಯಲ್ಲೇ ಠುಸ್ಸಾಗಿ ಹೋಯಿತು. ಶಿವಣ್ಣ ನಟಿಸಿದ 'ಭಾಗ್ಯದ ಬಳೆಗಾರ'ವನ್ನು ನೋಡುವ ಭಾಗ್ಯ ಎಲ್ಲರಿಗೂ ಸಿಕ್ಕೇ ಇಲ್ಲ. ದರ್ಶನ್ ನಟಿಸಿದ 'ಅಭಯ್' ಚಿತ್ರಕ್ಕೆ ಜನ ಪ್ರೋತ್ಸಾಹ ನೀಡಲಿಲ್ಲ. ಪುನೀತ್ ನಟಿಸಿದ 'ರಾಜ್' ಅಷ್ಟೋ ಇಷ್ಟೋ ಓಡಿದರೂ ಚಿತ್ರದ ವೆಚ್ಚ ಜಾಸ್ತಿಯಾಗಿದ್ದರಿಂದ ಬಾಕ್ಸಾಫೀಸ್ ಪಂಡಿತರ ಪ್ರಕಾರ ಆ ಚಿತ್ರದ ಗಳಿಕೆಯೂ ಸುಮಾರು. ಹೀಗೆ ಎಲ್ಲಾ ನಾಯಕ ನಟರ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಸೋಲು ಕಂಡಿರುವ ಈ ಸಂಕಷ್ಟದ ಸಮಯದಲ್ಲಿ ಗಣೇಶ ಜಯಭೇರಿ ಬಾರಿಸುತ್ತಾನೆಯೇ ಎಂಬುದೇ ಈಗಿರುವ ಕುತೂಹಲ.

ಸದ್ಯಕ್ಕೆ ಗಣೇಶ್ ನಾಯಕನಾಗಿ ನಟಿಸಿರುವ ಎರಡು ಚಿತ್ರಗಳು ಸಂಪೂರ್ಣಗೊಂಡಿವೆ. ಒಂದು 'ಉಲ್ಲಾಸ-ಉತ್ಸಾಹ'. ಇದು ತೆಲುಗಿನಲ್ಲಿ ಜಯಭೇರಿ ಬಾರಿಸಿದ 'ಉಲ್ಲಾಸಂಗ-ಉತ್ಸಾಹಂಗ' ಚಿತ್ರದ ರೀಮೇಕ್. ಈ ಚಿತ್ರದ ಕಥೆ ಗಣೇಶನ ಇಮೇಜ್‌ಗೆ ತಕ್ಕುದಾಗಿರುವುದರಿಂದ 'ಮುಂಗಾರು ಮಳೆ'ಯ ತರಹ ಇಲ್ಲೂ ಚಿತ್ರ ಯಶಸ್ಸಾದಲ್ಲಿ ಆಶ್ಚರ್ಯವೇನೂ ಇಲ್ಲ.

ಗಣೇಶ್ ನಟಿಸಿರುವ ಮತ್ತೊಂದು ಚಿತ್ರದ ಹೆಸರು 'ಮಳೆಯಿರಲಿ-ಜೊತೆಯಿರಲಿ'. ಗಣೇಶ್‌ಗೆ ಅದೃಷ್ಟದ ಬಾಗಿಲು ತೆರೆದ 'ಮುಂಗಾರು ಮಳೆ' ತಂಡದ ಅನೇಕ ತಂತ್ರಜ್ಞರು ಈ ಚಿತ್ರದಲ್ಲೂ ಕೆಲಸ ಮಾಡಿದ್ದಾರೆ. ಮುಖ್ಯವಾಗಿ 'ಮುಂಗಾರು ಮಳೆ'ಯ ಕಥೆ ಬರೆದಿದ್ದ ಪ್ರೀತಂ ಗುಬ್ಬಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಅಷ್ಟೇ ಅಲ್ಲ, ಸ್ವತಃ ಗಣೇಶ್ ಅವರೇ ಈ ಚಿತ್ರದ ನಿರ್ಮಾಪಕರಾಗಿದ್ದಾರೆ. ಈ ಚಿತ್ರ ಗೆದ್ದರೆ ಮಾತ್ರ ಗಣೇಶ್ ನಿರ್ಮಾಪಕನಾಗಿ ಗಾಂಧಿನಗರದಲ್ಲಿ ಗಟ್ಟಿಯಾಗಿ ನೆಲೆಯೂರಬಹುದು. ಇಲ್ಲದಿದ್ದರೆ ಬೇರೆ ನಿರ್ಮಾಪಕರಿಗೆ ಕಡಲೆಕಾಯಿ ತರಹ ಕಾಲ್‌ಶೀಟ್ ಹಂಚುತ್ತಾ ಇರವೇಕಾಗುತ್ತದೆ.

'ಮಳೆಯಿರಲಿ-ಜೊತೆಯಿರಲಿ' ಚಿತ್ರವನ್ನು 'ಮುಂಗಾರು ಮಳೆ' ಬಿಡುಗಡೆಯಾದ ಡಿಸೆಂಬರ್ 24ರಂದೇ ಬಿಡುಗಡೆ ಮಾಡಲು ಗಣೇಶ್ ನಿರ್ಧರಿಸಿದ್ದಾರೆ. ಹಾಗೆ ಮಾಡಿದರೆ ಈ ಚಿತ್ರ ಕೂಡಾ 'ಮುಂಗಾರು ಮಳೆ'ಯಂತೆಯೇ ದಾಖಲೆ ಮಾಡಬಹುದು ಎಂಬ ನಿರೀಕ್ಷೆ ಅವರದ್ದು. ಅದೇನೇ ಇರಲಿ, ಗಣೇಶ್ ನಟಿಸಿದ ಈ ಎರಡು ಚಿತ್ರಗಳಲ್ಲಿ ಯಾವುದಾದರೊಂದು ಹಿಟ್ ಆದರೂ ಸಾಕು, ಚಿತ್ರರಂಗದಲ್ಲಿ ಮತ್ತೆ ಹರ್ಷದ ವಾತಾವರಣ ಕಾಣಿಸಬಹುದು. ಆ ಕಾರಣಕ್ಕಾಗಿಯೇ ವರ್ಷದ ಕೊನೆಯಲ್ಲಿ ಬಿಡುಗಡೆಯಾಗಲಿರುವ ಗಣೇಶನ ಈ ಎರಡು ಚಿತ್ರಗಳಿಗಾಗಿ ಗಾಂಧಿನಗರ ಕಾದುಕುಳಿತಿದೆ. ಸ್ವತಃ ಗಣೇಶ್‌ಗೂ ಒಂದೇ ಒಂದು ಗೆಲುವಿನ ಟಾನಿಕ್ ಅಗತ್ಯವಿದೆ.

ಈ ವರ್ಷದ ಆರಂಭದಿಂದಲೂ ಬಾಕ್ಸಾಫೀಸ್ ಹಿಟ್ ಕಾಣಿಸದಿರುವುದರಿಂದ ಗಾಂಧಿನಗರದ ಜನ ಕಕ್ಕಾಬಿಕ್ಕಿಯಾಗಿದ್ದಾರೆ. ಗಾಂಧಿನಗರಿಗಳಿಗೆ ಸ್ವಲ್ಪಮಟ್ಟಿಗೆ ಸಮಾಧಾನ ನೀಡಿದ್ದು ವಿಜಯ್ ನಟಿಸಿದ 'ಜಂಗ್ಲಿ' ಮತ್ತು 'ತಾಕತ್' ಚಿತ್ರಗಳು ಹಾಗೂ ದಿಗಂತ್ ನಟಿಸಿದ 'ಮನಸಾರೆ' ಚಿತ್ರ. ಅಂದರೆ ನಿರ್ದೇಶಕನ ದೃಷ್ಟಿಕೋನದಿಂದ ನೋಡಿದರೆ ಯೋಗರಾಜ್ ಭಟ್, ಸೂರಿ ಗೆದ್ದಿದ್ದಾರೆ. ಹಿಂದೊಮ್ಮೆ ಇದೇ ಭಟ್-ಸೂರಿ ಬಳಗದಲ್ಲಿದ್ದ ಪ್ರೀತಮ್ ಗುಬ್ಬಿಯೂ ಆ ಸಾಲಿಗೆ ಸೇರುತ್ತಾರೋ ಇಲ್ಲವೋ ನೋಡಬೇಕು. ಒಟ್ಟಾರೆಯಾಗಿ ಹೊಸ ಹುಡುಗರ-ನಿರ್ದೇಶಕರ ಪ್ರಯತ್ನ ಫಲಕಾರಿಯಾಗುತ್ತಿದೆ.

● ಶೆಣೈ

ದಿನೇಶನ 'ಗಾಂಧಿ' ಟೋಪಿ

ವಂಚನೆಗೇ ಹೆಸರಾದ ನಿರ್ಮಾಪಕ ದಿನೇಶ್ ಗಾಂಧಿ ಕಡೆಗೂ ಕಾನೂನಿನ ಕೈಗೆ ಸಿಕ್ಕುಬಿದ್ದಿದ್ದಾನೆ.

ಸುದೀಪ್ ನಟಿಸಿ ನಿರ್ದೇಶಿಸಿದ್ದ 'ವೀರಮದಕರಿ' ಚಿತ್ರವನ್ನು ನಿರ್ಮಿಸಿದ್ದ ದಿನೇಶ್ ಗಾಂಧಿಯ ಜಾತಕವನ್ನು 'ಲಂಕೇಶ್' ಈ ಹಿಂದೆಯೇ ತೆರೆದಿಟ್ಟಿತ್ತು. ಕಷ್ಟದಲ್ಲಿ ಸಿಲುಕಿದ್ದ ದಿನೇಶ್ ಗಾಂಧಿಯನ್ನು ಮೇಲೆತ್ತುವ ಉದ್ದೇಶದಿಂದ ಆತನಿಗೆ ಸಹಾಯ ಮಾಡಲು ಹೋಗಿ ಸುದೀಪ್ ಹಾನಿಗೊಳಗಾಗಿದ್ದರು.

'ವೀರಮದಕರಿ' ಬಿಡುಗಡೆಯ ನಂತರ ಕೋಟಿಗಟ್ಟಲೆ ಹಣ ಬಾಚಿದ ದಿನೇಶ್ ಗಾಂಧಿ ಸುದೀಪ್‌ಗೆ ನಿರ್ದೇಶನ ಮತ್ತು ನಟನೆಗಾಗಿ ನೀಡಬೇಕಿದ್ದ ಒಂದು ಕೋಟಿ ರೂಪಾಯಿಗಳಿಗೆ ಉಂಡೆ ನಾಮ ತಿಕ್ಕಿದ್ದ. ಅಷ್ಟು ಸಾಲದೆಂಬಂತೆ ಸುದೀಪ್‌ರಿಂದಲೇ ಶ್ಯೂರಿಟಿ ಪಡೆದು ಸೌಂದರ್ಯ ಜಗದೀಶ್ ಮತ್ತು ನಿರ್ಮಾಪಕ ಆರ್.ಎಸ್. ಗೌಡರ ಬಳಿ ಹತ್ತುಲಕ್ಷ ಸಾಲ ಮಾಡಿ, ಆ ಸಾಲವನ್ನೂ ಪಾವತಿಸದೇ ಕಡೆಗೆ ಅದೂ ಸಹ ಸುದೀಪ್‌ರ ಕುತ್ತಿಗೆಗೇ ಬರುವಂತೆ ಮಾಡಿದ್ದ.



'ವೀರಮದಕರಿ' ಚಿತ್ರಕ್ಕಾಗಿ ದುಡಿದ ಕಲಾನಿರ್ದೇಶಕ ಅರುಣ್ ಸಾಗರ್, ಛಾಯಾಗ್ರಾಹಕ ವೆಂಕಟ್, ಸಹನಿರ್ದೇಶಕ ಸುರೇಶ್ ರಾಜ್ ಸೇರಿದಂತೆ ಪೋಷಕ ಪಾತ್ರ ಮಾಡಿದ ದಿವಾಕರ್ ಎಂಬ ಬಡಪಾಯಿ ನಟನ ತನಕ ಯಾವೊಬ್ಬ ತಂತ್ರಜ್ಞನಿಗೂ, ಕಲಾವಿದರಿಗೂ ದಿನೇಶ್ ಗಾಂಧಿ ಒಂದನೇ ಒಂದು ಗಾಂಧಿ ಅಜ್ಜನಿರುವ ನೋಟನ್ನು ಸಂಭಾವನೆಯಾಗಿ ನೀಡದೆ ಎಲ್ಲರಿಗೂ ಪೋಸ್ಟ್ ಡೇಟೆಡ್ ಚೆಕ್‌ಗಳನ್ನು ನೀಡಿ ವಂಚಿಸಿದ್ದ.

ಹೀಗೆ ಕಷ್ಟಪಟ್ಟು ದುಡಿದವರ ಹೊಟ್ಟೆ ಸಂಕಟವೋ ಅಥವಾ ಅವರ ಶಾಪವೋ ದಿನೇಶ್ ಗಾಂಧಿ ಕೊನೆಗೂ ವಂಚನೆ ಕೇಸೊಂದರಲ್ಲಿ ಸಿಕ್ಕಿಕೊಂಡಿದ್ದಾನೆ. ಹಿಂದೆಂದೋ ರವಿ ಎಂಬ ಫೈನಾನ್ಷಿಯರ್‌ನಿಂದ ದಿನೇಶ್ ಗಾಂಧಿ ನಾಲ್ಕು ಲಕ್ಷ ರೂಪಾಯಿ ಪಡೆದು ಅದನ್ನು ಮರುಪಾವತಿಸಿರಲಿಲ್ಲವಂತೆ. ಹೀಗಾಗಿ ರವಿಗೆ ನೀಡಿದ್ದ ಚೆಕ್ ಬೌನ್ಸ್ ಆಗಿದೆ. ಸದ್ಯ ದಿನೇಶ್ ಗಾಂಧಿ ಮೇಲೆ ನ್ಯಾಯಾಲಯ ನಾನ್‌ಬೈಲಬಲ್ ವಾರೆಂಟ್ (ಎನ್‌ಬಿಡಬ್ಲ್ಯೂ) ಹೊರಡಿಸಿದೆ. ನ್ಯಾಯಾಲಯದ ಆದೇಶದ ಮೇರೆಗೆ ಸಂಜಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನಾಗರಾಜ್ ಮತ್ತವರ ಸಿಬ್ಬಂದಿ ದಿನೇಶ್ ಗಾಂಧಿಯನ್ನು ಕರೆದೊಯ್ದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ಇತ್ತ ದಿನೇಶ್ ಗಾಂಧಿ ಚೆಕ್‌ಬೌನ್ಸ್ ಪ್ರಕರಣಕ್ಕೆ ಸಿಲುಕುತ್ತಿದ್ದಂತೆ, ಅತ್ತ ರವಿಚಂದ್ರನ್ ಮನಸ್ಸು ಪುಕಪುಕ ಎನ್ನತೊಡಗಿದೆ. ಸದ್ಯ ದಿನೇಶ್ ಗಾಂಧಿ ನಿರ್ಮಾಣದ 'ಹೂ' ಚಿತ್ರವನ್ನು ರವಿಚಂದ್ರನ್ ಅವರೇ ನಿರ್ದೇಶಿಸಿ ನಟಿಸುತ್ತಿದ್ದಾರೆ. 'ಹೂ' ನಿರ್ಮಾಣಕ್ಕಾಗಿ ರವಿಚಂದ್ರನ್ ದಿನೇಶ್ ಗಾಂಧಿಯಿಂದ ಐದು ಕೋಟಿ ರೂಪಾಯಿಗಳ ಪ್ಯಾಕೇಜ್‌ಗೆ ಒಪ್ಪಿದ್ದರು. ಆದರೆ ಈವರೆಗೆ ರವಿಚಂದ್ರನ್ ಕೈಗೆ ತಲುಪಿರುವುದು ಎರಡೂವರೆ ಕೋಟಿ ಮಾತ್ರ. ಅದನ್ನು ನಮಿತಾಳ ಕಾಲ್‌ಶೀಟ್‌ಗೆ 35 ಲಕ್ಷ, ಮೀರಾ ಜಾಸ್ಮಿನ್ ಸಂಭಾವನೆ 30 ಲಕ್ಷ ಮತ್ತು ಇನ್ನಿತರ ನಿರ್ಮಾಣ ವೆಚ್ಚಕ್ಕಾಗಿ ರವಿಚಂದ್ರನ್ ವ್ಯಯಿಸಿಬಿಟ್ಟಿದ್ದಾರೆ. ಒಂದು ವೇಳೆ ಈ ಚಿತ್ರ ನಿಂತು ಹೋದರೆ ಈಗಾಗಲೇ 17 ಕೋಟಿ ರೂಪಾಯಿಗಳ ದೊಡ್ಡ ಮಟ್ಟದ ಸಾಲಗಾರನಾಗಿರುವ ರವಿಚಂದ್ರನ್ ಮತ್ತಷ್ಟು ತೊಂದರೆಗೀಡಾಗುವುದರಿಂದ ಸ್ವತಃ ರವಿಚಂದ್ರನ್ ಆತಂಕಕ್ಕೊಳಗಾಗಿದ್ದಾರೆ.

ವಿಚಿತ್ರವೆಂದರೆ ಝೀ ಟಿವಿ ಕನ್ನಡ ವಾಹಿನಿಯವರು ಕೂಡಾ 'ಹೂ' ಚಿತ್ರದ ಚಾನೆಲ್ ರೈಟ್ಸ್‌ಗಾಗಿ ಒಂದು ಕೋಟಿ ರೂಪಾಯಿಗಳ ಅಡ್ವಾನ್ಸ್ ನೀಡಿಬಿಟ್ಟಿದ್ದಾರೆ.

ಈಗಾಗಲೇ ಗಾಂಧಿನಗರದಲ್ಲಿ ಹೆಸರು ಕೆಡಿಸಿಕೊಂಡಿರುವ ದಿನೇಶ್ ಗಾಂಧಿ ವಿರುದ್ಧ ಫೈನಾನ್ಷಿಯರ್ ರವಿ ದಾಖಲಿಸಿರುವ ಕೇಸು ವಾಪಸ್ ಪಡೆಯಲಿಲ್ಲವೆಂದರೆ, ಉಳಿದ ಯಾರೂ ಗಾಂಧಿಗೆ ಸಾಲ ಕೊಡಲು ಮುಂದೆ ಬರುವುದಿಲ್ಲ. ನಿರ್ಮಾಪಕರ ಸಂಘದ ಉಮೇಶ್ ಬಣಕಾರ್, ಎನ್.ಎಂ. ಸುರೇಶ್ ಮುಂತಾದವರ ಮಧ್ಯಸ್ಥಿಕೆಯಲ್ಲಿ ದಿನೇಶ್ ಗಾಂಧಿ ಮತ್ತು ರವಿ ಮಧ್ಯೆ ರಾಜಿ ಕಬೂಲಿ ನಡೆದು ಕೇಸ್ ಹಿಂಪಡೆಯುವ ಪ್ರಕ್ರಿಯೆ ನಡೆಯಿತಾದರೂ ದಿನೇಶ್ ಗಾಂಧಿಯ ಭಂಡತನದಿಂದ ಅದೂ ವಿಫಲವಾಗಿದೆ. "ರವಿಗೆ ನಾನು ಯಾವ ಸಾಲವನ್ನೂ ಕೊಡಬೇಕಿಲ್ಲ, ಒಂದು ಪೈಸೆಯನ್ನೂ ಕೊಡಲ್ಲ. ಏನು ಮಾಡ್ತಾನೋ ಮಾಡಿಕೊಳ್ಳಲಿ" ಎಂದು ಗಾಂಧಿ ಉಲ್ಟಾ ಹೊಡೆಯುತ್ತಿದ್ದಾನೆ. "ವಂಚಿಸುವುದನ್ನೇ ಕಾಯಕವನ್ನಾಗಿಸಿಕೊಂಡಿರುವ ದಿನೇಶ್ ಗಾಂಧಿಯಂಥ ಮನುಷ್ಯನನ್ನು ಕಟ್ಟಿಕೊಂಡು ರಾಜಿ-ಸಂಧಾನಕ್ಕೆ ಮುಂದಾಗುವುದು ವ್ಯರ್ಥ" ಎಂದು ನಿರ್ಮಾಪಕ ಸಂಘದವರೂ ತೆಪ್ಪಗಾಗಿದ್ದಾರೆ.

ಇಂಥ ವಂಚಕ ದಿನೇಶ್ ಗಾಂಧಿಯನ್ನು ನಂಬಿ ಕ್ರೇಜಿಸ್ಟಾರ್ ರವಿಚಂದ್ರನ್‌ರಂಥವರೂ ದಿಗಿಲು ಪಡಬೇಕಾಗಿ ಬಂದಿರುವುದೇ ಶೋಚನೀಯ ಸಂಗತಿ.

● ಅರುಣ್.ಜಿ

ಶಂಕರ್‌ಗೆ ಅರ್ಪಣೆ

'ಅರಮನೆ' ಚಿತ್ರದ ಮೂಲಕ ನಿರ್ದೇಶಕನಾಗಿ ಕಾಲಿಟ್ಟ ನಾಗಶೇಖರ್ ಈಗ ಮತ್ತೊಂದು ಚಿತ್ರ ನಿರ್ದೇಶಿಸಲು ಹೊರಟಿದ್ದಾರೆ. ಚಿತ್ರದ ಹೆಸರು 'ಸಂಜು ವೆಡ್ಸ್ ಗೀತಾ'.

ಈ ಚಿತ್ರಕ್ಕಾಗಿ ಮಹಾರಾಣೀಸ್ ಕಾಲೇಜ್ ಮತ್ತು ಅದರ ಎದುರಿಗಿದ್ದ ಸೆಂಟ್ರಲ್ ಜೈಲ್‌ಅನ್ನು ಮನಸ್ಸಿನಲ್ಲಿಟ್ಟುಕೊಂಡು ನಾಗಶೇಖರ್ ಕಥೆ-ಚಿತ್ರಕಥೆ ಬರೆದಿದ್ದರು. ಆದರೆ ಅವರ ದುರಾದೃಷ್ಟ ಈಗ ಸೆಂಟ್ರಲ್ ಜೈಲಿದ್ದ ಸ್ಥಳದಲ್ಲಿ ಫ್ರೀಡಂ ಪಾರ್ಕ್ ತಲೆಯತ್ತಿದೆ. ಹಾಗಂತ ನಾಗಶೇಖರ್ ಕಥೆಯನ್ನು ಬದಲಾಯಿಸಲಿಲ್ಲ. ಬದಲಿಗೆ ಕಂಠೀರವ ಸ್ಟುಡಿಯೋದಲ್ಲೇ ಸೆಂಟ್ರಲ್ ಜೈಲ್ ಸೆಟ್‌ಅನ್ನು ಸುಮಾರು 40 ಲಕ್ಷ ರೂ. ವೆಚ್ಚದಲ್ಲಿ ಹಾಕಲು ಹೊರಟಿದ್ದಾರೆ. ಒಬ್ಬ ನಿರ್ದೇಶಕನ ಕಮಿಟ್‌ಮೆಂಟ್ ಮತ್ತು ಕಥೆಯನ್ನು ಪ್ರೀತಿಸುವ ರೀತಿ ಹೀಗಿದ್ದರೆ ಮಾತ್ರ ಒಂದು ಒಳ್ಳೆಯ ಸಿನಿಮಾ ರೂಪುಗೊಳ್ಳಲು ಸಾಧ್ಯ. ಈ ಚಿತ್ರವನ್ನು ನಾಗಶೇಖರ್ ತನ್ನ ಮೆಚ್ಚಿನ ನಟ ಶಂಕರ್‌ನಾಗ್‌ಗೆ ಅರ್ಪಿಸಲು ಹೊರಟಿದ್ದಾರೆ. ಮುಂದಿನ ವರ್ಷ ಶಂಕರ್‌ನಾಗ್ ರಸ್ತೆ ಅಪಘಾತದಲ್ಲಿ ನಿಧನ ಹೊಂದಿ 20 ವರ್ಷಗಳು ಸಂದುಹೋಗಲಿವೆ. ಆ ಮಹಾನ್ ನಟನ ನೆನಪಿಗಾಗಿ ಈ ಚಿತ್ರ ತರಗ ನೀಡುವ ಉತ್ಸಾಹದಲ್ಲಿದ್ದಾರೆ ನಾಗಶೇಖರ್. ಹೀಗಾಗಿ ಶಂಕರ್ ಹಾಡಿನ ಕೆಲವು ತುಣುಕುಗಳು ಅಲ್ಲಲ್ಲಿ ಕಾಣಿಸಲಿವೆಯಂತೆ.



Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 04-11-2009 RNI No. KARKAN2005/146


'ಗಿಲ್ಲಿ' ಗಿಲಕ್ ಜಗ್ಗಿ ಝುಲಕ್



ನವರಸನಾಯಕ ಜಗ್ಗೇಶ್ ಈಗ ಚಿತ್ರರಂಗದಲ್ಲಿ ಅತ್ಯಂತ ಸಂತುಷ್ಟದ ವ್ಯಕ್ತಿ ಎಂದರೆ ತಪ್ಪಾಗಲಾರದು. ಈತ ನಟಿಸಿದ 'ಎದ್ದೇಳು ಮಂಜುನಾಥ'. ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆದ್ದಿದ್ದು ಇದಕ್ಕೆ ಕಾರಣವಲ್ಲ. ಜಗ್ಗೇಶ್ ಮಗ ಗುರುರಾಜ್ ನಾಯಕನಟನಾಗಿ ನಟಿಸಿದ 'ಗಿಲ್ಲಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸದಿದ್ದರೂ ನಿಧಾನವಾಗಿ ಗೆಲುವಿನತ್ತ ಸಾಗುತ್ತಿರುವುದೇ ಜಗ್ಗೇಶ್ ಸಂತೋಷಕ್ಕೆ ಕಾರಣ.

25 ವರ್ಷಗಳ ಕಾಲ ಚಿತ್ರರಂಗದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಜಗ್ಗೇಶ್ ರಾಜಕೀಯಕ್ಕೆ ಕಾಲಿಟ್ಟು ಒಂದು ರೀತಿಯಲ್ಲಿ ನಿವೃತ್ತಿಯನ್ನು ಘೋಷಿಸಿದ್ದರು. ಇಂತಹ ಸಂದರ್ಭದಲ್ಲಿ ಆತನ ಮಗ ಚಿತ್ರರಂಗಕ್ಕೆ ನಟನಾಗಿ ಬರುತ್ತಿರುವುದು ಒಂದು ಕಾಕತಾಳೀಯ. ಕನ್ನಡ ಚಿತ್ರರಂಗದ ಬಹುತೇಕ ನಾಯಕನಟರು ಒಂದಲ್ಲ ಒಂದು ಹಂತದಲ್ಲಿ ತಮ್ಮ ಮಕ್ಕಳನ್ನು ನಾಯಕರನ್ನಾಗಿ ಮಾಡುತ್ತಿರುವುದು ಒಂದು ಹೊಸ ಟ್ರೆಂಡ್. ಈ ವಿಷಯದಲ್ಲಿ ಕೆಲವು ಅಪ್ಪಂದಿರು ಯಶಸ್ಸು ಕಂಡರೆ ಮತ್ತೆ ಕೆಲವು ಅಪ್ಪಂದಿರು ಸನ್‌ಸ್ಟ್ರೋಕ್‌ಗೆ ಒಳಗಾಗಿದ್ದಾರೆ. ಈ ನಿಟ್ಟಿನಲ್ಲಿ ಜಗ್ಗೇಶ್ ಮೊದಲ ವರ್ಗಕ್ಕೆ ಸೇರಿದವರಾಗಿದ್ದು ಹೂನಗೆಯನ್ನು ಬೀರುತ್ತಿದ್ದಾರೆ. "ಸದ್ಯ ಎಸ್.ನಾರಾಯಣ್ ಮತ್ತು ರಾಜೇಂದ್ರಸಿಂಗ್ ಬಾಬು ತರಹ ಜಗ್ಗೇಶ್ ಪುತ್ರವ್ಯಾಮೋಹಕ್ಕೆ ಬಲಿಯಾಗಲಿಲ್ಲವಲ್ಲ" ಎಂದು ಜಗ್ಗೇಶ್ ಹಿತೈಷಿಗಳು ಸಂತಸ ವ್ಯಕ್ತಪಡಿಸುತ್ತಿದ್ದಾರೆ.

ಜಗ್ಗೇಶ್ ಮಗ ಗುರುರಾಜ್ ಬಗ್ಗೆ ಹೇಳುವುದಾದರೆ ಈತ ಮೊದಲ ಬಾರಿಗೆ ಯಾವುದೇ ಅಳುಕಿಲ್ಲದೇ ಕ್ಯಾಮೆರಾ ಎದುರಿಸಿದ್ದಾನೆ. ಫೈಟಿಂಗ್ ದೃಶ್ಯಗಳಲ್ಲೂ ಲೀಲಾಜಾಲವಾಗಿ ಕಾಣಿಸಿಕೊಂಡಿದ್ದಾನೆ, ಆದರೆ ನಟನೆಯಲ್ಲಿ ಇನ್ನಷ್ಟು ಪಳಗಬೇಕಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ತಂದೆಗೆ ತಕ್ಕ ಮಗ ಅನಿಸಬೇಕಾದರೆ ಗುರುರಾಜ್ ಸಾಗಬೇಕಾದ ಹಾದಿ ಇನ್ನೂ ದೂರವಿದೆ. ಏಕೆಂದರೆ ಜಗ್ಗೇಶ್ ಕನ್ನಡ ಚಿತ್ರರಂಗ ಕಂಡ ಅತ್ಯುತ್ತಮ ನಟರಲ್ಲೊಬ್ಬರು. ಅವರ ಡೈಲಾಗ್ ಶೈಲಿ, ಮ್ಯಾನರಿಸಂ ಇವುಗಳೆಲ್ಲವೂ ಆರಂಭದಿಂದಲೂ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದವು. ಅಂತಹ ವಿಶೇಷವಾದ ಗುಣಲಕ್ಷಣಗಳು ಗುರುರಾಜ್ ನಟನೆಯಲ್ಲಿ ಕಾಣಿಸದಿದ್ದರೂ 'ಗಿಲ್ಲಿ'ಯಲ್ಲಿ ನಟನೆಗೆ ಮೋಸ ಮಾಡಿಲ್ಲ. ಈಗ ಮಗನ ಚಿತ್ರ ಗೆದ್ದಿದ್ದು ನೋಡಿ ಅಪ್ಪ ಜಗ್ಗೇಶ್ ಮೀಸೆ ಮೇಲೆ ಕೈ ಇಟ್ಟು ಸಂತೋಷದಿಂದ ಬೀಗುತ್ತಿದ್ದಾರೆ.



ಕೃಷ್ಣನ್ ಲವ್‌ಸ್ಟೋರಿ
ಅಜಯ್
ರಾಧಿಕಾಪಂಡಿತ್



ಹದಿನಾರರ ಹಕೀಕತ್ತು!

● ಅರುಣ್



ನಿರ್ಮಾಪಕ ಮುನಿರತ್ನ ಮತ್ತು ಗೋಲ್ಡನ್ ಸ್ಟಾರ್ ಗಣೇಶ್ ನಡುವೆ ಸಣ್ಣದೊಂದು ಕಾಳಗ ಆರಂಭವಾಗಿದೆ.

ಅದು '16ನೇ ವಯಸ್ಸಿಗೆ' ಸಂಬಂಧಿಸಿದಂತೆ!

ಸುಮಾರು ಮೂವತ್ತೆರಡು ವರ್ಷಗಳ ಹಿಂದೆ ತಮಿಳಿನಲ್ಲಿ ಕಮಲ ಹಾಸನ್ ಮತ್ತು ರಜನೀಕಾಂತ್ ನಟಿಸಿದ್ದ 'ಪದಿನಾರು ವಯದಿನಿಲೆ' ಎಂಬ ಚಿತ್ರವೊಂದು ನಿರ್ಮಾಣವಾಗಿ ಸೂಪರ್ ಹಿಟ್ ಆಗಿತ್ತು. ತಮಿಳಿನ ಖ್ಯಾತ ನಿರ್ದೇಶಕ ಭಾರತೀರಾಜಾ ನಿರ್ದೇಶನದ ಮೊದಲ ಚಿತ್ರವಿದು. ರಜನಿಕಾಂತ್ ಮತ್ತು ಕಮಲ ಹಾಸನ್ ಜೊತೆ ಈ ಚಿತ್ರದಲ್ಲಿ ಮೊದಲ ಬಾರಿಗೆ ಶ್ರೀದೇವಿ ನಾಯಕಿಯಾಗಿ ಅಭಿನಯಿಸಿದ್ದರು. ಈ ಚಿತ್ರ ಬಂದ ನಂತರವೇ ರಜನಿಕಾಂತ್ ಮತ್ತು ಶ್ರೀದೇವಿಗೆ ಸ್ಟಾರ್ ವ್ಯಾಲ್ಯೂ ದೊರಕಿದ್ದು. ಕಮಲ್ ಈ ಚಿತ್ರದಲ್ಲಿ ಬುದ್ಧಿಮಾಂದ್ಯನ ಪಾತ್ರದಲ್ಲಿ ಅದ್ಭುತವಾಗಿ ನಟಿಸಿದ್ದರು. ನಂತರ ಈ ಚಿತ್ರ ಹಿಂದಿಯಲ್ಲಿ ಅಮೂಲ್ ಪಾಲೇಕರ್ ನಟನೆಯಲ್ಲಿ 'ಸೋಲ್ವ ಸಾವನ್' ಆಗಿ ಹಾಗೂ ತೆಲುಗಿನಲ್ಲಿ 'ಪದಿರೇಳ್ಳ ವಯಸ್ಸು' ಎಂದು ನಿರ್ಮಾಣಗೊಂಡಿತ್ತು. ತೆಲುಗಿನಲ್ಲಿ ಚಂದ್ರಮೋಹನ್ ನಾಯಕನಾಗಿ ನಟಿಸಿದ್ದರು. ಹದಿನಾರನೇ ವಯಸ್ಸಿನಲ್ಲಿ ಹೆಣ್ಣಿನ ಮನಸ್ಸಿನಲ್ಲಾಗುವ ಮಾನಸಿಕ ಬದಲಾವಣೆಗಳು, ಹೆಣ್ಣು-ಗಂಡಿನ ಆಕರ್ಷಣೆಗಳ ಕುರಿತಾದ ಸಣ್ಣ ಸಣ್ಣ ಸೂಕ್ಷ್ಮಗಳನ್ನು ಒಳಗೊಂಡ ಚಿತ್ರ ಅದಾಗಿತ್ತು. ತಮಿಳು, ತೆಲುಗು ಮತ್ತು ಹಿಂದಿ ಈ ಮೂರೂ ಭಾಷೆಗಳಲ್ಲೂ ಶ್ರೀದೇವಿಯೇ ನಾಯಕಿಯಾಗಿ ನಟಿಸಿದ್ದಳು.



ಮೂರು ದಶಕಗಳ ಹಿಂದೆ ಮೈಲಿಗಲ್ಲು ಸೃಷ್ಟಿಸಿದ್ದ ಈ ಚಿತ್ರದ ರಿಮೇಕ್ ಹಕ್ಕನ್ನು ನಿರ್ಮಾಪಕ ಮುನಿರತ್ನ ಬಹಳ ಹಿಂದೆಯೇ ಪಡೆದಿದ್ದರಂತೆ. ಆದರೆ ಮೊನ್ನೆ ಗಣೇಶ್ ಪತ್ನಿ ಶಿಲ್ಪಾ "ಪದಿನಾರು ವಯದಿನಿಲೆ ಹಕ್ಕು ನಮಗೆ ಸೇರಿದೆ" ಎಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದಾರೆ. "ನಾನು ನಾಲ್ಕು ತಿಂಗಳ ಹಿಂದೆಯೇ ಈ ಚಿತ್ರದ ಹಕ್ಕನ್ನು ಗುರುದತ್ ಅವರಿಂದ ಪಡೆದಿದ್ದೇನೆ. ಇದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳೂ ನನ್ನ ಬಳಿ ಇವೆ" ಎಂದು ಗಣೇಶ್ ಕೂಡ ಹೇಳಿಕೆ ನೀಡಿದ್ದಾರೆ.



ಗಣೇಶ್ ಮತ್ತು ಆತನ ಪತ್ನಿ ಇದ್ದಕ್ಕಿದ್ದಂತೆ ಜಾಹೀರಾತು ನೀಡಿ 'ಹಕ್ಕು ನಮ್ಮದು' ಎಂದು ಘೋಷಿಸಿರುವುದರಿಂದ ವ್ಯಗ್ರಗೊಂಡಿರುವ ಮುನಿರತ್ನ ಈಗ ಚೇಂಬರ್ ಮೆಟ್ಟಿಲೇರಿದ್ದಾರೆ. ಯಾಕೆಂದರೆ ಈ ಚಿತ್ರವನ್ನು 'ನೆನಪಿರಲಿ' ಪ್ರೇಮ್ ಮತ್ತು 'ದುನಿಯಾ' ವಿಜಯ್ ಕಾಂಬಿನೇಷನ್‌ನಲ್ಲಿ ತಯಾರಿಸಲು ಮುನಿರತ್ನ ಎಲ್ಲ ರೀತಿಯ ಸಿದ್ಧತೆಯನ್ನು ಮಾಡಿಮುಗಿಸಿದ್ದಾರಂತೆ.



ಈ ಚಿತ್ರದ ರಿಮೇಕ್ ಹಕ್ಕು ಯಾರ ಬಳಿ ಇದೆಯೋ? ಇಲ್ಲವೋ? ಆದರೆ 'ಪದಿನಾರು ವಯದಿನಿಲೆ' ಎಂಬ ಸಿನಿಮಾವನ್ನು ರಿಮೇಕ್ ಮಾಡುವುದು ಅಷ್ಟು ಸುಲಭದ ವಿಚಾರವಲ್ಲ. ಇಮೇಜ್‌ಗೆ ಗಂಟುಬಿದ್ದಿರುವ ಯಾವ ನಾಯಕನಟನಿಂದಲೂ ಕಮಲ್ ನಿರ್ವಹಿಸಿದ ಪಾತ್ರವನ್ನು ನಿಭಾಯಿಸಲು ಸಾಧ್ಯವಿಲ್ಲ. ಯಾಕೆಂದರೆ, ಈ ಚಿತ್ರದ ಎಷ್ಟೋ ದೃಶ್ಯಗಳಲ್ಲಿ ಕಮಲ್ ಮೈಮೇಲೆ ಒಂದು ಸಣ್ಣ ಬಟ್ಟೆಯನ್ನೂ ತೊಡದೆ ಕೇವಲ ಲಂಗೋಟಿಯಲ್ಲೇ ನಟಿಸಿದ್ದರು. ಪ್ರೀತಿಗಾಗಿ ಹಂಬಲಿಸುವ, ವಿಕಲಚೇತನನ ಪಾತ್ರದಲ್ಲಿ ಕಮಲ್ ಕಾಣಿಸಿಕೊಂಡಿದ್ದ ಬಗೆಯೇ ರೋಚಕವಾಗಿತ್ತು. ಗಣೇಶ್‌ರಂಥ ರೊಮ್ಯಾಂಟಿಕ್ ಹೀರೋ ಈ ಚಿತ್ರದಲ್ಲಿ ನಟಿಸುವ ಆಸೆಗೆ ಬಿದ್ದು, ತಮಗೆ ಬೇಕಾದ ರೀತಿಯಲ್ಲಿ ಆ ಕಥೆ ಮತ್ತು ಅಲ್ಲಿನ ಮೂಲ ಪಾತ್ರಗಳ ವೇಷಣೆಯನ್ನು ಬದಲಿಸಿಕೊಂಡುಬಿಟ್ಟರೆ ಚಿತ್ರ ಸತ್ವ ಕಳೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಹಾಗೆ ನೋಡಿದರೆ ತಮ್ಮ ನಿರ್ಮಾಣದ ಚಿತ್ರಗಳಲ್ಲಿ ಯಾವುದೇ ಕಾಂಪ್ರೊಮೈಸ್ ಮಾಡಿಕೊಳ್ಳದೆ ಸಿನಿಮಾ ಮಾಡುವ ಮುನಿರತ್ನರಂಥ ನಿರ್ಮಾಪಕರಿಂದ ಮಾತ್ರ 'ಪದಿನಾರು ವಯದಿನಿಲೆ' ಎಂಬ ಚಿತ್ರವನ್ನು ನಿರ್ಮಿಸಲು ಸಾಧ್ಯ. ಹಿಂದೆ ಇದೇ ಮುನಿರತ್ನ 'ರಕ್ತಕಣ್ಣೀರು' ಚಿತ್ರವನ್ನು ನಿರ್ಮಿಸಿದ್ದರು. ಆಗ ಉಪೇಂದ್ರ ಕುಷ್ಠರೋಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕಾಯಿತು. ಐವತ್ತು ವರ್ಷಗಳ ಹಿಂದೆ ತಮಿಳಿನಲ್ಲಿ 'ರಕ್ತಕಣ್ಣೀರು' ಬಂದಾಗ ಕುಷ್ಠರೋಗ ಗುಣಪಡಿಸಲಾರದಂಥ ರೋಗವಾಗಿತ್ತು. ಆದರೆ 'ಈಗ ಕುಷ್ಠರೋಗ ಕ್ಯೂರಬಲ್ ಡಿಸೀಸ್', 'ಆ ರೋಗವನ್ನು ಮಾರಣಾಂತಿಕ ರೋಗದಂತೆ ತೋರಿಸುವುದು ಸರಿಯಲ್ಲ' ಎಂದು ಬಹಳಷ್ಟು ಜನ ಉಪ್ಪಿ ಕುಷ್ಠರೋಗಿಯಾಗಿ ಕಾಣಿಸಿಕೊಳ್ಳುವುದನ್ನು ವಿರೋಧಿಸಿದ್ದರು. ಆದರೆ ಇವತ್ತಿಗೆ ತಕ್ಕಂತೆ ಅದನ್ನು ಬದಲಿಸಿದರೆ ಮೂಲ ಚಿತ್ರದಲ್ಲಿನ ಆಶಯಗಳು ಸತ್ತುಹೋಗುತ್ತವೆ ಎಂಬ ಕಾರಣಕ್ಕೆ ಮುನಿರತ್ನ ಹಠ ಹಿಡಿದು ಉಪ್ಪಿಯನ್ನು ರೋಗಿಷ್ಟನ ಪಾತ್ರದಲ್ಲಿ ತೋರಿಸಿದ್ದರು. ಆ ನಂತರ ಬಂದ 'ಅನಾಥರು' ಚಿತ್ರದಲ್ಲಿ ದರ್ಶನ್ ಸತ್ತಾಗ, ಆತನ ಮೇಲೆ ನೊಣಗಳು ಬಂದು ಕೂರುವ ದೃಶ್ಯವೊಂದಿತ್ತು. ಈ ಒಂದೇ ಒಂದು ಶಾಟ್‌ಗಾಗಿ ಎರಡು ದಿನ ಕಾದು, ನೊಣಗಳು ಬಂದು ದರ್ಶನ್ ಮೇಲೆ ಕೂತ ನಂತರವೇ ಚಿತ್ರೀಕರಣ ಮುಕ್ತಾಯವಾಗಿದ್ದು. ನಿರ್ಮಾಣದ ವಿಚಾರದಲ್ಲಿ ಆ ಮಟ್ಟದ ಬದ್ಧತೆ ಮುನಿರತ್ನ ಅವರದ್ದು.

ಹೀಗಾಗಿ ಈ ಚಿತ್ರವನ್ನು ಮುನಿರತ್ನರೇ ನಿರ್ಮಿಸಿದರೆ ಒಳ್ಳೆಯದು ಎಂಬ ಅಭಿಪ್ರಾಯ ಚಿತ್ರರಂಗದ ಬಹಳಷ್ಟು ಜನರಿಂದ ವ್ಯಕ್ತವಾಗುತ್ತಿದೆ. ಅಂತಿಮವಾಗಿ ಈ ಚಿತ್ರದ ನಿರ್ಮಾಣ ಶಿಲ್ಪಾ ಗಣೇಶ್ ಪಾಲಾಗುತ್ತದೋ ಅಥವಾ ಮುನಿರತ್ನರ ಮಡಿಲಿಗೇ ಬಂದು ಬೀಳುತ್ತದೋ ಎಂಬುದು ಛೇಂಬರ್‌ನಲ್ಲಿ ತೀರ್ಮಾನವಾಗಬೇಕಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44